King	*Date (in A.D.)*	*No. of Inscription*
	1738	Hg. 73
	1746	Nj. 123
	1751–52 (?)	Nj. 252
	1766	Nj. 341
	1771	Nj. 237
	1774	Nj. 125
	18th century	Gu. 21, 30, 98, 110, 131, 138-45, 165–67, 177, 194, 195 Nj. 24–89, 144, 255, 304, 343, 364, 365
		Hg. 3, 85, 88
	1810	Hg. 12
	1830–31	Nj. 100
	1834	Nj. 99
	1851	Nj. 19
	1860	Gu. 87
	1861	Hg. 120
	1862	Nj. 126
	1863	Nj. 400
	18–19th century	Nj. 366, 367
	19th ceutury	Gu. 105–07, 117, 160, 161, 163, 164, 180,196, 197, 211 Nj. 7, 9, 11, 15, 20, 91, 92, 95–98, 127, 136, 279, 301, 397 Hg. 2, 6, 18, 51–54, 95, 96, 124, 125, 127–30, 132
	..	Gu. 126, 188 Nj. 165, 399 Hg. 31, 66, 147

ಶಾಸನಗಳ ಸಮೀಕೃತಪಟ್ಟಿ
SYNCHRONISED TABLE OF INSCRIPTIONS

ಗುಂಡ್ಲುಪೇಟೆ ತಾಲ್ಲೂಕು
GUNDLUPETE TALUK

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
1		30		
2				1930–19
3		27	27	
4		28		
5		29		
6–9			103–106	
10		31		
11			108	
12		32		
13			109	
14				1938–75
15			107	
16		33		
17		34		
18				1930–20
19		62	62	
20			113	
21			112	
22		63		
23				1930–21
24				1930–29
25		64		
26		67		
27		61		
28				1935–26
29				1935–27
30–32				19352–3–25
33		65		
34		66		
35–37				
38				1936–58

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
39				1938–78
40		69		
41-43		85-87		
44				1935–16
45-47		70-72		
48				1935–17
49		73		
50-52				
53				1935–18
54				1935–19
55		95		
56		93		
57		94		
58		74		
59		91		
60		92		
61			148	
62		79		
63		81		
64		80		
65				1935–20
66				1935–21
67		88		
68		89		
69		90		1935–22
70		26		
71-74		75-78		
75-78		21-24		
79				1935–29
80				1935–28
81				1935–30
82		83		
83		84		
84		82		
85		36		
86		39		
87				

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
88				
89		37		
90		38		
91		40		
92				
93				
94				1934–44
95				1934–45
96		41		
97		42		
98				
99				
100–102		18–20		
103–108				
109		15		
110				
111		16		
112		25		
113				1923–59
114		5		
115		6		1934–40
116		7		
117			120	
118			119	
119		8	8	
120		9		
121		10		
122			118	
123–125				1934–41–43
126			121	
127		17		
128		43	110	
129			111	
130		44		
131			116	
132		46		
133		45		

ಈಗಿನ ವೃತ್ತಿ Present Edition	ಎ.ಕ. III E.C. III	ಎ.ಕ. IV E.C. IV	ಎ.ಕ. XIV E.C. XIV	ಎಂ.ಎ.ಆರ್. M.A.R.
134–137		1–4		
138			122	
139				
140			123	
141			124	
142				
143				
144			125	
145				
146				
147–152			126–131	
153			114	
154				
155			115	
156		–5		
157		49		
158				1930–32
59		1		
160				1938–76
161–167			135–141	
168		11		
169			134	
170		13		
171		1		
172				
173				
174		56		
175		57		
176		47		
177		48		
178		50		
179		55		
180		53		
181		54		
182			133	
183		51		
184		52		

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. X1V *E.C. XIV*	ಎಂ.ಎ.ಆರ್. *M.A.R.*
185				
186			132	
187				1934–46
188		60		
189		99		
190–192		100–102		
193–197			142–146	
198				1930–26
199				1938–77
200				1930–22
201				1930–23
202				1930–25
203–205				
206				1934–27
207				1930–36
208				1930–37
209				1930–28
210				1930–33
211			147	
212				
213		59		
214				1930–34
215				1930–35
216				1930–30
217				
218		96		
219				1930–31
220		68		
221		97		
222		98		
223		58		
224			117	

ನಂಜನಗೂಡು ತಾಲ್ಲೂಕು
NANJANGUDU TALUK

1–4	1–4			

ಈಗಿನ ಆವೃತ್ತಿ Present Edition	ಎ.ಕ. III E.C. III	ಎ.ಕ. IV E.C. IV	ಎ.ಕ. XIV E.C. XIV	ಎಂ.ಎ.ಆರ್. M.A.R.
5			270	
6	5			
7			271	
8	6			
9			272	
10	7			
11			273	
12	8			
13			274	
14	9			
15			275	
16			276	
17–19	10–12			
20			281	
21–23			282	
24–89		200–265		
90			280	
91			290	
92			291	
93		266		
94–96			277–279	
97–103			283–289	
104–106			292–294	
107–109	13–15			
110–125				1944–20–35
126–28				1946–12–14
129	26			
130	27			1946–17
131	29			
132	28			
133–135	30–32			
136	86			
137–139	64–66			
140				1929–48
141–143	61–63			
144–147				
148–153	68–73			

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
154–156				1929–49–51
157	85			
158–160	46–48			
161	67			
162	50			
163	49			
164–168	38–42			
169	44			
170				1936–56
171	43			1936–57
172	25			
173				1946–20
174				1936–52
175				1936–53
176	45			
177				1936–54
178				1936–55
179	47			
180				1946–15
181–183	22–24			
184–188				
189				1944–36
190				1944–37
191–194	125–128			
195				1946–19
196–201	129–134			
202	136			
203	135			
204	139			
205	138			1930–40
206	140			
207	142			
208	141			
209				1930–47
210				1930–48
211				
212	198			

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
213	160, 161			
214	162			
215	164,165			1946–28
216	163			
217				1946–29
218				
219				
220–222				1945–19–21
223–231	166–174			
232				
233	176			
234	159			
235	175			
236				1930–46
237				1930–35
238				
239	155			
240	156			
241	157			1946–30
242	158			
243	21			
244	153			
245	154			
246				
247				
248				1930–38
249	143			
250	144			
251–254	146–149			
255				1930–39
256	145			
257				1930–41
258	117			
259	118			
260	121			
261				
262	122			

ಈಗಿನ ಆವೃತ್ತಿ Present Edition	ಎ.ಕ. III E.C. III	ಎ.ಕ. IV E.C. IV	ಎ.ಕ. XIV E.C. XIV	ಎಂ.ಎ.ಆರ್. M.A.R.
263				1938–44
264				
265	120			1938–45
266				1938–46
267				1938–51
268–271				1938–47–50
272	137			
273				1946–18
274	36			
275				1946–16
276	33			
277	124			
278				1927–122
279				1927–123
280				
281	123			
282–287	192–197			
288–290	178–180			
291	177			
292				
293–298	182–187			
299	181			
300	191			
301				
302	190			
303	188			
304	189			
305	115			
306	116			
307				1946–27
308	108			
309				1946–23
310				1946–22
311	109			
312				1936–45
313–315	97–99			
316–318			298-300	

ಈಗಿನ ಆವೃತ್ತಿ *Present Edition*	ಎ.ಕ. III *E.C III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
319				1928–45
320	199			
321	96			
322–324	110–112			
325–327	82–84			
328	81			
329–333	103–107			
334	102			1946–24
335	100			1946–25
336	101			1946–26
337	34			
338	35			
339				
340	92			
341	94			
342	**95**			
343	114			
344–346				1929–45–47
347	93			1946–31
348–351	51–54			
352				
353				1927–121
354–356	55–57			1936–47–49
357				. 1936–50
358				1936–46
359	58			
360–367				1946–32–39
368	80			
369				1938–43
370–372	77–79			
373				1936–51
374				
375				1941–27
376				1941–26
377	88			
378				
379	74			

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
380	87			
381	89			
382	90			
383				
384	91			
385	75			
386	76			
387	59			
388	60			
389				1940–48
390				1940–49
391				1946–21
392	113			
393	119			
394				
395	19			1936–43
396	20			1936–44
397				
398	16			
399	17			
400	18			
401			297	
402			XII 269	

ಹೆಗ್ಗಡದೇವನಕೋಟೆ ತಾಲ್ಲೂಕು
HEGGADADEVANAKOTE TALUK

1–3			124–126	
4		102		
5		103		
6				
7–9		104–106		
10			128	
11		122		
12		123		
13		120		
14		121		

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
15				
16		119		
17				1940–47
18		118		
19		117		
20		112		
21		113		
22		111		
23		116		
24–26		108–110		
27–31		5–9		
32		114		
33				
34		115		
35		96		
36		97		
37		19		
38		94		
39		95		
40			129	
41–43		89–91		
44			127	
45		92		
46		93		
47		98		
48–50		10–12		
51–54			131–134	
55–60		13–18		
61		100		
62		101		
63				1932–58
64		99		
65		46		
66		47		
67		35		
68		36		
69		20		

ಈಗಿನ ಆವೃತ್ತಿ *Present Edition*	ಎ.ಕ. III *E.C. III*	ಎ.ಕ. IV *E.C. IV*	ಎ.ಕ XIV *E.C. XIV*	ಎಂ.ಎ.ಆರ್. *M.A.R.*
70		107		
71		34		
72		33		
73–81		24–32		
82		22		
83		23		
84–88		41–45		
89				1924–111
90		4		
91–93		1–3		
94			130	
95				1938–80
96				1938–80
97		21		
98				1941–25
99		48		
100		54		
101		67		
102				
103				
104–106		68–70		
107				1941–21
108–110		75–77		
111		52		
112		53		
113		40		
114		55		
115		39		
116–118		49–51		
119		37		
120		38		
121				1941–22
122				1941–23
123		56		
124			135	
125			136	
126		57		

ಈಗಿನ ಆವೃತ್ತಿ *Present Edition*	ಎ.ಕ. III *E.C III*	ಎ.ಕ. IV *E.C. IV*	ಎ.ಕ. XIV *E.C. XIV*	ಎಂ.ಎ.ಆರ್. *M.A.R.*
127–131			137–141	
132		58		
133			142	
134–137		78–81		
138				
139		82		
140		83		
141–143		72–74		
144				
145		71		
146				1941–24
147		65		
148		66		
149			143	
150–155		59–64		
156		87		
157		88		
158		85		
159		86		
160		84		

ಪೀಠಿಕೆ

ಇದು ಪರಿಷ್ಕೃತಗೊಂಡು ಪ್ರಕಟವಾಗುತ್ತಿರುವ ಎಪಿಗ್ರಾಫಿಯ ಕರ್ನಾಟಿಕದ ೩ನೆಯ ಸಂಪುಟವಾಗಿದೆ. ರೈಸ್‌ರವರು ೩ ಹಾಗೂ ೪ನೆಯ ಸಂಪುಟಗಳಲ್ಲಿ ಇಂದಿನ ಮಂಡ್ಯಜಿಲ್ಲೆಯನ್ನೊಳಗೊಂಡಂತೆ ಅಂದಿನ ಮೈಸೂರು ಜಿಲ್ಲೆಯ ೧೭೬೫ ಶಾಸನಗಳನ್ನು ಕ್ರಮವಾಗಿ ೧೮೯೪ ಹಾಗೂ ೧೮೯೮ರಲ್ಲಿ ಪ್ರಕಟಿಸಿದ್ದರು. ಅಲ್ಲಿಂದೀಚೆಗೆ ಶ್ರೀ ಆರ್. ನರಸಿಂಹಾಚಾರ್, ಡಾ. ಶಾಮಾಶಾಸ್ತ್ರಿ ಮತ್ತು ಡಾ. ಎಂ. ಎಚ್. ಕೃಷ್ಣರವರು ರೈಸ್‌ರವರು ಆಗಲೇ ಪ್ರಕಟಿಸಿದ್ದ ಕೆಲವು ಶಾಸನಗಳನ್ನು ಪರಿಷ್ಕರಿಸಿದುದಲ್ಲದೆ ಅನೇಕ ಹೊಸ ಶಾಸನಗಳನ್ನು ಸಂಗ್ರಹಿಸಿ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-೧೪ ಮತ್ತು ೧೯೨೩ರ ಈಚಿನ ಪುರಾತತ್ವಶೋಧನ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದರು. ಇಲ್ಲಿಯವರೆಗೆ ಪ್ರಕಟವಾದ ಶಾಸನಗಳ ಒಟ್ಟು ಸಂಖ್ಯೆ ೩೦೦೦ಕ್ಕೂ ಮಿಕ್ಕಿದೆ. ಇವುಗಳನ್ನು ಐದು ಸಂಪುಟಗಳಲ್ಲಿ ಅಂದರೆ ೩ರಿಂದ ೭ ಸಂಪುಟಗಳಲ್ಲಿ ಪ್ರತಿ ಸಂಪುಟವೂ ೧೦೦೦ ಇಲ್ಲವೇ ೧೧೦೦ ಪುಟಗಳಿಗೆ ಮೀರದಂತೆ ಪ್ರಕಟಿಸಬೇಕೆಂದು ಉದ್ದೇಶಿಸಲಾಗಿದೆ. ಮೊದಲ ಮೂರು ಸಂಪುಟಗಳು ಇಂದಿನ ಮೈಸೂರು ಜಿಲ್ಲೆಗೆ ಸಂಬಂಧಿಸಿದ್ದು ಸದ್ಯದ ಈ ಸಂಪುಟವು (೩ನೆಯ ಸಂಪುಟ) ಅವುಗಳಲ್ಲಿ ಮೊದಲನೆಯದಾಗಿದೆ.

೭೮೬ ಶಾಸನಗಳನ್ನೊಳಗೊಂಡಿರುವ ಈ ಸಂಪುಟದಲ್ಲಿ ಮೈಸೂರು ಜಿಲ್ಲೆಯ ಮೂರು ತಾಲ್ಲೂಕುಗಳ ಶಾಸನಗಳಿವೆ. ಅವುಗಳಲ್ಲಿ ಗುಂಡ್ಲುಪೇಟೆ (ಗು.ಪೇ.) ತಾಲ್ಲೂಕಿನ-೨೨೪ ಶಾಸನಗಳು, ನಂಜನಗೂಡು (ನಂ.ಗೂ.) ತಾಲ್ಲೂಕಿನ ೪೦೨ ಶಾಸನಗಳು, ಹಾಗೂ ಹೆಗ್ಗಡದೇವನಕೋಟೆ (ಹೆ.ಕೋ.)ಯ ೧೬೦ ಶಾಸನಗಳು ಇದ್ದು ಈಗಾಗಲೇ ಪ್ರಕಟವಾಗಿದ್ದ ಶಾಸನಗಳ ಪರಿವೀಕ್ಷಣ ಪ್ರವಾಸಕಾಲದಲ್ಲಿ ದೊರೆತ ೬೮ ಹೊಸ ಶಾಸನಗಳೂ ಇದರಲ್ಲಿ ಸೇರಿವೆ.

ನಂಜನಗೂಡು ತಾಲ್ಲೂಕಿನ ಶಾಸನಗಳ ಮುದ್ರಣಕಾರ್ಯ ನಡೆಯುತ್ತಿದ್ದಾಗ ಎರಡು ತಾಮ್ರ ಶಾಸನಗಳ ಹಾಗೂ ಮೂರು ಶಿಲಾಶಾಸನಗಳ ಮೂಲಪ್ರತಿಯನ್ನು ಪರೀಕ್ಷಿಸುವ ಅವಕಾಶ ಸ್ವಲ್ಪ ತಡವಾಗಿ ದೊರೆಯಿತು. ಆದ್ದರಿಂದ ಮೇಲೆ ಹೇಳಿದ ೫ ಶಾಸನಗಳನ್ನೂ ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನಗಳನ್ನು ಮುದ್ರಿಸಿದ ನಂತರ ಸೇರಿಸಲಾಗಿದೆ.

ಈ ಮೊದಲೇ ಒಮ್ಮೆ ಪರಿಷ್ಕೃತವಾಗಿದ್ದ ಮೊದಲ ಎರಡು ಸಂಪುಟಗಳ ಪರಿಷ್ಕರಣಕಾರ್ಯಕ್ಕಿಂತಲೂ ಈ ಸಂಪುಟದ ಪರಿಷ್ಕರಣ ಹೆಚ್ಚು ಕ್ಲಿಷ್ಟಕರವಾಗಿತ್ತು. ಅನೇಕ ಸಂದರ್ಭಗಳಲ್ಲಿ, 'ಶಾಸನ ಸವೆದಿದೆ', 'ಶಾಸನದ ಕೆಲವು ಪಂಕ್ತಿಗಳು ನೆಲದೊಳಗೆ ಸೇರಿವೆ' ಎಂಬ ಉಕ್ತಿಗಳಿಂದ ಶಾಸನ ಪಾಠವು ಅಪೂರ್ಣವಾಗಿಯೇ ಉಳಿದಿತ್ತು. ಅಂತಹ ಅನೇಕ ಸಂದರ್ಭಗಳಲ್ಲಿ ನಾವು ಮೂಲಪ್ರತಿಯನ್ನು ಹುಡುಕಿ ಶಾಸನದ ಪೂರ್ಣಪಾಠವನ್ನು ಕೊಡಬೇಕೆಂದು ಪ್ರಯತ್ನಿಸಿ ಸಾಧ್ಯವಾದಮಟ್ಟಿಗೂ ಕೊಟ್ಟಿರುವೆವು. (ಉದಾ. ಗು.ಪೇ.೬೭, ೧೩೫ ನಂ. ಗೂ. ೨೧೩, ೨೧೫ ಇತ್ಯಾದಿ). ನಂಜನಗೂಡು ತಾಲ್ಲೂಕಿನ ಸುತ್ತೂರು ಗ್ರಾಮದ ಶಾಸನವನ್ನು ಕೂಡ ನಿದರ್ಶನವಾಗಿ ಹೇಳಬಹುದು. ಈ ಶಾಸನವನ್ನು ಕನ್ನಡದಲ್ಲಿ ಕೆತ್ತಲಾಗಿದ್ದರೂ ಅದು ತಮಿಳು ಭಾಷೆಯಲ್ಲಿದ್ದು ಅದರಲ್ಲಿ ವಿಪರೀತ ತಪ್ಪುಗಳಿದ್ದುದರಿಂದ ಅದನ್ನು ಸಂಪೂರ್ಣವಾಗಿ ನಾವು ಪರಿಷ್ಕರಿಸಿದೆವು. ಉದಾಹರಣೆಗೆ ಒಂದು ಶಾಸನ (ನಂ. ಗೂ. ೧೩೫). ಅದು ಚಾಮರಾಜನಿಗೆ ಸೇರಿದುದೆಂದು ಹೇಳಿ ಅದರ ಕಾಲವನ್ನು ಕ್ರಿ. ಶ. ೧೭೮೯ ಎಂದು ಸೂಚಿಸಲಾಗಿತ್ತು. ಆದರೆ ಅದು ವಿಜಯನಗರದ ಹರಿಹರ (II)ನಿಗೆ ಸಂಬಂಧಿಸಿದ್ದು, ಅದರ ಕಾಲ ಶಕ ೧೩೨೧ (ಕ್ರಿ. ಶ. ೧೩೯೯).

ಎಲ್ಲಾ ಶಾಸನಗಳ ಮೂಲಪ್ರತಿಗಳು ನಮಗೆ ದೊರಕುವುದಿಲ್ಲವಾದ್ದರಿಂದ ರೈಸ್‌ರವರ ಶಾಸನ ಪಾಠವನ್ನೇ ಅನೇಕಕಡೆ ಅವಲಂಬಿಸಬೇಕಾಗಿದೆ. ಆದರ ಪ್ರತಿಫಲವಾಗಿ ಕೆಲವು ಶಾಸನಗಳ ತೇದಿಗಳ ವಿವರಗಳಲ್ಲಿ ವ್ಯತ್ಯಾಸಗಳುಂಟಾಗಿವೆ. ಅಂತಹ ಸಂದರ್ಭಗಳಲ್ಲಿ ನಾವು ಆ ವಿವರಗಳಿಗೆ ಸರಿಹೊಂದುವ ಕಾಲವನ್ನು ಕೊಟ್ಟಿರುವುದಲ್ಲದೆ, ಹೆಚ್ಚು ಸಂಭವನೀಯವಾಗುವಂತಹ ತೇದಿಗಳನ್ನೂ ಸೂಚಿಸಿದ್ದೇವೆ.

ಎಲ್ಲಾ ತಾಮ್ರ ಶಾಸನಗಳನ್ನು ಶಾಸನಪಾಠಗಳೊಂದಿಗೆ ಹೋಲಿಸಿ ನೋಡುವುದಕ್ಕಾಗಿ ನಾವು ಎಷ್ಟೇ ಪ್ರಯತ್ನಿಸಿದಾಗ್ಯೂ ಅನೇಕ ತಾಮ್ರ ಶಾಸನಗಳು ನಮಗೆ ದೊರಕಲಿಲ್ಲ. ನಾವು ಪರೀಕ್ಷಿಸಿರುವ ತಾಮ್ರ ಶಾಸನಗಳಲ್ಲಿ ಕೆಲವನ್ನು ಕರ್ನಾಟಕ ಸರ್ಕಾರದ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯದ ನಿರ್ದೇಶಕರ ಕಛೇರಿಯಲ್ಲಿ ರಕ್ಷಿಸಿಡಲಾಗಿದೆ. ಅವುಗಳನ್ನು ನಮಗೆ ಒದಗಿಸಿರುವುದಲ್ಲದೆ ಹಂಗಳದಲ್ಲಿ ದೊರೆತ ಕೆಲವು (ಗು.ಪೇ.೨೦೩–೦೫) ಹೊಸ ಶಾಸನಗಳ ಬಗೆಗೆ ನಮ್ಮ ಗಮನವನ್ನು ಸೆಳೆದ ಆ ಇಲಾಖೆಯ ನಿರ್ದೇಶಕರಾದ ಡಾ. ಎಂ. ಎಸ್. ನಾಗರಾಜರಾವ್‌ರವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು ಸಲ್ಲುತ್ತವೆ.

ಈಗಾಗಲೇ ಪ್ರಕಟವಾಗಿರುವ ಸಂಪುಟಗಳಲ್ಲಿರುವ ಶಾಸನಗಳ ಹಂಚಿಕೆಯನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.

ತಾಲ್ಲೂಕು	ಸಂ. ೩ (ಮೊದಲನೆಯ ಆವೃತ್ತಿ)	ಸಂ. ೪ (ಮೊದಲನೆಯ ಆವೃತ್ತಿ)	ಸಂ. ೧೨ (ಮೊದಲನೆಯ ಆವೃತ್ತಿ)	ಸಂ. ೧೪	ಎಂ.ಎ.ಆರ್. (೧೯೨೩ನೆಯ ಹಾಗೂ ನಂತರದ ವರ್ಷಗಳದ್ದು)	(ಹೊಸದು ಈಗಿನ ಸಂಪುಟದಲ್ಲಿ ಸೇರಿಸಿದವು)	ಒಟ್ಟು	ಷರಾ
ಗುಂಡ್ಲುಪೇಟೆ	—	೧೦೨	—	೩ ಪರಿಷ್ಕೃತ ೪೫	೨ ಪರಿಷ್ಕೃತ ೧ ಸನ್ನದು ೪೪	೩೩	೨೨೪	ಸನ್ನದುಗಳ ಪ್ರಕಟನೆಯನ್ನು ಕೈಬಿಡಲಾಗಿದೆ.
ನಂಜನಗೂಡು	೧೯೯–೩(ಅ) =೧೯೬	೬೯	೧	೧ ಶಾಸನವೊಂದರ ನಕಲು ೧ ಸನ್ನದು ೨೯	೧೫ ಪರಿಷ್ಕೃತ ೮ ಸನ್ನದು ೭೯ (ಆ)	೨೮	೪೦೨	(ಅ) ಗಣಿಗನೂರು ಈಗ ಚಾಮರಾಜನಗರ ತಾಲ್ಲೂಕಿಗೆ ಸೇರಿರುವುದರಿಂದ ಆ ಗ್ರಾಮದ ೩ ಶಾಸನಗಳನ್ನು ಕೈಬಿಡಲಾಗಿದೆ. ೩ನೆಯ ಸಂಪುಟದ ೧೬೦–೧೬೧ ಮತ್ತು ೧೬೪–೧೬೫ನೆಯ ಶಾಸನಗಳನ್ನು ಕ್ರಮವಾಗಿ ೨೧೩ ಮತ್ತು ೨೧೫ನೆಯ ಶಾಸನಗಳಾಗಿ ಒಟ್ಟುಗೂಡಿಸಿದೆ. (ಆ) ೧೪ನೆಯ ಸಂಪುಟದ ೨೮೨ನೆಯ ಶಾಸನವನ್ನು ಮೂರು ಶಾಸನಗಳನ್ನಾಗಿ ವಿಭಾಗಿಸಲಾಗಿದೆ. (ಸಂಖ್ಯೆ ೨೧, ೨೨, ೨೩)
ಹೆಗ್ಗಡದೇವನ ಕೋಟೆ	—	೧೨೩	—	೨೦	೯ (ಅ)+೧	೭	೧೬೦	(ಅ) ಒಂದನ್ನು ಎರಡಾಗಿ ವಿಭಾಗಿಸಲಾಗಿದೆ.
	೧೯೬	೨೯೪	೧	೯೪	೧೩೨+೧	೬೮	೭೮೬	

ಪ್ರಮುಖವಾದ ಕೆಲವು ಶಾಸನಗಳ ಸಮೀಕ್ಷೆ ಇಲ್ಲಿದೆ.

ಪುನ್ನಾಟ ಅರಸರು

ಬಸವನಪುರಕ್ಕೆ ಸೇರಿದ ನಂ. ಗೂ. ೧೭೫ನೆಯ ತಾಮ್ರಶಾಸನವು ೫ ಹಲಗೆಗಳನ್ನು ಹೊಂದಿದ್ದು, ೨ ರಿಂದ ೪ರ ವರೆಗಿನ ಹಲಗೆಗಳಲ್ಲಿ ಎರಡು ಕಡೆಯೂ ಬರೆಯಲಾಗಿದೆ; ಮೊದಲನೆಯ ಹಾಗೂ ಕಡೆಯ ಹಲಗೆಗಳಲ್ಲಿ ಒಳ ಭಾಗದಲ್ಲಿ ಮಾತ್ರ ಬರಹವಿದೆ. ಒಟ್ಟಿನಲ್ಲಿ ೩೫ ಸಾಲುಗಳನ್ನು ಎಂಟು ಮುಖಗಳಲ್ಲಿ ಬರೆಯಲಾಗಿದೆ. ಮೂರನೆಯ ಹಲಗೆಯ ಒಂದೊಂದು ಮುಖದಲ್ಲಿ ಐದೈದು ಸಾಲುಗಳಿವೆ. ಅಂತೆಯೇ ಐದನೆಯ ಹಲಗೆಯ ಒಂದು ಮುಖದಲ್ಲೂ ಐದು ಸಾಲುಗಳಿವೆ. ಉಳಿದ ಹಲಗೆಗಳಲ್ಲಿ ಒಂದೊಂದರಲ್ಲೂ ನಾಲ್ಕು ಸಾಲುಗಳು ಮಾತ್ರ ಇವೆ.

ಈ ಶಾಸನವು ಸ್ಕಂದವರ್ಮನ ಆಳ್ವಿಕೆಗೆ ಸೇರಿದ್ದು ಆತ ಧವಳಪುರದಲ್ಲಿ ತಂಗಿದ್ದಾಗ, ದ್ವಿವೇದಿ ಕೊತ್ತಮ್ಮ ಶರ್ಮನೆಂಬ ಬ್ರಾಹ್ಮಣನಿಗೆ ಮುಟ್ಟಲ್ಲಪ್ಪಿಯೂರು ಎಂಬ ಗ್ರಾಮವನ್ನು ದಾನವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಅರಸನ ವಂಶಾವಳಿಯನ್ನು ಹೀಗೆ ಕೊಟ್ಟಿದೆ.

ವಿೂಕ
|
ತಾಮ್ರಕಾಶ್ಯಪ
|
ರಾಜಾದಿತ್ಯ
⋮ (ಈತನ ವಂಶದ ಅನೇಕ ಅರಸರ ನಂತರ)
ರಾಷ್ಟ್ರವರ್ಮ (ಪತ್ನಿ : ಕದಂಬವಂಶದ ಪ್ರಭಾವತಿ)
|
ಸ್ಕಂದವರ್ಮ (ದಾನಿ)

ಈ ಶಾಸನದಿಂದ ಸ್ಕಂದವರ್ಮನು ಯಾವ ಪ್ರದೇಶವನ್ನು ಆಳುತ್ತಿದ್ದನೆಂಬುದು ತಿಳಿದುಬರುವುದಿಲ್ಲ. ಆದರೆ ದತ್ತಿಕೊಟ್ಟ ಗ್ರಾಮವು ಎಡತ್ತೊಱೆನಾಡಿಗೆ ಸೇರಿದ್ದು ಕಪ್ಪುನಿ ನದಿಯ ಬಳಿಯಲ್ಲಿ, ಅಂದರೆ ಕಪಿಲಾನದಿಯ ಪೂರ್ವ ದಿಕ್ಕಿಗೆ, ಇದೆಯೆಂದು ಹೇಳಿದೆ. ಈ ಶಾಸನವು ತಾಮ್ರಕಾಶ್ಯಪನೆಂಬ ಹೆಸರಿಗೆ ವಿವರಣೆಯನ್ನು ನೀಡುತ್ತಾ, ತಾಮ್ರಪಾತ್ರೆಯೊಂದರಲ್ಲಿ ಜನ್ಮತಾಳಿದ್ದರಿಂದ ಈತನಿಗೆ ತಾಮ್ರಕಾಶ್ಯಪನೆಂಬ ಹೆಸರು ಪ್ರಾಪ್ತವಾಯಿತೆಂದು ತಿಳಿಸುತ್ತದೆ.

ಡಾ. ಫ್ಲೀಟ್‌ರವರಿಂದ ಪ್ರಕಟವಾಗಿರುವ ರವಿದತ್ತನ ಕೊಮರಲಿಂಗಂ ಶಾಸನದಲ್ಲಿ ಈ ವಂಶದವರೆಲ್ಲಾ ಕಾಶ್ಯಪಕುಲಕ್ಕೆ ಸೇರಿದವರೆಂದು ಹೇಳಲಾಗಿದೆ.[1] ಆ ಶಾಸನದಲ್ಲಿ ಅವರ ವಂಶಾವಳಿಯನ್ನು ಕೆಳಕಂಡಂತೆ ಕೊಡಲಾಗಿದೆ:

ರಾಷ್ಟ್ರವರ್ಮ
|
ನಾಗದತ್ತ
|
ಭುಜಂಗ (ಪತ್ನಿ : ಸಿಂಹವರ್ಮನ ಮಗಳು)
|
ಸ್ಕಂದವರ್ಮ
|
ರವಿದತ್ತ

ಮಾಂಬಳ್ಳಿ ಶಾಸನವೇ[2] ಈ ಅರಸರ ಅತ್ಯಂತ ಪ್ರಾಚೀನವಾದ ಶಾಸನವಾಗಿದೆ. ಆದರಲ್ಲಿ ರಾಷ್ಟ್ರವರ್ಮನು 'ಪುಂರಾಷ್ಟ್ರ' ಎಂದರೆ ಪುನ್ನಾಟದ ಅರಸನಾಗಿದ್ದನೆಂದೂ ಆತನು ತಾಮ್ರಕಶ್ಯಪಕುಲಕ್ಕೆ ಸೇರಿದವನೆಂದೂ ಹೇಳಿದೆ. ಈ ಶಾಸನದಲ್ಲಿ ತಿಳಿದುಬರುವ ವಂಶಾವಳಿಯನ್ನು ಹೀಗೆ ಕೊಟ್ಟಿದೆ :

---

[1] *Indian Antiquary,* XVIII, p. 366

[1] ಎಂ.ಎ.ಆರ್. ೧೯೧೭, ಪು. ೩೩ ಮತ್ತು ೪೦–೪೧

ವಿಷ್ಣುದಾಸ
|
ರಾಷ್ಟ್ರವರ್ಮ (ಪತ್ನಿ ; ಹಾರೀತವಂಶದ ಪ್ರಭಾವತಿ)
|
ಪೃಥ್ವೀಪತಿ

ಈ ಶಾಸನದಲ್ಲಿ ಪುಂರಾಷ್ಟ್ರದ ವಿವರಣೆ ಇದೆ. ಹಲವಾರು ದೇಶಗಳ ವಿದ್ವಜ್ಜನರು ಆ ದೇಶದ ಯಶಸ್ಸನ್ನು ಸ್ತುತಿಸಿದ್ದಾರೆಂದೂ, ಅದರ ಗ್ರಾಮಗಳು ಎಮ್ಮೆ, ಹಸು, ಕುದುರೆ, ರತ್ನಗಂಬಳಿ, ಮಾಣಿಕ್ಯ, ಚಿನ್ನ, ಬೆಳ್ಳಿ, ಮುತ್ತು ಮತ್ತು ಹವಳಗಳನ್ನು ಹೊಂದಿದ್ದ ಧನಾಢ್ಯರಿಂದ ತುಂಬಿತ್ತೆಂದೂ, ಅದು ಕಾವೇರಿ ಹಾಗೂ ಕಪಿನೀ ನದಿಗಳಿಂದ ಶೋಭಿಸುತ್ತಿತ್ತೆಂದೂ ಶಾಸನದಲ್ಲಿ ಹೇಳಿದೆ.

ಬಸವನಪುರದ ಶಾಸನವು ಸ್ಕಂದವರ್ಮನು ಎಲ್ಲಿ ಆಳುತ್ತಿದ್ದನೆಂಬುದನ್ನು ತಿಳಿಸುವುದಿಲ್ಲ. ಆದರೆ ದತ್ತಿಕೊಟ್ಟ ಗ್ರಾಮವು ಕಪಿನೀ ನದಿಯ ಬಳಿಯಲ್ಲಿತ್ತೆಂಬುದನ್ನು ಗಮನಿಸಿದ್ದೇವೆ. ಈ ಶಾಸನದ ಸ್ಕಂದವರ್ಮ ಹಾಗೂ ಕೊಮರಲಿಂಗಂ ಶಾಸನದ ರವಿದತ್ತ ಇಬ್ಬರೂ ಪುಂರಾಷ್ಟ್ರದ ಅರಸರಾಗಿದ್ದರೆಂಬುದು ಸ್ಪಷ್ಟ. ಮಾಂಬಳ್ಳಿ ತಾಮ್ರಶಾಸನದ ಪ್ರಕಾರ ರಾಷ್ಟ್ರವರ್ಮನ ಮೂವರು ಮಕ್ಕಳಲ್ಲಿ ಪೃಥ್ವೀಪತಿಯು ಹಿರಿಯನು. ಈ ರಾಷ್ಟ್ರವರ್ಮನ ಹೆಸರು ಮೂರು ಶಾಸನಗಳಲ್ಲೂ ಕಂಡುಬಂದಿದೆ. ಈತನು ಮಾಂಬಳ್ಳಿ ಶಾಸನದಲ್ಲಿ ಉಕ್ತನಾದ ವಿಷ್ಣುದಾಸನ ಮಗ ರಾಷ್ಟ್ರವರ್ಮನೇ ಆಗಿರಬಹುದು. ಇವರ ಮೂರು ಶಾಸನಗಳಿಂದ ರಾಷ್ಟ್ರವರ್ಮನ ಮೂವರು ಮಕ್ಕಳು ಪೃಥ್ವೀಪತಿ, ಸ್ಕಂದವರ್ಮ ಮತ್ತು ನಾಗದತ್ತ ಎಂಬುದು ತಿಳಿದುಬರುತ್ತದೆ. ಕೊಮರಲಿಂಗಂ ಶಾಸನದಲ್ಲಿ ಇವರ ವಂಶಾವಳಿಯು ನಾಗದತ್ತನಿಂದ ಮುಂದುವರಿದಿದೆ. ವಿಷ್ಣುದಾಸನ ಹೆಸರು ಮಾಂಬಳ್ಳಿ ಶಾಸನದಿಂದ ತಿಳಿದಿದೆ. ಬಸವನಪುರದ ಶಾಸನದಲ್ಲಿ ವಿಷ್ಣುದಾಸನ ಪೂರ್ವಿಕರನ್ನು ಹೆಸರಿಸಲಾಗಿದೆ. ಆದರೂ, ಬಸವನಪುರದ ಶಾಸನದಲ್ಲಿ ಉಕ್ತನಾದ ರಾಜಾದಿತ್ಯನಿಗೂ ಮತ್ತು ವಿಷ್ಣುದಾಸನಿಗೂ ನಡುವಣ ಸಂಬಂಧವನ್ನು ಗುರುತಿಸುವುದು ಕಷ್ಟ. ಬಹುಶಃ ಇಲ್ಲಿ ಕೆಲವು ಕೊಂಡಿಗಳು ತಪ್ಪಿವೆ.

ಈ ಮಾಂಡಲಿಕರಿಗೆ ಸಂಬಂಧಿಸಿದ ಮೂರು ಶಾಸನಗಳಲ್ಲಿ ಕೊಮರಲಿಂಗಂ ಶಾಸನದ ಯಥಾರ್ಥತೆಯನ್ನು ಫ್ಲೀಟ್‌ರವರು ಪ್ರಶ್ನಿಸಿದ್ದಾರೆ. ಶಾಸನದಲ್ಲಿನ ಲಿಪಿ ಹಾಗೂ ಭಾಷಾ ಸ್ಖಾಲಿತ್ಯಗಳು ಈ ಸಂದೇಹಕ್ಕೆ ಎಡೆಮಾಡಿವೆ. ಇದೇ ಮಾತನ್ನು ಬಸವನಪುರದ ಶಾಸನಕ್ಕೂ ಅನ್ವಯಿಸಬಹುದು. ಈ ಶಾಸನದಲ್ಲಿ ರವಿದತ್ತನ ಕೊಮರಲಿಂಗಂ ತಾಮ್ರ ಶಾಸನದಲ್ಲಿರುವುದಕ್ಕಿಂತಲೂ ಹೆಚ್ಚಿನ ತಪ್ಪುಗಳಿವೆ.[1] ಆದರೂ ಈ ಸ್ಖಾಲಿತ್ಯಗಳು ಲಿಪಿಕಾರನಿಗೆ ಅದರಲ್ಲಿನ ಸಂಸ್ಕೃತ ಶ್ಲೋಕಗಳು ಅರ್ಥವಾಗದೇ ಇದ್ದುದರಿಂದ ಉಂಟಾದುವೆಂದು ಭಾವಿಸಬಹುದು. ಲಿಪಿಶಾಸ್ತ್ರದ ಆಧಾರದ ಮೇಲೆ ಫ್ಲೀಟ್‌ರವರು ಕೊಮರಲಿಂಗಂ ಶಾಸನವನ್ನು ೮ನೆಯ ಶತಮಾನದ ಅಂತ್ಯಭಾಗ ಅಥವಾ ೯ನೆಯ ಶತಮಾನದ ಪ್ರಾರಂಭಕ್ಕೆ ಸೇರಿದುದೆಂದಿದ್ದಾರೆ. ಬಸವನಪುರದ ಶಾಸನ ಕ್ರಿ. ಶ. ೭೦೦ರ ಸುಮಾರಿಗೆ ಸೇರಿದುದು. ಶ್ರೀ ನರಸಿಂಹಾಚಾರ್‌ರವರು ಮಾಂಬಳ್ಳಿ ಶಾಸನದ ಕಾಲ ಸು. ಕ್ರಿ. ಶ. ೫೫೦ ಎಂದು ಸೂಚಿಸಿದ್ದಾರೆ.

ಬೇರೆ ರಾಜವಂಶಗಳಿಗೆ ಸೇರಿದ ಕೆಲ ಶಾಸನಗಳಲ್ಲಿಯೂ ಈ ಮನೆತನದ ಮಾಂಡಲಿಕರೊಡನೆ ಅವರು ಹೊಂದಿದ್ದ ಬಾಂಧವ್ಯಗಳ ಸೂಚನೆಗಳಿವೆ. ರಾಷ್ಟ್ರವರ್ಮನು ಕದಂಬ ವಂಶದ ಪ್ರಭಾವತಿಯನ್ನು ವಿವಾಹವಾದನು ಎಂಬುದು ಬಸವನ ಪುರದ ಶಾಸನದಿಂದ ತಿಳಿದುಬಂದರೆ, ಮಾಂಬಳ್ಳಿಯ ಶಾಸನವು ಈತನು ಹಾರೀತ ವಂಶದ ರಾಜಕುಮಾರಿ ಪ್ರಭಾವತಿ[2] ಯನ್ನು ವಿವಾಹವಾದನೆಂದು ತಿಳಿಸುತ್ತದೆ. ಕದಂಬರನ್ನು ಹಾರಿತೀಪುತ್ರರೆಂದು ವರ್ಣಿಸಲಾಗಿರುವುದರಿಂದ ಈ ಎರಡೂ ಶಾಸನಗಳಲ್ಲಿ ಉಕ್ತವಾಗಿರುವ ರಾಣಿಯು ಒಬ್ಬಳೇ ಆಗಿದ್ದು ಆಕೆ ಕದಂಬವಂಶಕ್ಕೆ ಸೇರಿದವಳಾಗಿರಬಹುದೆಂದು ಊಹಿಸ ಬಹುದು. ನಾಗದತ್ತನ ಮಗ ಭುಜಂಗನು ಸಿಂಹವರ್ಮನ ಮಗಳನ್ನು ವಿವಾಹವಾದ ವಿಷಯ ಕೊಮರಲಿಂಗಂ ಶಾಸನದಲ್ಲಿ ಪ್ರಸ್ತಾಪವಾಗಿದೆ.

ಗಂಗರಾಜನಾದ ದುರ್ವಿನೀತನು ಪುನ್ನಾಟದ ರಾಜನಾದ ಸ್ಕಂದವರ್ಮನ ಮಗಳ ಮಗನೆಂದೂ, ಸ್ಕಂದವರ್ಮನ ಉತ್ತರಾಧಿಕಾರಿಗಳಾರೂ ಇಲ್ಲದುದರಿಂದ ಪಿತ್ರಾರ್ಜಿತವಾಗಿ ಲಭ್ಯವಾದ ಪುನ್ನಾಟರಾಜ್ಯಕ್ಕೆ ಈತನು ನಂತರ ಅರಸನಾದ ನೆಂದೂ ತಿಳಿದಿದೆ.

---

1 ಎಂ. ಎ. ಆರ್. ೧೯೩೬–ಪುಟ. ೧೩೪.

2 ಈ ಹೆಸರನ್ನು ನರಸಿಂಹಾಚಾರ್‌ರವರು ಪ್ರಜಾವತಿ ಎಂದು ಓದಿದ್ದಾರೆ.

ಈ ಎಲ್ಲ ಬಾಂಧವ್ಯಗಳನ್ನು ಗಮನಿಸಿ ಶ್ರೀ ಗೋವಿಂದ ಪೈರವರು ಈ ರಾಜರ ಕಾಲಾನುಪೂರ್ವಿಯೊಂದನ್ನು ಸೂಚಿಸಿದ್ದಾರೆ. ಅದರಂತೆ ಕದಂಬ ರವಿವರ್ಮನ (ಸು. ೩೫೩-೩೯೭) ಮಗಳಾದ ಪ್ರಭಾವತಿಯನ್ನು ಮದುವೆಯಾದ ರಾಷ್ಟ್ರವರ್ಮನು ಕ್ರಿ. ಶ. ೩೬೫-೩೯೦ರ ವರೆಗೆ ಆಳಿದ್ದು, ಅವನ ಮೊಮ್ಮಗನೂ ಪಲ್ಲವರ ಅರಸನಾದ ಸಿಂಹವರ್ಮನ ಅಳಿಯನೂ ಆದ ಭುಜಂಗನು ಸು.ಕ್ರಿ.ಶ. ೪೨೫ ರಿಂದ ೪೪೦ರ ವರೆವಿಗೂ ಆಳಿದನು. ರವಿದತ್ತನು ಸು.ಕ್ರಿ.ಶ. ೪೭೦-೪೯೫ರ ವರೆಗೆ ಆಳಿದ ಬಳಿಕ ಪುನ್ನಾಟವು ದುರ್ವಿನೀತ (ಸು.ಕ್ರಿ.ಶ. ೪೭೮-೫೨೦) ನಿಗೆ ಪಿತ್ರಾರ್ಜಿತವಾಗಿ ಲಭಿಸಿರಬೇಕು.[1] ಆದರೆ ಲಿಪಿಶಾಸ್ತ್ರದ ಆಧಾರದಮೇಲೆ ಈ ಮೂರು ಶಾಸನಗಳೂ ಸೂಚಿತವಾದ ಕಾಲಾನುಪೂರ್ವಿಗೆ ವಿರುದ್ಧವಾಗಿ ಕಂಡುಬರುತ್ತವೆ. ಮೇಲೆ ನೋಡಿದಂತೆ ಇವುಗಳಲ್ಲಿ ಅತ್ಯಂತ ಪ್ರಾಚೀನ ಶಾಸನದ ಕಾಲವನ್ನು ಸು.ಕ್ರಿ.ಶ. ೫೫೦ ಎಂದು ಹೇಳಲಾಗಿದೆ.

ಶ್ರೀ ಪೈರವರು ಸೂಚಿಸಿರುವ ಗಂಗರ ಕಾಲಾನುಪೂರ್ವಿಯನ್ನು[2] ಒಪ್ಪುವುದು ಕಷ್ಟ. ಅವುಗಳಲ್ಲಿ ಅನೇಕ ಸಮಸ್ಯೆಗಳಿದ್ದು ಅವುಗಳನ್ನು ಇಲ್ಲಿ ಚರ್ಚಿಸಲಾಗದು. ನಾವು ಇನ್ನೊಂದು ಕಾಲಾನುಪೂರ್ವಿಯನ್ನು ಸೂಚಿಸಿದ್ದೇವೆ.[3] ಅದರಂತೆ ದುರ್ವಿನೀತನು ಕ್ರಿ. ಶ. ಸು. ೫೨೯-೫೭೯ರ ವರೆಗೆ ಆಳಿರಬೇಕು. ಇದು ಒಪ್ಪಿಗೆಯಾದರೆ, ಪುನ್ನಾಟವು ೬ನೆಯ ಶತಮಾನದ ಮಧ್ಯದಲ್ಲಿ ಸೋದರಮಾವನಾದ ರವಿದತ್ತನ ಮರಣಾನಂತರ ದುರ್ವಿನೀತನ ವಶಕ್ಕೆ ಬಂದಿರಬಹುದೆಂದು ಭಾವಿಸಬಹುದು.

ಈ ಶಾಸನಗಳಿಂದ ಲಭ್ಯವಾದ ವಿವರಗಳನ್ನು ಗಮನದಲ್ಲಿಟ್ಟುಕೊಂಡು ಪುನ್ನಾಟಾಧಿಪತಿಗಳ ವಂಶಾವಳಿಯನ್ನು ಈ ರೀತಿ ಪುನರ್ಯೋಜಿಸಬಹುದಾಗಿದೆ:

ವಿಷ್ಣುದಾಸ (೪೦೫-೪೩೦)
- ರಾಷ್ಟ್ರವರ್ಮ (೪೩೦-೪೫೫) — ಪತ್ನಿ : ಕದಂಬ ಕುಲದ ಪ್ರಭಾವತಿ
  - ಪೃಥ್ವೀಪತಿ (೪೫೫-೪೭೦)
  - ಸ್ಕಂದವರ್ಮ (I) (೪೭೦-೪೮೫) — ಪತ್ನಿ : ಸಿಂಹವರ್ಮನ ಪುತ್ರಿ
  - ನಾಗದತ್ತ (೪೮೫-೫೦೦)
    - ಭುಜಂಗ (೫೦೦-೫೨೫)
      - ಸ್ಕಂದವರ್ಮ (II) (೫೨೫-೫೫೦)
        - ಮಗಳು — ಅವನೀತನೊಡನೆ ವಿವಾಹ
          - ದುರ್ವಿನೀತ (೫೨೯-೫೭೯)
        - ರವಿದತ್ತ — ೫೫೦ಕ್ಕೆ ಮೊದಲೇ ಮರಣ

ರಾಷ್ಟ್ರವರ್ಮನು ಮದುವೆಯಾದ ಪ್ರಭಾವತಿಯು ಕದಂಬ ಕಾಕುಸ್ಥವರ್ಮನ ಮಗಳಾಗಿರಬೇಕು. ಈ ಕದಂಬ ರಾಜನು ಅನೇಕ ಪ್ರಸಿದ್ಧ ರಾಜವಂಶದವರೊಡನೆ ವಿವಾಹ ಸಂಬಂಧ ಬೆಳಸಿದ್ದನೆಂದು ತಾಳಗುಂದ ಶಾಸನದಿಂದ ತಿಳಿದು ಬರುತ್ತದೆ. ಅವನ ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ಸ್ಕಂದಗುಪ್ತನು ವಿವಾಹವಾದನೆಂದು ಊಹಿಸಲಾಗಿದೆ. ವಾಕಾಟಕ

---

1 *A Volume of Studies in Indology*, 1941, pp. 308 ff.

2 *Karnataka Historical Review*, II pt. I p. 1–36 and pt II p. 17–26.

3 *History of Karnataka* (ed.) P. B. Desai, p. 82-83.

ನರೇಂದ್ರಸೇನನ ಪತ್ನಿಯಾದ ಅಜ್ಝಿತಭಟ್ಟಾರಿಕಾ ಆತನ ಇನ್ನೊಬ್ಬ ಮಗಳಾಗಿದ್ದು, ಮೂರನೆಯವಳಾದ ಲಕ್ಷ್ಮಿಯು ಆಳುಪ ದೊರೆಯನ್ನು ಮದುವೆಯಾಗಿದ್ದಳು. ಆದ್ದರಿಂದ ರಾಷ್ಟ್ರವರ್ಮನು ವಿವಾಹ ಬೆಳೆಸಿದ ಕದಂಬ ರಾಜಕುಮಾರಿ ಪ್ರಭಾವತಿಯು ಕಾಕುಸ್ಥವರ್ಮನ ಇನ್ನೊಬ್ಬ ಮಗಳೆಂದು ಊಹಿಸಬಹುದು.

ಭುಜಂಗನು ಸಿಂಹವರ್ಮನ ಮಗಳನ್ನು ವಿವಾಹವಾದನೆಂದಿದೆ. ಈ ಸಿಂಹವರ್ಮನು ಕದಂಬರ ಮೊದಲನೆಯ ಕೃಷ್ಣವರ್ಮ (I) ನ ಮೊಮ್ಮಗನಾಗಿರಬೇಕು. ಪುನ್ನಾಟದ ಅರಸನಾದ ಇಮ್ಮಡಿ ಸ್ಕಂದವರ್ಮನು ತನ್ನ ಮಗಳನ್ನು ಗಂಗ ಅವನೀತನಿಗೆ ಕೊಟ್ಟು ವಿವಾಹ ಬೆಳಸಿದನು. ಆತನ ಮಗ ದುರ್ವಿನೀತನು ಆನುವಂಶಿಕವಾಗಿ ಅಂದರೆ ದೌಹಿತ್ರ ರೀತಿಯಿಂದ ಪುನ್ನಾಟವನ್ನು ಪಡೆದನು. ಇಮ್ಮಡಿ ಸ್ಕಂದವರ್ಮನ ಏಕಮಾತ್ರ ಪುತ್ರನಾದ ರವಿದತ್ತನು ತಂದೆಗಿಂತ ಮೊದಲೇ ಮರಣ ಹೊಂದಿರಬೇಕು.

ತಲಕಾಡಿನ ಗಂಗರು

ಗಂಗವಂಶಕ್ಕೆ ಸೇರಿದ ೪೦ಕ್ಕೂ ಹೆಚ್ಚು ಶಾಸನಗಳನ್ನು ಪ್ರಸ್ತುತ ಸಂಪುಟದಲ್ಲಿ ಸೇರಿಸಲಾಗಿದೆ.

ನಂ.ಗೂ. ೩೨೨ನೆಯ ಕೂಡ್ಲಾಪುರದ ಶಾಸನದ ಕಾಲ ಕ್ರಿ.ಶ. ೧೧೪೮. ಇದು ಹೊಯ್ಸಳರಾಜನಾದ ನರಸಿಂಹ (I)ನಿಗೆ ಸೇರಿದ ಶಾಸನವಾಗಿದೆ. ಆದರೆ ಇದರಲ್ಲಿ ಈ ಮೊದಲೇ ಕೊಂಗುಣಿವರ್ಮನಿಂದ ಕೊಡಲಾಗಿದ್ದ ದಾನವನ್ನು ಉಲ್ಲೇಖಿಸಿದೆ. ಆ ಸಂದರ್ಭದಲ್ಲಿ ಕೊಂಗುಣಿವರ್ಮನನ್ನು 'ಪ್ರಥಮ ಗಂಗ'ನೆಂದು ವರ್ಣಿಸಲಾಗಿದ್ದು ಆ ಮೊದಲ ದಾನದ ಕಾಲವನ್ನು ಶಕವರ್ಷ ೨೫ನೆಯ ಶುಭಕೃತ್ ಸಂವತ್ಸರದ, ಫಾಲ್ಗುಣ ಶುದ್ಧ ೫, ರೋಹಿಣೀ ನಕ್ಷತ್ರವೆಂದು ಹೇಳಿದೆ. ಇಲ್ಲಿ ಶಕ ವರ್ಷ ತಪ್ಪಾಗಿರುವುದು ಸ್ಪಷ್ಟ. ರೈಸ್‌ರವರು ಅದನ್ನು ಕ್ರಿ.ಶ. ೧೦೮ಕ್ಕೆ ಸಮವೆಂದು ಪರಿಗಣಿಸಿದರೂ ಬೇರೆ ಆಧಾರಗಳಿಲ್ಲದೆ ಆದನ್ನೇ ನಿರ್ಣಾಯಕವೆಂದು ಭಾವಿಸಲಾಗದೆಂದು ತಿಳಿಸಿದ್ದಾರೆ.[1] ಇಲ್ಲಿ ಸೂಚಿಸಿರುವ ವರ್ಷವು ಆತನ ಆಳ್ವಿಕೆಯ ವರ್ಷವನ್ನು ಸೂಚಿಸಿದ್ದಾಗಿರಬಹುದು. ಕದಂಬವಂಶದ ಅರಸರಿಗೆ ನಾವು ಸೂಚಿಸಿರುವ ಕಾಲಾನುಪೂರ್ವಿಯನ್ನು ಒಪ್ಪುವುದಾದರೆ ಕೊಂಗುಣಿವರ್ಮನ ಕಾಲ ಕ್ರಿ.ಶ. ೩೨೫-೩೫೦ ಆಗಿದ್ದು ಇವನ ೨೫ನೆಯ ಆಡಳಿತ ವರ್ಷವು ಸು.೩೫೦ಕ್ಕೆ ಸರಿಹೊಂದುತ್ತದೆ. ಆದರೆ ಶಾಸನದಲ್ಲಿ ತಿಳಿಸಿರುವ ಶುಭಕೃತ್ ಸಂವತ್ಸರವು ಶಕ ೨೬೪, ಅಂದರೆ ಕ್ರಿ.ಶ. ೩೪೨ಕ್ಕೆ ಸರಿಹೋಗುವುದರಿಂದ ನಾವು ಕೊಟ್ಟಿರುವ ಕಾಲದಲ್ಲಿಯೂ ಅದು ಆಳಿಕೆಯ ೧೭ ಅಥವಾ ೧೮ನೇ ವರ್ಷವಾಗುವುದೇ ಹೊರತು ೨೫ನೆಯ ವರ್ಷವಾಗಲಾರದು! ಆದ್ದರಿಂದ ಇದರ ಬಗ್ಗೆ ಏನನ್ನೂ ಖಚಿತವಾಗಿ ಹೇಳಲಾಗುವುದಿಲ್ಲ. ಕೊಂಗುಣಿವರ್ಮನನ್ನು ಪ್ರಥಮಗಂಗರಾಜನೆಂದು ವರ್ಣಿಸಿರುವ ಕುತೂಹಲಕಾರಿಯಾದ ವಿಷಯವನ್ನು ಇಲ್ಲಿ ನಾವು ಗಮನಿಸಬಹುದು.

ತಗಡೂರಿನ (ನಂ.ಗೂ. ೨೬೨) ಶಾಸನದಲ್ಲಿ ಗಂಗರ ಇನ್ನೊಬ್ಬ ಅರಸ ಹರಿವರ್ಮ ಉಲ್ಲೇಖಿತನಾಗಿದ್ದಾನೆ. ಈ ಶಾಸನವನ್ನು ೩ ತಾಮ್ರದ ಹಲಗೆಗಳ ಮೇಲೆ ಕನ್ನಡ ಲಿಪಿಯಲ್ಲಿ ಕೆತ್ತಲಾಗಿದ್ದು ಶಾಸನ ಕನ್ನಡ ಭಾಷೆಯಲ್ಲಿದೆ. ಶಾಸನದಲ್ಲಿ ಹರಿವರ್ಮನನ್ನು ಮಾಧವನ ಮಗನೆಂದೂ, ಕೊಂಗುಣಿವರ್ಮನ ಮೊಮ್ಮಗನೆಂದೂ ಹೇಳಿದೆ. ಆ ಶಾಸನದ ಕಾಲವನ್ನು 'ಶಕವರಿಷೇಷು ಗತೇಷು ಅಟ್ಟಾಸೀತಿ ಸತೇ' ಇತ್ಯಾದಿ ಉಳಿದ ವಿವರಗಳೊಡನೆ ಕೊಟ್ಟಿದೆ. ರೈಸ್‌ರವರು ಇದನ್ನು ಶಕವರ್ಷ ೧೮೮ ಎಂದು ಪರಿಗಣಿಸಿದ್ದಾರೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಇದೊಂದು ಕೂಟಶಾಸನವೆಂಬುದು ಸುಸ್ಪಷ್ಟ. ಶಾಸನದ ೭ನೆಯ ಸಾಲಿನ ಜ ಮತ್ತು ಜಾ, ೩ನೆಯ ಸಾಲಿನ ಣ, ೪ನೆಯ ಸಾಲಿನಲ್ಲಿ ಣ್ವಾ ಅಕ್ಷರದ ಣಾ, ೧, ೨, ೫ನೆಯ ಸಾಲುಗಳಲ್ಲಿನ ತ, ಮುಂತಾದ ಅಕ್ಷರಗಳ ಪರಿಶೀಲನೆಯಿಂದ ಈ ಶಾಸನವು ಸುಮಾರು ೧೦ನೆಯ ಶತಮಾನದಲ್ಲಿ ಹುಟ್ಟಿರಬಹುದೆಂದು ಊಹಿಸಲು ಅವಕಾಶವಿದೆ. ಈ ಕೂಟಶಾಸನವನ್ನು ಕಣ್ಡರಿಸಿದಾತ ಬೇರೆಬೇರೆ ಕಾಲಗಳಲ್ಲಿನ ಲಿಪಿಯನ್ನು ಉಪಯೋಗಿಸಿದ್ದು ಕೆಲವು ಅಕ್ಷರಗಳ ಪ್ರಾಚೀನ ರೂಪಗಳನ್ನೂ ಉಳಿಸಿಕೊಂಡಿದ್ದಾನೆ. ನಾವು ಅವನು ಸೂಚಿಸಿರುವ ಕಾಲವನ್ನು ಶಕ ೮೮೦ ಎಂದು ಪರಿಗಣಿಸಿದ್ದೇವೆ. ಇದೇ ರಾಜನ ತಂಜಾವೂರಿನ ದಾನಶಾಸನದಲ್ಲಿ 'ನವೋತ್ತರೇಷಷ್ಟಿರೇಕಶತಗತೇಷು' ಎಂದು ಕಾಲವನ್ನು ಸೂಚಿಸಿರುವುದನ್ನು ಇಲ್ಲಿ ಉದಹರಿಸಬಹುದು. ಇದು ೧೬೯ ಎಂಬುದು ಸ್ಪಷ್ಟ. ಪ್ರಸ್ತುತ ಶಾಸನದಲ್ಲಿ ಕಾಲವನ್ನು ಸೂಚಿಸಿರುವ ವಿಧಾನವನ್ನು ಗಮನಿಸಿದಾಗ 'ಅಟ್ಟಾಸೀತಿಸತ' ಎಂಬುದನ್ನು ೮೮೦ ಎಂದೇ ಯಾರಾದರೂ ಅರ್ಥೈಸಬಹುದು. ಲಿಪಿಯನ್ನು ಗಮನಿಸಿ ಈ ಶಾಸನವನ್ನು ಅದೇ ಕಾಲಕ್ಕೆ ಸೇರಿಸಬಹುದೆಂಬುದು ಸ್ವಾರಸ್ಯದ ಸಂಗತಿ.

---

[1] ಎ.ಕ. III ರೈಸ್‌ರವರ ಮುದ್ರಣ, ಪೀಠಿಕೆ, ಪು. 1.

ಕ್ರಿ.ಶ. ೨–೩ನೆಯ ಶತಮಾನದಷ್ಟು ಪ್ರಾಚೀನವಾದ ಯಾವ ಶಾಸನಗಳಲ್ಲಿಯೂ ಈ ಶಾಸನದಲ್ಲಿ ಕೊಟ್ಟಿರುವಂತೆ ಸಂವತ್ಸರ, ತಿಥಿ, ವಾರ ಮುಂತಾದ ಕಾಲವಿವರಗಳನ್ನು ಕೊಡುವುದಿಲ್ಲವೆಂಬುದನ್ನೂ ಗಮನಿಸಬೇಕು. ಶಕ ಮುಂತಾದ ಕಾಲಗಣನೆಯ ಹೆಸರು ಇಷ್ಟು ಪ್ರಾಚೀನವಾದ ಶಾಸನಗಳಲ್ಲಿರುವುದಿಲ್ಲ. ಇದೇ ಹರಿವರ್ಮನ ಕೂಡಲೂರಿನ ಶಾಸನದ[1] ಕಾಲ ಅಟ್ಟಾಅಸೀತಿಉತ್ತರ ವರ್ಷದ, ಜಯಸಂವತ್ಸರದ ಮಾಘ, ಅಮಾವಾಸ್ಯೆ. ಕಾಲದ ವಿವರಗಳು ಸರಿಹೊಂದದಿದ್ದರೂ ವರ್ಷವನ್ನು 'ನೂರ ನಂತರದ ೮೮ (೧೮೮)' ಎಂದು ಅರ್ಥೈಸಲಾಗಿದೆ. ಇದು ಸಹ ಶಾಸನದಲ್ಲಿ ಸೂಚಿತವಾದ ಕಾಲಕ್ಕೆ ಬಹಳ ನಂತರದ ಕಾಲದ್ದೇ ಆಗಿದೆ ಎಂಬುದನ್ನು ಶಾಸನದ ಲಿಪಿ ಸ್ಪಷ್ಟಗೊಳಿಸುತ್ತದೆ.

ಈ ಶಾಸನಗಳಲ್ಲಿ ಬಳಸಲಾಗಿರುವ ಭಾಷೆ ಸಂಸ್ಕೃತ ಹಾಗೂ ಕನ್ನಡ. ದಕ್ಷಿಣ ಭಾರತದ ಅತ್ಯಂತ ಪ್ರಾಚೀನವಾದ ಎಲ್ಲ ಶಾಸನಗಳಲ್ಲಿ ಬಳಸುತ್ತಿದ್ದ ಭಾಷೆ ಪ್ರಾಕೃತವಾಗಿದ್ದು ಸಂಸ್ಕೃತವಲ್ಲವೆಂಬುದು ಗಮನಿಸಬೇಕಾದ ಸಂಗತಿ. ೫ನೆಯ ಶತಮಾನಕ್ಕೆ ಸೇರಿದ ಕದಂಬ ಕಾಕುಸ್ಥವರ್ಮನ ತಾಳಗುಂದ ಶಾಸನವೇ ಬಹುಶಃ ಸಂಸ್ಕೃತ ಭಾಷೆಯ ಅತಿ ಪ್ರಾಚೀನ ಶಾಸನವೆಂಬುದೂ ಸಹ ಗಮನಿಸಬೇಕಾಗಿರುವ ಅಂಶ. ಪ್ರಸ್ತುತ ಶಾಸನದಲ್ಲಿ ಕನ್ನಡ ಭಾಷೆಯನ್ನು ಬಳಸಲಾಗಿದೆ ಎಂಬುದು ನಿಜವಾದರೂ ಪುನರ್ಪರಿಶೀಲನೆ ಮಾಡಿದಾಗ ಈ ಭಾಷೆ ಶಾಸನ ಹೇಳಿಕೊಳ್ಳುವಷ್ಟು ಪ್ರಾಚೀನ ಸ್ವರೂಪದ್ದಾಗಿರದೆ ನಂತರದ ರೂಪವನ್ನೇ ಹೊಂದಿದೆ. ಆದ್ದರಿಂದ ತಗಡೂರಿನ ದಾನಶಾಸನವನ್ನು ಕೂಟಶಾಸನವೆಂದು ಪರಿಗಣಿಸಬಹುದು. ಅದು ೧೦ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದುದಾಗಿರಬೇಕು.

ನಂ.ಗೂ. ೧೬೨ನೆಯ ತುಂಡುಶಾಸನವು ಸು. ೮ನೆಯ ಶತಮಾನಕ್ಕೆ ಸೇರಿದುದಾಗಿದೆ. ಇದರಲ್ಲಿ ಕೊಂಗುಣಿ ಅರಸ ಶಿವಮಾರನ ಆಳಿಕೆಯ ಪ್ರಸ್ತಾಪವಿದೆ. ಶಾಸನವು 'ಎಳೆ' ಎಂಬುದರಿಂದ ಮುಕ್ತಾಯವಾಗುತ್ತದೆ. ಈ 'ಎಳೆ' ಎಂಬುದು ತಂದೆಗಿಂತ ಮೊದಲೇ ಮರಣಹೊಂದಿದ್ದ ಒಂದನೆಯ ಶಿವಮಾರನ ಪುತ್ರನಾದ ಎಳೆಗಂಗ–ಎಱೆಗಂಗನನ್ನು ಪ್ರಸ್ತಾಪಿಸುತ್ತಿರಬಹುದು. ಈ ಸೂಚನೆ ಒಪ್ಪಿಗೆ ಆದಲ್ಲಿ, ಶಾಸನೋಕ್ತ ಶಿವಮಾರನು ಶ್ರೀಪುರುಷನ ತಾತನಾದ ಒಂದನೆಯ ಶಿವಮಾರನೆಂದು ಗುರುತಿಸಬಹುದು. ಆದರೆ ಇದು ಬಹುಮಟ್ಟಿಗೆ ಊಹೆಯಷ್ಟೆ. ಶಾಸನದಲ್ಲಿ ಶಿವಮಾರನು ಕೊಂಗುಣಿ ಅರಸನೆಂಬ ಬಿರುದನ್ನು ಧರಿಸಿದ್ದಾನೆ. ಈ ಬಿರುದನ್ನು ಸಾಮಾನ್ಯವಾಗಿ ಮೊದಲನೆಯ ಶಿವಮಾರನು ಧರಿಸಿದ್ದುದರಿಂದ, ಇದನ್ನು ಆಧರಿಸಿಯೂ ನಾವು ಈ ಶಾಸನ ಮೊದಲನೆಯ ಶಿವಮಾರನದೆಂದು ಗುರುತಿಸಿದ್ದೇವೆ.

ನಂ.ಗೂ. ೧೯೩ನೆಯ ಶಾಸನವು ಸಹ ಕೊಂಗುಣಿ ಅರಸನೆಂದು ವರ್ಣಿತನಾದ ಶಿವಮಾರನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದೆ. ಶಾಸನದಲ್ಲಿ ಎಡೆತೊಱೆನಾಡಿನ ಪ್ರಸ್ತಾಪವಿದೆ. ಉಳಿದ ವಿವರಗಳು ಲಭ್ಯವಾಗಿಲ್ಲ. ಮೇಲೆ ಹೇಳಿದ ಆಧಾರದ ಮೇಲೆಯೇ ಇದನ್ನೂ ಕೂಡ ಒಂದನೆಯ ಶಿವಮಾರನ ಆಳ್ವಿಕೆಯ ಕಾಲಕ್ಕೆ ಸೇರಿಸಬಹುದಾಗಿದೆ.

ವೆಡಿರೂನ್ ಎಂಬಾತನು ಮರಣಹೊಂದಿದಾಗ ವಾನ್ನಾರಿ ಎಂಬಾತನಿಗೆ 'ಎಱೆಯಮರಿಯಾದೆ' ಎಂದು ಭೂಮಿಯನ್ನು ದಾನವಾಗಿ ಕೊಡಲಾಯಿತೆಂದು ಹೇಳುವ ಹೆಗ್ಗಡದೇವನಕೋಟೆಯ ೧೫೬ನೆಯ ಮಾಗುಡಿಲು ಶಾಸನವೂ ಶಿವಮಾರನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಕ್ತವಾಗಿರುವ ಶಿವಮಾರನು ಒಂದನೆಯ ಶಿವಮಾರನೋ ಅಥವಾ ಎರಡನೆಯ ಶಿವಮಾರನೋ ಹೇಳುವುದು ಕಷ್ಟ. ಅದರಂತೆಯೇ ದೇಬೂರಿನ ಶಾಸನವೂ (ನಂ.ಗೂ. ೧೨೯) ಶಿವಮಾರನ ಹೆಸರನ್ನು ಮಾತ್ರ ಸೂಚಿಸುವುದರಿಂದ ಇವನು ಯಾವ ಶಿವಮಾರನೆಂದು ಖಚಿತವಾಗಿ ಗುರುತಿಸುವುದು ಅಸಾಧ್ಯ. ಈ ಶಾಸನದಲ್ಲಿ ಪುನ್ನಾಡು-೬೦೦೦ದ ಮಾಂಡಲಿಕನೊಬ್ಬ 'ಎಱೆಯಮರಿಯಾದೆ' ಎಂದು ಭತ್ತದ ಗದ್ದೆಯನ್ನು ದಾನವಾಗಿ ಕೊಟ್ಟ ವಿಷಯ ಪ್ರಸ್ತಾಪವಾಗಿದೆ.

ನಂ.ಗೂ. ೨೦೫ನೆಯ ಇಗ್ಗಲಿಯ ಶಾಸನದ ಕಾಲ ಸುಮಾರು ೯ನೆಯ ಶತಮಾನ. ಅದು ಅಸಗ ಗಂಗನ ಮಗನಾದ ಪಿಟ್ಟುವಿ ಗಂಗನು ಮಾಡಿದ ದಾನವನ್ನು ತಿಳಿಸುತ್ತಿದ್ದು, ಆತ ಎರಡನೆಯ ಶಿವಮಾರನ ಮಗನಾದ ಪಿಟ್ಟುವಿಪತಿ ಅಥವಾ ಮೊದಲನೆಯ ಪೃಥ್ವೀಪತಿಯಾಗಿರಬೇಕೆಂದು ಡಾ. ಕೃಷ್ಣರವರು ಅಭಿಪ್ರಾಯಪಟ್ಟಿದ್ದಾರೆ.[2] ಹಾಗಿದ್ದಲ್ಲಿ ಅಸಗ ಗಂಗ ಎಂಬುದು ಶಿವಮಾರನ ಹೆಸರಾಗಿರಬೇಕು. ಆದರೆ ಇದು ಕೇವಲ ಅನುಮಾನಿತವಾಗಿದ್ದು ಈ ಬಗೆಗೆ ಹೆಚ್ಚು ಆಧಾರಗಳಿಲ್ಲ.

ಒಂದನೆಯ ಶಿವಮಾರನ ಉತ್ತರಾಧಿಕಾರಿಯೂ ಮೊಮ್ಮಗನೂ ಆದ ಶ್ರೀಪುರುಷನ ಕಾಲದ ಆರು ಶಾಸನಗಳಿವೆ.

---

[1] ಎಂ.ಎ.ಆರ್. 1920–21 ಪು. 7, ಪು. 17 ff.

[2] ಎಂ ಎ.ಆರ್. 1930 ಪು. 183–84.

ನಳೂರಿನ ಗು.ಪೇ. ೮೮ನೆಯ ಶಾಸನವು ನಮಗೆ ಹೊಸದಾಗಿ ದೊರೆತ ಶಾಸನ. ಇದು ಕಡ್ಡಾಣೆಯ ಆಳ್ವಿಕೆಯನ್ನು ಪ್ರಸ್ತಾಪಿಸುತ್ತದೆ. 'ಕಡ್ಡಾಣೆ' ಗಂಗ ಶ್ರೀಪುರುಷನ ಬಿರುದೆಂಬುದು ನಮಗೆ ತಿಳಿದಿದೆ.[1] ಈತನ ಆಳ್ವಿಕೆಯ ಕಾಲದಲ್ಲಿ ಸಿಂಗವೆಮ್ಮರಸನು ಯುದ್ಧ ಹೂಡಿದನೆಂಬುದನ್ನು ಈ ಶಾಸನವು ತಿಳಿಸುತ್ತದೆ. ಈತನೇ ಆಕ್ರಮಣಕಾರಿ ಎಂಬುದು ಸ್ಪಷ್ಟ. ಶಾಸನದ ಮುಂದಿನ ಭಾಗವು ಸವೆದಿದ್ದು ವಿವರಗಳು ನಷ್ಟವಾಗಿವೆ. ಆದರೆ ಅದು ಕೊಂಗೆಳಿ ಎಂಬುವನನ್ನು ಹೆಸರಿಸಿದೆ. ಶ್ರೀಪುರುಷನು ತನ್ನ ಆಳ್ವಿಕೆಯ ಪ್ರಾರಂಭಕಾಲದಲ್ಲಿ ಪಲ್ಲವರೊಡನೆ ಅನೇಕಬಾರಿ ಹೋರಾಡಬೇಕಾಯಿತೆಂಬುದು ಗಮನಾರ್ಹವಾದ ವಿಷಯ. ಇದನ್ನು ಅನುಲಕ್ಷಿಸಿ ಪ್ರಸ್ತುತ ನಮ್ಮ ಶಾಸನದಲ್ಲಿ ಉಕ್ತವಾಗಿರುವ ಸಿಂಗವೆಮ್ಮರಸನು ಬಹುಶಃ ಪಲ್ಲವರ ಇಮ್ಮಡಿ ನರಸಿಂಹವರ್ಮ ರಾಜಸಿಂಹ (ಸು. ೭೦೦-೭೨೮)ನೆಂದು ಗುರುತಿಸಬಹುದು. ಆತನ ಶಾಸನಗಳಲ್ಲಿಯೇ ಆತನನ್ನು ಸಿಂಗವರ್ಮ್ಮರಸರ್ ಎಂದು ಕರೆಯಲಾಗಿದೆ. ಈ ಸಂದರ್ಭದಲ್ಲಿ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪೋತ್ತನ್‌ಕ್ಕೋಟ್ಟೈಯಲ್ಲಿ ದೊರೆತ ಅಪ್ರಕಟಿತ ಶಾಸನವೊಂದನ್ನು ಪ್ರಾಸಂಗಿಕವಾಗಿ ಗಮನಿಸಬಹುದು. ಇದರಲ್ಲಿ ಪಿರುದಿ ಗಂಗದಿ ಕಟ್ಟೆಣೈಪರುಮರ್ ಎಂಬಾತನು ಆಳುತ್ತಿದ್ದನೆಂದಿದೆ. ಈ ಕಟ್ಟೆಣೈಪರುಮರ್ ಎಂಬಾತ ಗಂಗರ ಅರಸನೆಂದು ಶಾಸನದಲ್ಲಿಯೇ ಹೇಳಿದೆ. ಕಡ್ಡಾಣೆ ಎಂಬುದು ನಮಗೆ ತಿಳಿದಿರುವಂತೆ ಶ್ರೀಪುರುಷನ ಬಿರುದು. ಅದೇ ಜಿಲ್ಲೆಯ ರಾಮಕೃಷ್ಣಾಂಪಾಡಿಯ ಮತ್ತೊಂದು ಶಾಸನದಲ್ಲಿಯೂ ಕಟ್ಟೆಣೈಪರುಮರನ ಆಳ್ವಿಕೆಯ ಪ್ರಸ್ತಾಪವಿದೆ. ಪೋತ್ತನ್‌ಕ್ಕೋಟ್ಟೈ ಶಾಸನದಲ್ಲಿದ್ದಂತೆ ಇದರಲ್ಲಿ ಈತನನ್ನು ಗಂಗನೆಂದು ಕರೆಯದಿದ್ದರೂ ಈತನು ಶ್ರೀಪುರುಷನೇ ಎಂಬುದರಲ್ಲಿ ಸಂಶಯವಿಲ್ಲ.[2]

ಹೆಗ್ಗಡದೇವನಕೋಟೆಯ ೧೫೫ನೆಯ ನೇರ್ಳೆಯ ಶಾಸನವು ಪಟ್ಟಣೆ ಎಱೆಯನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಈ ಶಾಸನದ ಕಲ್ಲನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಕಡ್ಡಾಣೆ ಎಂಬುದನ್ನು ಪಟ್ಟಣೆ ಎಂದು ತಪ್ಪಾಗಿ ಓದಿರುವ ಸಾಧ್ಯತೆಯೂ ಉಂಟು. ಇಲ್ಲವೇ ಹಾಗೆ ಅದನ್ನು ತಪ್ಪಾಗಿ ಕಣ್ಡರಿಸಿರಬಹುದು. ಈ ಅರಸನು ಶ್ರೀಪುರುಷನಾಗಿರಬಹುದೆಂದು ಸದ್ಯದಮಟ್ಟಿಗೆ ಸೂಚಿಸಬಹುದು.

ಹೆ.ಕೋ. ೯೧ನೆಯ ಶ್ರೀಪುರುಷನ ತಾಮ್ರಶಾಸನದಲ್ಲಿ ಆತನನ್ನು ಪೃಥುವೀಕೊಂಗಣಿಮಹಾರಾಜನೆಂದು ವರ್ಣಿಸಲಾಗಿದೆ. ಶ್ರೀಪುರುಷ ಮಹಾರಾಜನು ಕೆಸುಗೊಳದ ಒಡೆಯನಾದ ಬಿಣಾಮ್ಮನಿಗೆ ತನ್ನ ಜನ್ಮನಕ್ಷತ್ರ (ಶ್ರೀನಕ್ಷತ್ರ)ದ ದಿನದಿಂದ ಒಂದು ತಿಂಗಳವರೆಗೆ ೧೨ ಜನ ಬ್ರಾಹ್ಮಣರಿಗೆ ಒಪ್ಪೊತ್ತಿನ ಭೋಜನಕ್ಕಾಗಿ ದಣ್ಣಗವಾಡಿ ಎಂಬ ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟನೆಂಬ ಸ್ವಾರಸ್ಯಕರವಾದ ಸಂಗತಿಯು ಈ ಶಾಸನದಿಂದ ತಿಳಿದುಬರುತ್ತದೆ. ರೈಸ್‌ರವರು ಶಾಸನದ ಈ ಭಾಗವನ್ನು ಬೇರೆ ರೀತಿಯಾಗಿ ಅರ್ಥೈಸಿದ್ದಾರೆ. ಅವರು ಅರ್ಥೈಸಿರುವಂತೆ 'ರಾಜನ ಭಟಾರ ಅಥವಾ ಹಾಸ್ಯಗಾರನ ತಿರುನಕ್ಷತ್ರದಂದು ಪ್ರತಿ ತಿಂಗಳೂ ೧೨ ಜನ ಬ್ರಾಹ್ಮಣರ ಭೋಜನವಾಗಬೇಕು' ಎಂಬುದು ಶಾಸನದ ಉದ್ದಿಶ್ಯವಾಗುತ್ತದೆ. ದುರದೃಷ್ಟವಶಾತ್ ಆ ಶಾಸನವು ಜನ್ಮನಕ್ಷತ್ರದ ದಿನವನ್ನಾಗಲೀ ಇಲ್ಲವೇ ಅದಕ್ಕೆ ಸಂಬಂಧಿಸಿದಂತೆ ತೇದಿಯ ಇತರ ವಿವರಗಳನ್ನಾಗಲೀ ಸೂಚಿಸುವುದಿಲ್ಲ. ಶಾಸನದ ಉತ್ತರಭಾಗವು ಅರಿದಾಳ್ಕೆ-೭೦ನ್ನು ಆಳುತ್ತಿದ್ದ ಮಹಾಸಾಮಂತನಾದ ಮುದುಕೊಜ್ಗಣಿಯದಿಯರಸನ ಹೆಸರನ್ನು ಉಲ್ಲೇಖಿಸಿ, ಆತನು ರಾಜನ ಅನುಮತಿಯಿಂದ ಪೆರ್ವಟ್ಟೆಯೂರ್ ಮತ್ತು ಮರ್ದೂರ್ ಎಂಬ ಗ್ರಾಮಗಳನ್ನು ದತ್ತಿಕೊಟ್ಟ ವಿಷಯವನ್ನು ಪ್ರಸ್ತಾಪಿಸಿದೆ.

ಗು.ಪೇ. ೬೭ನೆಯ ಶಾಸನದಲ್ಲಿ ಅರಸನನ್ನು ಶ್ರೀಪುರುಷನೆಂಬ ಹೆಸರಿನಿಂದ ಕರೆಯಲಾಗಿದೆ. ಆದರೆ ನಂ.ಗೂ. ೧೮೨ನೆಯ ಶಾಸನದಲ್ಲಿ ಆತನನ್ನು ಕೊಜ್ಗಣಿ ಮಹಾರಾಜಾಧಿರಾಜಪರಮೇಶ್ವರ ಎಂಬ ಬಿರುದಿನಿಂದ ಕರೆಯಲಾಗಿದೆ. ಲಿಪಿಶಾಸ್ತ್ರದ ಆಧಾರದ ಮೇಲೆ ಗು.ಪೇ. ೬೭ನೆಯ ಶಿಲಾಶಾಸನದ ಹಿಂಭಾಗದಲ್ಲಿ ಕಣ್ಡರಿಸಲಾಗಿರುವ ಗು.ಪೇ. ೬೮ನೆಯ ಶಾಸನವು ಆತನದೆಂದೇ ನಿರ್ಧರಿಸಲಾಗಿದೆ. ಎರಡು ಶಾಸನಗಳಲ್ಲಿಯೂ ಗುಣಸಾಗರ ತಮ್ಮಡಿ ಮತ್ತು ಅರಿಊರಿನ ಪನ್ನಿರ್ವರ ಪ್ರಸ್ತಾಪವಿರುವುದೂ ಈ ನಿರ್ಧಾರಕ್ಕೆ ಕಾರಣ.

ಕೊಜ್ಗಣಿಯಿಂದ ಪ್ರಾರಂಭವಾದ ಗಂಗಮನೆತನದ ಅರಸರ ವಂಶಾವಳಿಯನ್ನು ನಿರೂಪಿಸುವ ಶಿಲಾಶಾಸನಗಳಲ್ಲಿ ದೇವರಹಳ್ಳಿಯ ಶಾಸನವೇ (ಗು.ಪೇ ೨೦೭) ಇದುವರೆಗೆ ತಿಳಿದಂತೆ ಮೊದಲನೆಯದು. ಇದರಲ್ಲಿ ಅರಸರ ಕ್ರಮ ಹೀಗಿದೆ: ಕೊಜ್ಗಣಿಯನಂತರ ಮಾಧವ, ವಿಷ್ಣುಗೋತ್ತಮ, ಮಾಧವ, ಅವಿನೀತ, ದುರ್ವಿನೀತ, ವಿಕ್ರಮ, ದುಗ್ಗ, ಶಿವಮಾರ ಮತ್ತು ಕೊಜ್ಗಣಿ. ಈ ಪಟ್ಟಿಯಲ್ಲಿ ಹರಿವರ್ಮ ಮತ್ತು ಮುಷ್ಕರರ ಹೆಸರಿಲ್ಲದಿರುವುದನ್ನು ಗಮನಿಸಬೇಕು.

---

[1] ಎಂ. ಎ. ಆರ್., 1909–10 page 23, para 51

[2] ಈ ಶಾಸನಗಳನ್ನು ಬೆಳಕಿಗೆ ತಂದವರು ತಮಿಳುನಾಡಿನ ಪುರಾತತ್ವ ಇಲಾಖೆಯ ನಿರ್ದೇಶಕರಾದ ಶ್ರೀ ಆರ್. ನಾಗಸ್ವಾಮಿಯವರು. ಮದ್ರಾಸಿನಲ್ಲಿ ೧೯೭೪ರಲ್ಲಿ ವೀರಗಲ್ಲುಗಳ ಬಗೆಗೆ ನಡೆದ ವಿಚಾರಗೋಷ್ಠಿಯಲ್ಲಿ ಇವುಗಳನ್ನು ಪ್ರದರ್ಶಿಸಲಾಗಿತ್ತು.

ದುರ್ವಿನೀತನ ನಂತರ ವಿಕ್ರಮನೆಂಬ ಹೆಸರನ್ನು ಕೊಟ್ಟಿದೆ. ಈತನು ಶ್ರೀವಿಕ್ರಮನೇ ಆಗಿರಬೇಕು. ನಂತರ ದುಗ್ಗನ ಹೆಸರು ಬಂದು ಅದಾದ ಬಳಿಕ ಶಿವಮಾರನನ್ನು ಹೆಸರಿಸಿರುವುದರಿಂದ ಆ ದುಗ್ಗನೇ ಭೂವಿಕ್ರಮನಿರಬಹುದು. ಭೂವಿಕ್ರಮನು 'ದುಗ್ಗ'ನೆಂಬ ಬಿರುದನ್ನು ಹೊಂದಿದ್ದನೆಂಬುದು ನಮಗೆ ತಿಳಿದಿರುವ ಸಂಗತಿಯೇ. ಕೊಜ್ಗಣಿ ಎಂಬುದು ಶ್ರೀಪುರುಷನಿಗೇ ಅನ್ವಯವಾಗಿದೆ. ಪದ್ಯರೂಪದಲ್ಲಿರುವ ಈ ವಂಶಾವಳಿಯನ್ನು ಇದೇ ತೆರನಾದ ಆದರೆ ಸ್ವಲ್ಪ ವ್ಯತ್ಯಸ್ತವಾಗಿರುವ ವಂಶಾವಳಿಯನ್ನುಳ್ಳ ಮಾರಸಿಂಗ–ಎಱೆಯಪ್ಪನ ಗಂಜಾಂ ಲೇಖ[1] ಇತ್ಯಾದಿ ಇತರ ಗಂಗ ತಾಮ್ರಶಾಸನಗಳೊಂದಿಗೆ ಹೋಲಿಸಬಹುದು. ಸದ್ಯ ನಾವು ಪರಿಶೀಲಿಸುತ್ತಿರುವ ಶಾಸನವು ಉಪಗೊಳ ಎಂಬ ಗ್ರಾಮದ ೭೦ ಸೈನಿಕರು ಗಂಗರ ಯುವರಾಜ ದುರ್ವಿನೀತ ಎಱೆಯಪ್ಪನು ಕೊಸರುಪುಟ್ಕಿಯನ್ನು ಮುತ್ತಿದ ಕಾಲದಲ್ಲಿ ಪರಾಕ್ರಮದಿಂದ ಹೋರಾಡಿ ಶತ್ರುರಾಜರನ್ನು ದಮನಮಾಡಿದ ಸಂಗತಿಯನ್ನು ಮತ್ತು ಅವರ ಪರಾಕ್ರಮಕ್ಕೆ ಮೆಚ್ಚಿದ ರಾಜನು ಹಳ್ಳಿಯೊಂದನ್ನು ದಾನವಾಗಿಕೊಟ್ಟಿದ್ದನ್ನು ನಿರೂಪಿಸುವಂತೆ ತೋರುತ್ತದೆ. ಇಲ್ಲಿ ಉಕ್ತವಾಗಿರುವ ದುರ್ವಿನೀತ ಎಱೆಯಪ್ಪನು ಶ್ರೀಪುರುಷನ ಮಗನಾದ ದುಗ್ಗಮಾರ ಎಱೆಯಪ್ಪನೇ ಹೌದು. ಚಾಳುಕ್ಯ ಅರಸನಾದ ಎರಡನೆಯ ವಿಕ್ರಮಾದಿತ್ಯನು ದುರ್ವಿನೀತ ಎಱೆಯಪ್ಪ ಕೊಜ್ಗಣಿಗೆ ಉಳ್ಚಳು ಮತ್ತು ಪರಿಯಳು ಎಂಬ ಗ್ರಾಮಗಳನ್ನು ದಾನವಾಗಿ ಇತ್ತ ವಿಚಾರವನ್ನು ತಿಳಿಸುವ ಉಳ್ಚಾಳ ಶಾಸನದಿಂದಲೂ[2] ಆತನಿಗೆ ಆ ಹೆಸರಿತ್ತೆಂಬುದು ತಿಳಿದುಬರುತ್ತದೆ.

ನಾವು ಕಂಡುಹಿಡಿದ ಹೊಸ ಶಾಸನಗಳಲ್ಲಿ ನಂ.ಗೂ. ೧೪೭ನೆಯ ಕಣೆನೂರ ಶಾಸನವೂ ಒಂದು. ಈ ಶಾಸನವು ಅಪೂರ್ಣವಾಗಿದ್ದು ಸುಮಾರು ೮ನೆಯ ಶತಮಾನಕ್ಕೆ ಸೇರಿದುದಾಗಿದೆ. ಪೆರ್ಮಾನಡಿಯು ಅಳುತ್ತಿದ್ದಾಗ ಕಾರೆಗಾಡು ೭೦ನ್ನು ಅದಿಯೆನಾಡಿಯ ಎಂಬುವವನು ಆಳುತ್ತಿದ್ದನೆಂಬುದನ್ನು ಇದು ತಿಳಿಸುತ್ತದೆ. ಈ ಶಾಸನವು ೮ನೆಯ ಶತಮಾನಕ್ಕೆ ಸೇರಿದುದೆಂದು ಹೇಳಿರುವ ಕಾರಣ ಶಾಸನದಲ್ಲಿ ಉಕ್ತವಾಗಿರುವ ಪೆರ್ಮಾನಡಿಯು ಗಂಗರ ಶ್ರೀಪುರುಷನೆಂದು ಭಾವಿಸಬಹುದಾಗಿದೆ. ಕಾಂಚಿಯ ಪಲ್ಲವ ಅರಸನನ್ನು ಸೋಲಿಸಿದ ಮೇಲೆ ಆತ 'ಪೆರ್ಮಾನಡಿ' ಎಂಬ ಬಿರುದನ್ನು ಹೊಂದಿದನೆಂಬುದು ನಮಗೆ ತಿಳಿದಿರುವ ವಿಷಯವೇ ಆಗಿದೆ.

ಹೆ.ಕೋ. ೬೩ನೆಯ ಹೆಬ್ಬಲಗುಪ್ಪೆ ಶಾಸನದಿಂದ ನರಸಿಂಗೆಱೆ ಅಪ್ಪೋರ್ ಎಂಬಾತನು ದುಗ್ಗಮಾರ ಕೋಯಿಲ್ ವಸದಿಗಾಗಿ, ಅಂದರೆ ದುಗ್ಗಮಾರನ ಹೆಸರಿನಲ್ಲಿ ನಿರ್ಮಿಸಲಾದ (ದುಗ್ಗಮಾರನಿಂದಲೇ ಕಟ್ಟಲ್ಪಟ್ಟ ?) ಬಸದಿಗೆ ಭೂಮಿಯನ್ನು ಕೊಟ್ಟನೆಂಬ ವಿಷಯ ತಿಳಿದುಬರುತ್ತದೆ.

ನಂ. ಗೂ. ೩೮೫ನೆಯ ಹುಸುಕೂರಿನ ಶಾಸನದ ಕಾಲ ಶಕ ೭೯೨. ಅದು ಕ್ರಿ.ಶ. ೮೭೦–೭೧ಕ್ಕೆ ಸರಿಹೊಂದುತ್ತದೆ. ಆಗ ಸತ್ಯವಾಕ್ಯ ರಾಚಮಲ್ಲ ಪೆರ್ಮಾನಡಿಯು ರಾಜ್ಯಭಾರಮಾಡುತ್ತಿದ್ದನು. ಯುವರಾಜನಾಗಿದ್ದುಕೊಂಡು ಕೊಂಗಲ್ನಾಡು ಮತ್ತು ಪೂನಾಡು (ಪುನ್ನಾಟ ?) ಗಳಲ್ಲಿ ಕಾರ್ಯಭಾರ ನಡೆಸುತ್ತಿದ್ದ ಬೂತರಸನು ಕೋಟೆಯೊಂದರ ಮುತ್ತಿಗೆಯ ಕಾಲದಲ್ಲಿ ಪೆರ್ಮಾಡಿಯ ಅಪ್ಪಣೆಯ ಮೇರೆಗೆ ಹೋರಾಡಿದನೆಂದು ಈ ಶಾಸನದಿಂದ ತಿಳಿದುಬರುತ್ತದೆ. ಇಲ್ಲಿ ಉಕ್ತವಾಗಿರುವ ಬೂತರಸನನ್ನು ಹಿರಿಯ ಸಹೋದರನಿಗೆ ರಾಜಕಾರ್ಯದಲ್ಲಿ ನೆರವಾಗಿದ್ದ ಮೊದಲನೆಯ ಬೂತುಗನೆಂದು ಗುರುತಿಸಬಹುದು. ಮುತ್ತಿಗೆಗೀಡಾದ ಕೋಟೆಯ ಹೆಸರು ನಷ್ಟವಾಗಿದೆ.

ಸತ್ಯವಾಕ್ಯಪೆರ್ಮಾನಡಿಯ ಆಳ್ವಿಕೆಗೆ ಸಂಬಂಧಿಸಿದ ಗು. ಪೇ. ೫೭ನೆಯ ಚಿಕ್ಕಕಾಟಿಯ ಶಾಸನದಲ್ಲಿ ದಾನಕೊಟ್ಟವನು ಬೂತುರಸನೆಂದು ಹೇಳಲಾಗಿದೆ. ಇವರಿಬ್ಬರನ್ನೂ ಕ್ರಮವಾಗಿ ಎರಡನೆಯ ರಾಚಮಲ್ಲ ಮತ್ತು ಮೊದಲನೆಯ ಬೂತುಗನೆಂದು ಗುರುತಿಸಬಹುದು. ಕಾಲವನ್ನು ಸೂಚಿಸದ ಈ ಶಾಸನ ಸುಮಾರು ಕ್ರಿ. ಶ. ೯ನೆಯ ಶತಮಾನಕ್ಕೆ ಸೇರಿದುದಾಗಿದೆ.

ನಂ. ಗೂ. ೨೧೦ನೆಯ ಶಾಸನ ನೀತಿಮಾರ್ಗನ ಮಗ (?) ನಾದ ಕೊಂಗುಣಿವರ್ಮಧರ್ಮರಾಜ ಪೆರ್ಮಾನಡಿಯದು. ಆತನ ಆಳ್ವಿಕೆಯ ೯ನೆಯ ವರ್ಷಕ್ಕೆ ಸಮನಾದ ವಿಜಯಸಂವತ್ಸರ ಆ ಶಾಸನದ ಕಾಲ ಎಂದು ಅದರಲ್ಲಿ ಸೂಚಿಸಿದಂತಿದೆ. ಶಾಸನದಲ್ಲಿ ಉಕ್ತನಾದ ಅರಸನು ಇಮ್ಮಡಿ ರಾಚಮಲ್ಲನೆಂದು ಗುರುತಿಸಬಹುದು. ಆದರೆ, ಆತನ

---

[1] ಎ. ಕ. IV, ಶ್ರೀ. ಪ. ೧೬೦

[2] *Annual Report on South Indian Epigraphy*, 1943–44 and 1944–45; Appendix E for the Collection of 1941–42.

ಆಳ್ವಿಕೆಯ ೯ನೆಯ ವರ್ಷವು ಉಕ್ತವಾದ ವಿಜಯಸಂವತ್ಸರಕ್ಕೆ ಸರಿಹೊಂದುವುದಿಲ್ಲ. ವಿಜಯ ಸಂವತ್ಸರವು ಕ್ರಿ. ಶ. ೮೭೩ಕ್ಕೆ ಸಮನಾಗುತ್ತದೆ. ಅದು ಆತನ ಆಳ್ವಿಕೆಯ ೩ನೆಯ ವರ್ಷವಾಗುತ್ತದೆ, ೯ನೆಯ ವರ್ಷವಲ್ಲ.

ಈ ಸಂಪುಟದಲ್ಲಿರುವ ಸು. ೯ನೆಯ ಶತಮಾನಕ್ಕೆ ಸೇರಿದ ಗಂಗರ ಶಾಸನಗಳು ನೀತಿಮಾರ್ಗ ಮತ್ತು ಸತ್ಯವಾಕ್ಯ ಎಂಬ ಬಿರುದನ್ನು ಹೊಂದಿದ್ದ ಇಬ್ಬರ ಆಳ್ವಿಕೆಗೆ ಸಂಬಂಧಿಸಿದುದಾದರೂ ಅವರ ಹೆಸರುಗಳನ್ನು ತಿಳಿಸಿಲ್ಲ. ಆವರಿಬ್ಬರನ್ನು ಗುರುತಿಸುವುದು ಸುಲಭವಲ್ಲ. ಅಲ್ಲದೆ, ಮೊದಲು ನೀತಿಮಾರ್ಗ, ನಂತರ ಸತ್ಯವಾಕ್ಯ, ಈ ರೀತಿ ಪರ್ಯಾಯ ಕ್ರಮದಲ್ಲಿ ಗಂಗ ಅರಸರು ಈ ಬಿರುದುಗಳನ್ನು ಹೊಂದಿದ್ದರೇ ಎಂಬುದನ್ನೂ ಖಚಿತವಾಗಿ ಹೇಳಲಾಗುವುದಿಲ್ಲ. ನಂ. ಗೂ. ೩೧೩ ಮತ್ತು ೩೧೪ನೆಯ ಗಟ್ಟವಾಡಿ ಶಾಸನಗಳನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು. ಮೊದಲನೆಯ (ನಂ. ಗೂ. ೩೧೩) ಶಾಸನವು ಸತ್ಯವಾಕ್ಯ ಕೊಙ್ಗುಣಿವರ್ಮ ಪೆರ್ಮಾನಡಿಯ ಆಳ್ವಿಕೆಗೆ ಸಂಬಂಧಿಸಿದ್ದು ಆತನ ಆಳ್ವಿಕೆಯ ೫ನೆಯ ವರ್ಷ ಎಂದು ಕಾಲವನ್ನು ಸೂಚಿಸಲಾಗಿದೆ. ನಂತರದ ಶಾಸನವೂ ಆಳ್ವಿಕೆಯ ೫ನೆಯ ವರ್ಷವನ್ನೇ ಸೂಚಿಸಿದೆ. ಆದರೆ ರಾಜನನ್ನು ನೀತಿಮಾರ್ಗ ಪೆರ್ಮಾನಡಿ ಎಂದು ಹೆಸರಿಸಲಾಗಿದೆ. ಪ್ರಾಸಂಗಿಕವಾಗಿ ಗಮನಿಸಬಹುದಾದ ಅಂಶವೆಂದರೆ ಎರಡೂ ಶಾಸನಗಳೂ ಒಂದೇ ಶಿಲೆಯ ಒಂದೊಂದು ಮುಖದಲ್ಲಿ ಕಂಡರಿಸಲ್ಪಟ್ಟಿವೆ. ಈ ಎರಡೂ ಶಾಸನಗಳು (ಮೊದಲನೆಯ ಮುದ್ರಣ ನಂ ಗೂ. ೯೭ ಮತ್ತು ೯೮) ನೀತಿಮಾರ್ಗನ ಆಳ್ವಿಕೆಯ ಕಾಲದ ಐದನೆಯ ವರ್ಷದ್ದೆಂದು ಪರಿಗಣಿಸಿರುವ ಶ್ರೀ ರೈಸ್‌ರವರು ಶಕವರ್ಷದ ನಿರ್ದೇಶನವಿಲ್ಲದಿದ್ದರೂ ಶಾಸನೋಕ್ತ ಅರಸನ ಆಳ್ವಿಕೆಯ ಕಾಲದ ೫ನೆಯ ವರ್ಷ ಕ್ರಿ ಶ. ೮೯೮ ಎಂದು ಸೂಚಿಸಿದ್ದಾರೆ.[1] ಎರಡೂ ಶಾಸನಗಳಲ್ಲಿ ಉಕ್ತವಾಗಿರುವ ವಿಷಯವೂ ಒಂದೇ ಆಗಿದೆ. ಈ ಸತ್ಯವಾಕ್ಯನನ್ನೇ ಎರಡನೆಯ ರಾಚಮಲ್ಲನೆಂದು ಭಾವಿಸುವುದಾದರೆ ಆತನ ಆಳ್ವಿಕೆಯ ೫ನೆಯ ವರ್ಷವು ಸು. ಕ್ರಿ. ಶ. ೮೭೫–೭೬ ಆಗುವುದು. ಹಾಗಲ್ಲದೆ ಈತನು ತಂದೆಯಾದ ನೀತಿಮಾರ್ಗ ಎಱೆಗಂಗನೆಂದು ಭಾವಿಸುವುದಾದರೆ ಆತನ ಕಾಲ ಸು. ಕ್ರಿ. ಶ. ೮೪೮–೪೯ ಆಗುತ್ತದೆ. ಕ್ರಿ. ಶ. ೮೯೮ರಲ್ಲಿ ಇಮ್ಮಡಿ ರಾಚಮಲ್ಲನು ಆಳುತ್ತಿದ್ದರೂ ಆತನು ತನ್ನ ಸೋದರಳಿಯನಾದ ಮೊದಲನೆಯ ಬೂತುಗನ ಮಗನಾದ ಎಱೆಗಂಗನನ್ನು ಆಡಳಿತದಲ್ಲಿ ಸಮಭಾಗಿಯಾಗಿ ಮಾಡಿಕೊಂಡು ಇಬ್ಬರೂ ಒಟ್ಟಾಗಿ ಆಳ್ವಿಕೆ ನಡೆಸುತ್ತಿದ್ದರು. ರೈಸ್‌ರವರು ಸೂಚಿಸಿರುವ ಕಾಲಾನು ಪೂರ್ವಿಯಲ್ಲಿ ಇಮ್ಮಡಿ ರಾಚಮಲ್ಲನು ಸುಮಾರು ೮೯೦–೯೦೭ರ ವರೆಗೆ ಆಳಿದನೆಂದು ಹೇಳಿದ್ದಾರೆ. ಆದರೆ ಆತನ ಆಳ್ವಿಕೆ ಎರಡು ದಶಕಗಳ ಮೊದಲೇ ಪ್ರಾರಂಭವಾಗಿತ್ತು.

ಪ್ರಾಸಂಗಿಕವಾಗಿ ಈ ಶಾಸನ ಪಾಠಕ್ಕೆ ರೈಸ್‌ರವರು ನೀಡಿರುವ ಭಾಷಾಂತರಕ್ಕೂ, ನಾವು ಇವುಗಳನ್ನು ಅರ್ಥೈಸಿರುವುದಕ್ಕೂ ವ್ಯತ್ಯಾಸಗಳಿವೆ ಎಂಬುದನ್ನು ಗಮನಿಸಬೇಕಾಗಿದೆ. "ತಾಯೂರ ಪರೆಕರೆ ಬಸವಯ್ಯನು ಒಡ್ಡಿನ ಬಳಿಯ ತನ್ನ ಜೋಳದ ಹೊಲವನ್ನು . . . . ಮಾಡಿ ಆ ನೀರುಳ್ಳ ಸ್ಥಳ (ಸಾಲುಹೊಳೆ-fords ?) ವನ್ನು ಮಾರಗವುಣ್ಡ ಸಾನ್ತಿಗವುಣ್ಡ, ಎಪ್ಪತ್ತು (ಜನ) ಹಳ್ಳಿಮರಿಗ ಕುಂಬಣ್ಣ—ಇವರಿಗೆ ಮತ್ತು ಬುಗವೆಯ ಚಿಕ್ಕಮಕ್ಕಳನ್ನು ಕಂಡು ಸಂತಸಪಟ್ಟು ಆಕೆಗೆ" ಕೊಟ್ಟನೆಂದು ರೈಸ್‌ರವರು ಆ ಶಾಸನಪಾಠವನ್ನು ಭಾಷಾಂತರಿಸಿದ್ದಾರೆ. 'ಎಳೆಮಕ್ಕಳ್' ಎಂಬುದನ್ನು ಚಿಕ್ಕಮಕ್ಕಳು ಎಂದು ಅರ್ಥೈಸಿದ್ದಾರೆ. ಆದರೆ ಗ್ರಾಮದ ಸಭೆಗೆ 'ಎಳೆಮಕ್ಕಳ್' ಎಂಬ ಹೆಸರಿದ್ದಿತು. ದತ್ತಿ ನೀಡಿದ್ದು ಈ ಸಭೆಗೆ. 'ತನ್ನ ಪರವರಿಯ ಜೋಳದ ಕೆಯ್ಯ ಪಱೆಕವ್ಬಳದೆಡಕೆಯ್ಯಾಸಿ' ಎಂಬುದನ್ನು ನಾವು "ಬೀಳುಬಿದ್ದಿದ್ದ ತನ್ನ ಜೋಳದ ಹೊಲವನ್ನು ಫಲವತ್ತಾದ ಭತ್ತದ ಗದ್ದೆಯಾಗಿ ಪರಿವರ್ತಿಸಿ" ಎಂದು ಅರ್ಥೈಸಿದ್ದೇವೆ. ಇಂತಹ ಭೂಮಿಯನ್ನು ಎಪ್ಪದಿಬೊಗ್ಗಪಳ್ಳಿಯ ಮಾರಗವುಣ್ಡ, ಶಾಂತಿಗವುಣ್ಡ ಮತ್ತು ಮರಿಗ ಕುಂಬಣ್ಣರಿಗೆ ದಾನ ಮಾಡಿದನೆಂದು ಹೇಳಿದ್ದೇವೆ.

ನಂ. ಗೂ. ೨೦೪ನೆಯ ಶಾಸನದ ಕಾಲವನ್ನು ಸತ್ಯವಾಕ್ಯ ಕೊಂಗುಣಿವರ್ಮ ಪೆರ್ಮಾನಡಿಯು ಪಟ್ಟಾಭಿಷಿಕ್ತನಾದ ೨೨ನೆಯ ವರ್ಷ ಎಂದು ಹೇಳಿದೆ. ಉತ್ತರಿಳ್ಳಗದ ಕೋಟೆಯಲ್ಲಿ ನೊಳಂಬರೊಡನೆ ನಡೆದ ಯುದ್ಧದಲ್ಲಿ ರಾಚೆಯಗಂಗನು ಮೃತಿಹೊಂದಿದ ವಿಷಯವನ್ನು ಆ ಶಾಸನವು ಹೇಳುವದಲ್ಲದೆ, ದೊರೆ ಹಾಗೂ ಎಱೆಯಪ್ಪ ಇಬ್ಬರೂ ಕೂಡಿ ಇಗ್ಗಲಿ ಮತ್ತು ದುದುಗೆಱೆ ಎಂಬ ಗ್ರಾಮಗಳನ್ನು ಕಲ್ನಾಡಾಗಿ ಕೊಟ್ಟ ವಿಷಯವನ್ನು ಪ್ರಸ್ತಾಪಿಸಿದೆ. ಈ ಶಾಸನದ ಕಾಲ ಕ್ರಿ. ಶ. ೮೯೨–೯೩ ಇರಬೇಕು. ಇಲ್ಲಿ ಉಕ್ತವಾಗಿರುವ ನೊಳಂಬರಾಜನು ಮೊದಲನೆಯ ನೊಳಂಬ ಮಹೇಂದ್ರನಿರ ಬಹುದು. (ಸು. ಕ್ರಿ. ಶ. ೮೬೦–೮೯೫). ಆತ ಕೆಲವು ವರ್ಷಗಳ ನಂತರ ನೀತಿಮಾರ್ಗ ಎಱೆಗಂಗನಿಂದ ಸೋಲಿಸಲ್ಪಟ್ಟು ಕೊಲ್ಲಲ್ಪಟ್ಟನು.

[1] ಎ. ಕ. III, ಮೊದಲನೆಯ ಆವೃತ್ತಿ, Introduction ಪು. 4.

ನಂ. ಗೂ. ೧೯೭ನೆಯ ವೀರಗಲ್ಲಿನ ತುಂಡುಶಾಸನವೊಂದು ಯುದ್ಧವೊಂದರಲ್ಲಿ ಚೋ. . . . ಳಿ ಮುತ್ತರಸನನ್ನು ಕೊಂದು ಬೇರೆ ಬೇರೆ ನಾಲ್ವರು ಮೃತಿಹೊಂದಿದ ವಿಷಯುವನ್ನು ತಿಳಿಸುತ್ತದೆ. ಎಜೆಯಪ್ಪ, ಪೆರ್ಮಾಡಿ ಹಾಗೂ ಮಹಾದೇವಿಯರು ಕೊಟ್ಟ ದಾನದ ವಿಷಯುವನ್ನೂ ನಿರೂಪಿಸುತ್ತದೆ. ಈ ಮೂವರೂ ಕ್ರಮವಾಗಿ ಇಮ್ಮಡಿ ರಾಚಮಲ್ಲ, ಆತನ ರಾಣಿ ಮತ್ತು ಜೊತೆಯಲ್ಲಿಯೇ ಆಳುತ್ತಿದ್ದ ಸೋದರಳಿಯನಾದ ಎಜೆಯಪ್ಪ ಆಗಿರಬಹುದು. ಮಹಾದೇವಿ ಎಂಬುದಕ್ಕೆ ಪೆರ್ಮಾಡಿಯ ರಾಣಿ ಎಂಬಷ್ಟೇ ಅರ್ಥವಿರಬಹುದು. ಆದರೆ ಅದು ಆಕೆಯ ಹೆಸರಾಗಿರಬಾರದೇಕೆ? ಶಾಸನದಲ್ಲಿ ಕಾಲನಿರ್ದೇಶವಿಲ್ಲ. ಇನು ಸುಮಾರು ೧೦ನೆಯ ಶತಮಾನಕ್ಕೆ ಸೇರಿದ ಶಾಸನ.

ನಂ. ಗೂ. ೩೭೧ನೆಯ ಕ್ರಿ.ಶ. ೧೦ನೆಯ ಶತಮಾನದ ಭಗ್ನವಾದ ಶಾಸನ ಗಂಗರ ಅರಸನೊಬ್ಬನಿಗೆ ಸೇರಿದುದಾಗಿದೆ. ಆದರೆ ಆ ಅರಸನ ಹೆಸರು ನಷ್ಟವಾಗಿದೆ. ಶಾಸನದಲ್ಲಿ ಕೇಸವಯ್ಯನೆಂಬೊಬ್ಬ ಶೂರನು ಕದನದಲ್ಲಿ ಇಂದಮರಸರ ದುಂಡಿಗೆಯನ್ನು ಕಸಿದು, ಆದನ್ನು "ಪೊನ್ನಕೆಯ್ಯು ಎಜೆಯಪ್ಪಂಗೊಪ್ಪಿಸಿವೆನ್ನು" ಭಗವನ್ತನೆಂಬ, ಬಹುಶಃ ಅವನ ಮೇಲಧಿಕಾರಿಯೊಬ್ಬನಿಗೆ, ಇತರ ವಸ್ತುಗಳೊಡನೆ ಕೊಟ್ಟು ಮತ್ತೊಮ್ಮೆ ಕದನರಂಗಕ್ಕೆ ಹಿಂದಿರುಗಿ ಅಲ್ಲಿ ಅಂತಿಮವಾಗಿ ಅಸುವನ್ನು ನೀಗಿದನೆಂದು ಹೇಳಿದೆ. ಇಲ್ಲಿ ಉಕ್ತನಾದ ಎಜೆಯಪ್ಪನು ಬೂತುಗ (I) ನ ಮಗ ಎಜೆಗಂಗನಾಗಿರಬಹುದಾದ ಸಾಧ್ಯತೆ ಇದೆ. ಮಹೇಂದ್ರನೊಡನೆ ಈತನು ಹೂಡಿದ ಕದನಗಳಲ್ಲಿ ಇದೊಂದಾಗಿದ್ದು ಇದರಲ್ಲಿ ಇಂದಮರಸನೆಂಬಾತನು ಗಂಗರನ್ನು ಎದುರಿಸಿದಂತೆ ತೋರುತ್ತದೆ. ಹಾಗಿದ್ದಲ್ಲಿ ಈ ಶಾಸನ ಇಮ್ಮಡಿ ಎಜೆಗಂಗನದೆಂದು ಹೇಳಬಹುದು.

ನಂ.ಗೂ. ೩೨೦ರ ಗಟ್ಟವಾಡಿ ಶಾಸನದ ಕಾಲವು ಶಕವರ್ಷ ೧೧೧. ಅದು ಎಜೆಹವೆಮ್ಮಡಿಯ ಆಳ್ವಿಕೆಯನ್ನು ಪ್ರಸ್ತಾಪಿಸಿದೆ. ಶಕವರ್ಷವು ೧೧೧ಕ್ಕೆ ಬದಲು ೭೧೧ ಆಗಿದ್ದು, ಶಾಸನದಲ್ಲಿ ಉಕ್ತವಾದ ಅಂಗೀರಸ ಸಂವತ್ಸರವು ಶಕವರ್ಷ ೭೧೪ಕ್ಕೆ (ಕ್ರಿ.ಶ. ೭೯೨) ಹೊಂದಿಕೆಯಾಗುವ ಕಾರಣ, ಕ್ರಿ.ಶ. ೭೯೨ ಶಾಸನಕಾಲವಾಗಿರಬೇಕೆಂಬುದು ರೈಸ್‌ರವರ ಅಭಿಪ್ರಾಯವಾಗಿದೆ. ಆದರೆ ಶಾಸನದ ಲಿಪಿಯು ಸ್ಪಷ್ಟವಾಗಿ ೧೦ನೆಯ ಶತಮಾನದ್ದಾಗಿದೆ. ಆದ್ದರಿಂದ ಶಾಸನದ ಕಾಲ ಕ್ರಿ.ಶ. ೯೧೨–೧೩ ಅಥವಾ ಕ್ರಿ.ಶ. ೯೭೨–೭೩ ಆಗಿರಬಹುದು. ಶಕವರ್ಷ ೭೧೧ ಎಂದು ಊಹಿಸಿರುವ ರೈಸ್‌ರವರು ಮುಂದುವರೆದು ಇಲ್ಲಿ ಉಕ್ತವಾಗಿರುವ ಎಜೆಹವೆಮ್ಮಡಿಯು "ಗಂಗರೊಡನೆ ಸ್ನೇಹಸಂಪರ್ಕ ಹೊಂದಿದ . . . . ಮಾಂಡಳಿಕ ಮನೆತನ"ವೊಂದಕ್ಕೆ ಸೇರಿದವನೆಂದು ಹೇಳಿ ಆತನು ಸುಮಾರು ೮ ನೆಯ ಶತಮಾನದಲ್ಲಿದ್ದನೆಂದು ಸೂಚಿಸಿದ್ದಾರೆ. ಆದರೆ ಶಾಸನವು ನಂತರದ ಕಾಲದ್ದಾಗಿದೆ. ಈ ಸಂದರ್ಭದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಉತ್ಕೂರು ಶಾಸನವನ್ನು ಇಲ್ಲಿ ಪ್ರಸ್ತಾಪಿಸಬಹುದು. ಜಿಮಡಿ ಎಂಬಲ್ಲಿ ಬೀರನೊಳಂಬನೊಡನೆ ಕದನವೊಂದರಲ್ಲಿ ತೊಡಗಿದ್ದ ನೀತಿಮಾರ್ಗವೆಮ್ಮಡಿಯ ಉಲ್ಲೇಖ ಇದರಲ್ಲಿದೆ. ಕಾಲನಿರ್ದೇಶವಿಲ್ಲದ ಈ ಶಾಸನ ೯ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿದ್ದು ಉಕ್ತನಾದ ನೀತಿಮಾರ್ಗವೆಮ್ಮಡಿಯು ನೀತಿಮಾರ್ಗ ಎಜೆಯಪ್ಪನಾಗಿರಬಹುದೆಂದು ಗುರುತಿಸಲಾಗಿದೆ.[1] ನಮ್ಮ ಮೇಲ್ಕಂಡ ಶಾಸನದ ಎಜೆಹವೆಮ್ಮಡಿಯು ೮೮೩ ರಿಂದ ೯೨೦ರ ವರೆಗೆ ಆಳಿದ ಈ ಆರಸನೇ ಆಗಿರಬಹುದಾದ ಸಾಧ್ಯತೆ ಇದೆ. ಇದು ನಿಜವಾದಲ್ಲಿ ಶಾಸನದಕಾಲ ಸು. ಕ್ರಿ.ಶ. ೯೧೨-೧೩ ಆಗುತ್ತದೆ.

ಹೆ.ಕೋ. ೨೩ನೆಯ ಶಾಸನವು ಕುತೂಹಲಕಾರಿಯಾಗಿದೆ. ಅದು ಎಜೆಯಪ್ಪನ ಮರಣವನ್ನು ಕುರಿತು ಹೇಳುವಷ್ಟಕ್ಕೇ ನಿಲ್ಲದೆ ಅದರ ರಾಜಕೀಯ ಪರಿಣಾಮಗಳನ್ನೂ ನಮೂದಿಸಿದೆ. ಎಜೆಯಪ್ಪನ ಮರಣಾನಂತರ ಆತನ ರಾಜ್ಯ ಹಾಗೂ ಕೋಶದಲ್ಲಿ ಅರ್ಧಭಾಗವನ್ನು ಕಿರಿಯ ರಾಚಮಲ್ಲನನ್ನು ಬಲಾತ್ಕರಿಸಿ ಪಡೆಯಬಹುದೆಂಬ ನಂಬಿಕೆಯಿಂದ ಭುವನಾದಿತ್ಯನು ಬಯಲ್ನಾಡಿಗೆ ಆಗಮಿಸಿದನು. (ಮನ್ನೆಬೇಡಿದೊಳರೆ ನೆಲನುಂ ಭಂಡಾರವುಮಂ ಕೊಟ್ಟಾನೆಂದು). ಆದರೆ ಐವರು ಸಾಮಂತರು ಮತ್ತು ಪೆರ್ಗಡೆಗಳು ಬಯಲ್ನಾಡನ್ನು ರಾಚಮಲ್ಲನ ಹೊರತು ಬೇರೆ ಯಾರೊಬ್ಬರೂ ಆಳಲು ಒಪ್ಪುವುದಿಲ್ಲವೆಂದು ಹೇಳಿ ಭುವನಾದಿತ್ಯನನ್ನು ವಿರೋಧಿಸಿದರು. ತತ್ಫಲವಾಗಿ ಮಾಗುನ್ನಿಯಲ್ಲಿ ನಡೆದ ಕದನದಲ್ಲಿ ನಿನ್ನಿಯ ಕೊರನ್ತಿಯರಸರ ನಾಲ್ವರು ಮಕ್ಕಳೂ ಕಾದಿ ಸತ್ತರು. ಶಾಸನೋಕ್ತ ಎಜೆಯಪ್ಪನು ನೀತಿಮಾರ್ಗ ಎಜೆಗಂಗನಾಗಿದ್ದು, ಆತನಿಗೆ ನರಸಿಂಹ, ಮೂರನೆಯ ರಾಚಮಲ್ಲ ಮತ್ತು ಇಮ್ಮಡಿ ಬೂತುಗ ಎಂಬ ಮೂವರು ಮಕ್ಕಳಿದ್ದರು. ಈ ಮೂವರಲ್ಲಿ ಮೊದಲನೆಯವನು ಕೆಲವುಕಾಲ ಆಳಿದ ನಂತರ ಮೂರನೆಯ ರಾಚಮಲ್ಲನು ಪಟ್ಟಕ್ಕೆ ಬಂದನು. ಆತನ ಕಿರಿಯ ಸಹೋದರನಾದ ಬೂತುಗನು ರಾಚಮಲ್ಲನನ್ನು ನಿವಾರಿಸಿ ಪಟ್ಟಕ್ಕೆ ಬರಲು ಬಯಸಿದನು. ಅದಕ್ಕಾಗಿ ರಾಷ್ಟ್ರ

---

[1] *A.R.S.I.E.* 1918, pt II para 20, p. 140 (No. 763 of 1917)

ಕೂಟ ಮೂರನೆಯ ಕೃಷ್ಣನ ಸಹಾಯ ಪಡೆದು ಯುದ್ಧದಲ್ಲಿ ರಾಚಮಲ್ಲನನ್ನು ಕೊಂದು ತನ್ನ ಇಚ್ಛೆಯನ್ನು ನೆರವೇರಿಸಿಕೊಂಡನೆಂಬುದು ತಿಳಿದ ವಿಷಯವೇ. ಇದಕ್ಕೂ ಹಿಂದಿನ ಘಟನೆಯನ್ನು ನಮ್ಮ ಈ ಶಾಸನ ತಿಳಿಸುತ್ತದೆ. ಬೂತುಗನ(?) ಪರವಾಗಿದ್ದ ಅಧಿಕಾರಿಯಾದ ಭುವನಾದಿತ್ಯನು ರಾಚಮಲ್ಲನ ಬಳಿ ಬಂದು ರಾಜ್ಯದಲ್ಲಿ ಪಾಲನ್ನು ಕೇಳಿದನು. ಆದರೆ ಸಾಮಂತರು ಮತ್ತು ಪೆರ್ಗಡೆಗಳು ರಾಚಮಲ್ಲನ ಪರ ವಹಿಸಲಾಗಿ ಅಂತಃಕಲಹ ಪ್ರಾರಂಭವಾಯಿತು. ರೈಸ್‌ರವರು ಈ ಶಾಸನವನ್ನು ಅರ್ಥವಿಸಿರುವ ಬಗೆ ಬೇರೆ ರೀತಿಯದಾಗಿದೆ. ಅಧಿಕಾರಿಯು ರಾಚಮಲ್ಲನನ್ನು "ರಾಜ್ಯ ಕೋಶಗಳನ್ನು ಪರಸ್ಪರವಾಗಿ ಹಂಚಿಕೊಳ್ಳಲು ಮಣ್ಣೆಯ ಅರಮನೆಗೆ ಬರಲು ಆಹ್ವಾನಿಸಿದನು" ಎಂದು ಅವರು ಅರ್ಥೈಸಿದ್ದಾರೆ. ಈ ಬಗೆಯ ಅರ್ಥವಿವರಣೆ ಸರಿಯೆಂದು ಕಂಡುಬರುವುದಿಲ್ಲ.

ಗು.ಪೇ. ೨೯ನೆಯ ಶಾಸನವು ಸುಮಾರು ೧೦ನೆಯ ಶತಮಾನಕ್ಕೆ ಸೇರಿದುದಾಗಿದೆ. ಅದು ಚಾವುಣ್ಡ ಪೆರ್ಮಾನಡಿಯು ಪಟ್ಟಕ್ಕೆ ಬಂದ ೭ನೆಯ ವರ್ಷಕ್ಕೆ ಸಂಬಂಧಿಸಿದೆ. ಈ ಚಾವುಣ್ಡನು ಯಾರು ಎಂಬುದನ್ನು ಗುರುತಿಸಲು ಸಾಧ್ಯವಾಗಿಲ್ಲ. ಈತನು ಎ.ಕ. III ಟಿ. ನರಸೀಪುರ ೯೯ನೆಯ ಶಾಸನದಲ್ಲಿ ನಮೂದಿಸಲಾದ ಚಾವುಣ್ಡಯ್ಯನಿರಬಹುದೆಂದು ಊಹಿಸಲಾಗಿದೆ. ಆದರೆ, ಯಾವ ಆಧಾರದ ಮೇಲೆ ಈ ಊಹೆ ಮಾಡಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ. ಈ ಶಾಸನವನ್ನು ಸುಮಾರು ಕ್ರಿ.ಶ. ೯೮೦ಕ್ಕೆ ಸೇರಿಸಲಾಗಿದೆ.

ಗು.ಪೇ. ೪೮ನೆಯ ಬೆಳಚಲವಾಡಿಯ ಶಾಸನದ ಕಾಲ ಶಕವರ್ಷ ೯೩೫. ಇದು ನೀತಿಮಾರ್ಗ ಪೆರ್ಮಾನಡಿಯ ಆಳ್ವಿಕೆಯ ೩೭ನೆಯ ವರ್ಷಕ್ಕೆ ಸರಿಯಾದುದೆಂದು ಹೇಳಿದೆ. ಶಕವರ್ಷ ತಪ್ಪಾಗಿದ್ದು, ಅದು ೯೩೨ ಇರಬೇಕೆಂದು ಡಾ. ಎಂ. ಎಚ್. ಕೃಷ್ಣರವರು ಸೂಚಿಸಿ, ಹೀಗಾದಲ್ಲಿ ತೇದಿಯ ಇತರ ವಿವರಗಳು–ಉತ್ತರಾಯಣ ಸಂಕ್ರಾಂತಿ ಮತ್ತು ಭಾನುವಾರ–ಕ್ರಿ.ಶ. ೧೦೧೦ನೆಯ ಡಿಸೆಂಬರ್ ೨೪ಕ್ಕೆ ಸರಿಹೊಂದುತ್ತದೆ ಎಂದಿದ್ದಾರೆ. ಶಾಸನದಲ್ಲಿ ಇದು ನೀತಿಮಾರ್ಗನ ಆಳಿಕೆಯ ೩೭ನೆಯ ವರ್ಷವೆಂದಿರುವುದರಿಂದ ಈತನ ಆಳಿಕೆಯ ಮೊದಲವರ್ಷವು ಕ್ರಿ.ಶ. ೯೭೪ ಆಗುತ್ತದೆ. ಈ ಕಾಲಕ್ಕೆ ಇಮ್ಮಡಿಮಾರಸಿಂಹನು ಮೃತಿಹೊಂದಿದ್ದು ಮಗನಾದ ನಾಲ್ಕನೆಯ ರಾಚಮಲ್ಲ ಪಟ್ಟಕ್ಕೆ ಬಂದಿದ್ದ. ಇದನ್ನು ಒಪ್ಪಿಕೊಂಡರೆ ಇದುವರೆಗೆ ತಿಳಿದಂತೆ ಇದು ರಾಚಮಲ್ಲನ ಆಳಿಕೆಯ ಈಚಿನ ಕಾಲವಾಗುತ್ತದೆ. ಆದರೆ ರಕ್ಕಸಗಂಗನ ತರುವಾಯ ನಾಲ್ಕನೆಯ ರಾಚಮಲ್ಲನ ಕಿರಿಯ ಸಹೋದರನಾದ ಮೂರನೆಯ ನೀತಿಮಾರ್ಗನು ಆಳಿದನೆಂದು ಹೇಳಿ ರೈಸ್‌ರವರು ಕ್ರಿ.ಶ. ೯೮೯, ೯೯೨ ಮತ್ತು ೯೯೯ನೆಯ ವರ್ಷಗಳ ಶಾಸನಗಳು ಅವನಿಗೆ ಸೇರಿದ್ದೆಂದಿದ್ದಾರೆ. ರಕ್ಕಸಗಂಗನಿಗೂ ನೀತಿಮಾರ್ಗನಿಗೂ ಇದ್ದ ಸಂಬಂಧವನ್ನು ವ್ಯಕ್ತಪಡಿಸಿಲ್ಲ. ಇದನ್ನು ಡಾ. ಕೃಷ್ಣರವರು ಒಪ್ಪಿರುವಂತೆ ಕಂಡುಬಂದಿದೆ. ಎಂತಲೇ ಅವರು ಶಾಸನೋಕ್ತ ನೀತಿಮಾರ್ಗನು ಮೂರನೆಯ ನೀತಿಮಾರ್ಗನೆಂದು ಗುರುತಿಸಿದಂತೆ ತೋರುತ್ತದೆ. ಆದರೆ ನಮ್ಮ ಶಾಸನವು ಶಕವರ್ಷ ಹಾಗೂ ಆಳಿಕೆಯ ವರ್ಷಗಳೆರಡನ್ನೂ ಉಲ್ಲೇಖಿಸಿರುವುದರಿಂದ ಶಾಸನದಲ್ಲಿ ಉಕ್ತವಾಗಿರುವ ನೀತಿಮಾರ್ಗನನ್ನು ನಾಲ್ಕನೆಯ ರಾಚಮಲ್ಲನೆಂದು ಗುರುತಿಸಬಹುದಾಗಿದೆ.

ಬಯಲ್ನಾಡಿನ ಕದಂಬರು

ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನಗಳ ಆಧಾರದ ಮೇಲೆ ರೈಸ್‌ರವರು ಬಯಲ್ನಾಡಿನ ಕದಂಬರ ಸಮೀಕ್ಷೆಯನ್ನು ನೀಡಿ ಅವರ ಹೆಸರುಗಳನ್ನು ಈ ಕೆಳಕಂಡಂತೆ ಕೊಟ್ಟಿದ್ದಾರೆ. ರವಿಯಮ್ಮರಸ (ರವಿವರ್ಮ?)–೯೭೮; ಕನ್ದವಮ್ಮ(ಸ್ಕನ್ದವರ್ಮ)–೧೦೭೯;ಸಿವ....೧೦೮೩;ಕಂಠೀರವ–೧೦೯೦; ಇರವಿಚಲ್ಲಮ್ಮ–೧೧೦೭; ಮುಕ್ಕಣ್ಣ–೧೧೩೮. ಆದರೆ ಇವು ಶಾಸನಗಳನ್ನು ತಪ್ಪಾಗಿ ಓದಿ ಅವುಗಳಿಗೆ ತಪ್ಪಾದ ಅರ್ಥವಿವರಣೆಯನ್ನು ಕೊಟ್ಟಿರುವುದರ ಫಲ. ಸಿವ...., ಕಂಠೀರವ ಅಥವಾ ಮುಕ್ಕಣ್ಣ ಎಂಬ ಹೆಸರನ್ನುಳ್ಳ ಯಾವ ಮಾಂಡಲಿಕನೂ ಈ ಮನೆತನದಲ್ಲಿರಲಿಲ್ಲ. ಸೋಗಳ್ಳಿಯ ಶಾಸನದ (ಹೆ. ಕೋ. ೧೩೭) ಕಾಲ ಕ್ರಿ. ಶ. ೧೦೮೩ ಎಂದು ಹೇಳಲಾಗಿದೆ. ಶಾಸನದ ಲಿಪ್ಯಂತರ ಪಾಠದಲ್ಲಿ ಕಾಲದ ಭಾಗವನ್ನು 'ಶಕವರಿಷ ಸಾವಿ[ರ]ದ ಅಯ್ದನೆಯ' ಎಂದು ಓದಲಾಗಿದ್ದು, ಆದ್ದರಿಂದ ಅದು ಕ್ರಿ. ಶ. ೧೦೮೩ಕ್ಕೆ ಸಮಾನವಾದುದೆಂದು ಗ್ರಹಿಸಲಾಗಿದೆ. ಆದರೆ ಕನ್ನಡದಲ್ಲಿರುವ ಪಾಠದಲ್ಲಿ 'ಶಕವರಿಷಸಂದಅಯ್ದನೆಯಾ' ಎಂದಿದ್ದು ಶಾಸನದ ಮೂಲಪ್ರತಿಯೊಂದಿಗೆ ಹೋಲಿಸಿದಾಗ ಈ ಪಾಠ ಸರಿಯಾಗಿರುವುದೆಂದು ಕಂಡುಬಂದಿದೆ. ಮುಂದುವರಿದು 'ಸಿವ.... ನಕಟಾರಲದನ್ದು' ಎಂದು ರೈಸ್‌ರವರು ಓದಿರುವುದನ್ನು ನಾವು 'ಸವದಿವ್ವನ ಕಡಾರಲದನ್ದು' ಎಂದು

ಓದಿದ್ದೇವೆ. ಆದ್ದರಿಂದ ನಾಯಕನ ಹೆಸರು ಸಿವ ಎಂದಾಗಲಾರದು. ಹೆ. ಕೋ. ೧೦೮ನೆಯ ಶಾಸನದ ೩ನೆಯ ಪಂಕ್ತಿಯನ್ನು ಮುನ್ನಿನ ಮುದ್ರಣದಲ್ಲಿ 'ಚಿದ್ದಚಿದುಕಂಠೀರವ' ಎಂದು ಓದಲಾಗಿದೆ. ಆದರೆ ಅದು 'ವಿದುವಿಷ್ಮ ಕಂಠೀರವ' ವಾಗಿದ್ದು, ಕಂಠೀರವ ಎಂಬುದು ಒಂದು ಬಿರುದಾಗುತ್ತದೆಯೇ ಹೊರತು ಅದನ್ನು ಒಬ್ಬನ ಹೆಸರೆಂದು ತೆಗೆದುಕೊಳ್ಳಲು ಬರುವುದಿಲ್ಲ. ಹೆ. ಕೋ. ೧೧೦ನೆಯ ಶಾಸನದಲ್ಲಿ ರೈಸ್‌ರವರು ಕದಂಬ ಕಣ್ಠೀರ ಎಂಬ ಹೆಸರನ್ನು ಓದಿದ್ದು ಆ ಹೆಸರು ಇದೇ ಕಂಠೀರವನ ಹೆಸರೆಂದು ಭಾವಿಸಿದ್ದಾರೆ. ಆದರೆ 'ಕದಂಬ ಕಣ್ಠೀರ' ಎಂಬುದು ಒಂದು ಬಿರುದು. ಶಾಸನದಲ್ಲಿನ ಪಂಕ್ತಿಗಳಲ್ಲಿ ವ್ಯತ್ಯಾಸಗಳಾಗಿದ್ದು ಶಾಸನ ಪಾಠವನ್ನು ಸರಿಯಾಗಿ ಓದಲಾಗಿಲ್ಲ. ಅದರಲ್ಲಿ ಆಗ ಬಯಲ್ನಾಡನ್ನು ಆಳುತ್ತಿದ್ದ ಚಾಗಿಯ ಉಲ್ಲೇಖವಿದೆ. ಅದರಂತೆಯೇ ರೈಸ್‌ರವರು ಮುಕ್ಕಣ್ಣ ಕದಂಬನ ಹೆಸರನ್ನು ಹೆ. ಕೋ. ೧೧೭ರ ಶಾಸನದಲ್ಲಿ ಓದಿದ್ದಾರೆ. ಅದು ಕೇವಲ ಒಂದು ಬಿರುದಾಗಿದ್ದು ನಾಯಕನ ಹೆಸರು ಸವೆದಿದೆ. ಹೆ. ಕೋ. ೧೩೩ನೆಯ ಶಾಸನದ ಕಾಲ ಕ್ರಿ. ಶ. ೧೦೭೯ ಎಂಬುದು ಸರಿ. ರೈಸ್‌ರವರ ಅಭಿಪ್ರಾಯದಂತೆ ಅದರಲ್ಲಿ ಉಕ್ತನಾದ ಮಾಂಡಲಿಕನ ಹೆಸರು ಕಂದವರ್ಮ ಎಂದು ಹೇಳಿದೆ. ಆದರೆ ಮುನ್ನಿನ ಮುದ್ರಣದಲ್ಲಿನ ಕನ್ನಡದ ಶಾಸನ ಪಾಠದಲ್ಲಿ ಆ ಹೆಸರಿಲ್ಲ. ಅದು ಈಕರವರ್ಮ (?) ಎಂಬ ಹೆಸರಾಗಿರಬಹುದೆಂದು ತೋರುತ್ತದೆ. ಈ ಶಾಸನವನ್ನು ಆಧರಿಸಿ ರೈಸ್‌ರವರು "ಯುಗ್ಮ ಬಯಲ್ನಾಡು" (ಎರಡು ಬಯಲ್ನಾಡು) ಗಳನ್ನು ಪತ್ತೆಹಚ್ಚಿದ್ದಾರೆ. ಆದರೆ ಇದು ಶಾಸನ ಪಾಠವನ್ನು ಓದುವುದರಲ್ಲಿ ಉಂಟಾದ ತಪ್ಪಿನ ಫಲ. ಶಾಸನದ ೪-೫ನೆಯ ಸಾಲುಗಳನ್ನು ಅವರು "ಅಸತೀನೂತಲತಾಂಗಧೀ . . . ಸಯುಗ್ಮಬಯಲ್ನಾಡನಂ" ಎಂದು ಓದಿ 'ಯುಗ್ಮ' ಎಂಬುದು ಬಯಲ್ನಾಡಿಗೆ ಅನ್ವಯಿಸುವುದೆಂದು ಭಾವಿಸಿದರು. ವಾಸ್ತವವಾಗಿ ನಾವು ಈಗ ಕೊಟ್ಟಿರುವ ಶಾಸನಪಾಠ "ಅಸತೀನೂತಲತಾಂಗದಿವ್ಯ ದೃಗಯುಗ್ಮ ಬಯಲ್ನಾಡನಂ" ಎಂದಿದ್ದು ಇಲ್ಲಿ 'ಯುಗ್ಮ' ಎಂಬುದು 'ದೃಗ' ಎಂಬ ಪದಕ್ಕೆ ಅನ್ವಯಿಸುವುದೇ ಹೊರತು ಎರಡು ಬಯಲ್ನಾಡುಗಳಿರುವ ಸಂಭವವೇ ಇಲ್ಲ.

ಈ ಕೆಳಗೆ ಕಾಣಿಸಿದ ಬಯಲ್ನಾಡಿನ ಕದಂಬರ ಹೆಸರುಗಳು ಮಾತ್ರ ಪ್ರಸ್ತುತ ಸಂಪುಟದಲ್ಲಿ ಲಭ್ಯವಿದೆ: ಚಾಗಿ, ಉರವಿಯಮ್ಮರಸ (?) ಕ್ರಿ. ಶ. (೯೮೮-೯೯). ಈಕರವರ್ಮ (ಕ್ರಿ.ಶ. ೧೦೭೯); ಮತ್ತು ಇರವಿಚಲ್ಲಮ್ಮ (ಕ್ರಿ.ಶ. ೧೧೦೭). ಲಿಪಿಯ ಆಧಾರದಿಂದ ಹೆ. ಕೋ. ೧೧೦ನೆಯ ಶಾಸನ ೧೦ನೆಯ ಶತಮಾನಕ್ಕೆ ಸೇರಿದುದೆನ್ನಬಹುದು. ಆದ್ದರಿಂದ ಇದರಲ್ಲಿ ಉಕ್ತನಾಗಿರುವ ಚಾಗಿಯು ಮೇಲೆ ಹೇಳಿದ ನಾಲ್ವರಲ್ಲಿ ಮೊದಲಿನವನೆಂದು ಪರಿಗಣಿಸಬಹುದು. ಈತನು ಮಂಜರಾಬಾದಿನ ಶಾಸನದಲ್ಲಿ[1] ಬರುವ ಚಾಗಿಮಹಾರಾಜನಿಗಿಂತ ಭಿನ್ನನಾಗಿರಬಹುದೆಂದು ತೋರುತ್ತದೆ. ಶಕವರ್ಷ ೧೦೧೭ಕ್ಕೆ ಸಮನಾದ ಕ್ರಿ. ಶ. ೧೦೯೫ರ ಆ ಶಾಸನವು ದಯಸಿಂಹನೃಪನಿಗೆ ಸಂಬಂಧಿಸಿದ್ದು, ಆತನ ಹಿರಿಯ ಸಹೋದರ ಮತ್ತು ತಾತ-ಇಬ್ಬರಿಗೂ ಚಾಗಿಮಹಾರಾಜ ಎಂಬ ಹೆಸರಿದೆ. ದಯಸಿಂಹ ಮತ್ತು ಆತನ ಪೂರ್ವಿಕರು ಒಬ್ಬೊಬ್ಬರೂ ೨೫ ವರ್ಷಗಳ ಕಾಲ ಆಳಿದರೆಂದು ಭಾವಿಸಿದಲ್ಲಿ ಮೊದಲನೆಯ ಚಾಗಿಮಹಾರಾಜನು ೧೧ನೆಯ ಶತಮಾನದ ಮಧ್ಯದಲ್ಲಿ ಆಳಿರಬೇಕು. ಆದರೆ ಪ್ರಸ್ತುತ ಚರ್ಚೆಗೊಳಗಾದ ಬಯಲ್ನಾಡಿನ ಕದಂಬರ ಚಾಗಿಯು ೧೦ನೆಯ ಶತಮಾನದಲ್ಲಿ ಅಧಿಕಾರದಲ್ಲಿದ್ದನು.

ರಾಷ್ಟ್ರಕೂಟರು

ಈ ಸಂಪುಟದಲ್ಲಿ ರಾಷ್ಟ್ರಕೂಟರ ಅರಸನಾದ ಧ್ರುವನ ಮಗನಾದ ಕಂಬಯ್ಯನ ಎರಡು ಶಾಸನಗಳಿವೆ. ಆತನ ಬದನಗುಪ್ಪೆಯ ತಾಮ್ರಶಾಸನ (ನಂ.ಗೂ. ೨೭೮)ದ ಕಾಲ ಕ್ರಿ.ಶ. ೮೦೮. ಇದರಲ್ಲಿ ಆತನ ತಮ್ಮನಾದ ಮುಮ್ಮಡಿ ಗೋವಿಂದ (ಗೋವಿಂದರಾಜ)ನ ಪರಾಕ್ರಮವನ್ನು ವರ್ಣಿಸಲಾಗಿದ್ದು, ಕಂಬಯ್ಯನು ಸ್ವತಃ ತನ್ನನ್ನು ಶ್ರೀಮತ್‌ಧಾರಾವರ್ಷ ಪಾದಾನುಧ್ಯಾತನೆಂದು ಹೇಳಿಕೊಂಡಿದ್ದಾನೆ. ಪುನ್ನಾಡು-ಎಡೆನಾಡನ್ನು ತಾನು ಆಳುತ್ತಿದ್ದು ವಿಜಯಯಾತ್ರೆಯ ಸಂದರ್ಭದಲ್ಲಿ ತಲವನನಗರದಲ್ಲಿ ಬೀಡುಬಿಟ್ಟದ್ದಾಗ ಬದನಗುಪ್ಪೆ ಗ್ರಾಮವನ್ನು ದಾನಮಾಡಿದನೆಂದು ಹೇಳಲಾಗಿದೆ. ಈ ಶಾಸನಕಾಲದ ವೇಳೆಗೆ ಕಂಬಯ್ಯನು ತನ್ನ ಸಹೋದರನೊಂದಿಗೆ ಸಂಧಿಮಾಡಿಕೊಂಡು ಪ್ರಾಂತಾಧಿಕಾರಿಯಾಗಿದ್ದನೆಂಬುದು

[1] ಎ. ಕ. V, Mj. 18

ವ್ಯಕ್ತವಾಗುತ್ತದೆ. ಇದಕ್ಕೆ ಮುಂಚೆ ಈತನು ಆ ಸಹೋದರನ ವಿರುದ್ಧವಾಗಿ ದಂಗೆ ಎದ್ದು ಗಂಗರ ಶಿವಮಾರನ ನೆರವನ್ನು ಪಡೆದಿದ್ದ. ಶಾಸನದಲ್ಲಿ ಈತನ ಮಗ ಶಂಕರಗಣ್ಣನ ಉಲ್ಲೇಖವೂ ಇದೆ.

ಹೆ.ಕೋ. ೪೬ನೆಯ ಮಟಕೇರಿಯ ಶಾಸನವು ಭಗ್ನವಾಗಿದೆ. ಇದು ಧಾರಾವರ್ಷನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಕಂಬರಸ, ಅಂದರೆ ಅದೇ ಕಂಬಯ್ಯನು ೯೬೦೦೦ ಪ್ರಾಂತವನ್ನು ಆಳುತ್ತಿದ್ದನೆಂದು ಇದು ಹೇಳುತ್ತದೆ. ಬದನಗುಪ್ಪೆಯ ಶಾಸನವು ಈ ಶಾಸನದ ನಂತರದ ವರ್ಷಗಳದ್ದಾಗಿದ್ದು, ಅದರಲ್ಲಿ ಆತನು ಪುನ್ನಾಡು–ಎಡೆನಾಡನ್ನು ಆಳುತ್ತಿದ್ದನೆಂದಿದೆ. ಆದುದರಿಂದ ಈ ವೇಳೆಗೆ ಕಂಬಯ್ಯನ ಅಧಿಕಾರವನ್ನು ಬಹಳವಾಗಿ ಮೊಟಕುಗೊಳಿಸಲಾಗಿದ್ದು ಈತನ ಅಧಿಕಾರ ಗಂಗವಾಡಿಯ ದಕ್ಷಿಣಭಾಗಕ್ಕೆ ಮಾತ್ರ ಸೀಮಿತವಾಗಿದ್ದಂತೆ ತೋರುತ್ತದೆ.

ಚೋಳರು

ಪ್ರಸ್ತುತ ಸಂಪುಟದಲ್ಲಿ ಚೋಳ ಅರಸರ ಇಪ್ಪತ್ತಕ್ಕೂ ಹೆಚ್ಚು ಶಾಸನಗಳಿವೆ. ನಂ.ಗೂ. ೨೧೩ನೆಯ ಸುತ್ತೂರಿನ ಶಾಸನವು ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದು. ಇದು ತಮಿಳು ಹಾಗೂ ಕನ್ನಡದ ದ್ವಿಭಾಷಾಶಾಸನ. ಇದರ ಲಿಪಿ ಕನ್ನಡ. ರೈಸ್‌ರವರು ಇದನ್ನು ಎರಡು ಬೇರೆ ಬೇರೆ ಶಾಸನಗಳೆಂದು (ಹಳೆಯ ಆವೃತ್ತಿಯ ನಂ.ಗೂ. ೧೬೦ ಮತ್ತು ೧೬೧) ಪರಿಗಣಿಸಿದ್ದಾರೆ. ಆದರೆ ವಾಸ್ತವವಾಗಿ ಈ ಎರಡು ಶಾಸನಗಳೂ ಒಂದೇ ಕಲ್ಲಿನ ಎರಡು ಮುಖಗಳಲ್ಲಿದ್ದು ಒಂದೇ ಶಾಸನದ ಭಾಗಗಳಾಗಿವೆ. ಈಗಿನ ಸುತ್ತೂರು ಗ್ರಾಮವನ್ನು ಸೊತ್ತಿಯೂರ್, ಶ್ರೋತ್ರಿಯೂರ್ ಮತ್ತು ಶ್ರೋತ್ರಿಯ ಗ್ರಾಮ ಎಂದು ಕರೆಯಲಾಗುತ್ತಿತ್ತು. (ನೋಡಿ: ನಂ.ಗೂ. ೨೧೫, ೨೩೫ ಇತ್ಯಾದಿ). ೧೨ನೆಯ ಶತಮಾನದ ನಂತರದ ಶಾಸನಗಳಲ್ಲಿ ಸುತ್ತೂರು ಎಂಬ ಹೆಸರನ್ನು ಬಳಸಿದೆ.

ಪ್ರಸ್ತುತ ಶಾಸನವು (ನಂ.ಗೂ. ೨೧೩) ಒಡೈಯಾರ್ ಶ್ರೀಚೋಳ ಗಂಗದೇವನ ೪ನೆಯ ವರ್ಷದ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಈತನನ್ನು ಒಂದನೆಯ ರಾಜೇಂದ್ರಚೋಳನೆಂದು ಗುರುತಿಸಬಹುದು. ಹಾಗಿದ್ದಲ್ಲಿ ಶಾಸನದ ಕಾಲವು ಕ್ರಿ.ಶ. ೧೦೧೫–೧೬ ಆಗುತ್ತದೆ. ತೇವನಾಡುವೇಲಾನ್ ಎಂಬಾತನು ಇಲ್ಲಿ ರಾಜೇಂದ್ರಚೋಳನ ಅಧಿಕಾರಿಯಾಗಿ (ವೀರಗಪ್ಪಡಿ) ಕಾಣಿಸಿಕೊಂಡಿದ್ದಾನೆ. ಎರಡು ಖಂಡುಗ ಮತ್ತು ಹತ್ತು ಬಳ್ಳ ವಿಸ್ತಾರದ ಭೂಮಿಯನ್ನು ಗ್ರಾಮದ ಸಭೆಯವರು ಮಾರಿದರೆಂದು ಹೇಳಿದೆ. ಈ ಅಳತೆ ಅಂದು ಈ ಪ್ರದೇಶದಲ್ಲಿ ಪ್ರಚಲಿತವಾಗಿದ್ದ ಭೂಮಿಯ ಅಳತೆಯಾಗಿದ್ದು (ಇನ್ನೆಲ ಕಣ್ಡುಗಪ್ಪಡಿ) ಇದು ೨ ಮಾಕಾಣಿ (ಮಾಗಾಣಿ?)ಗೆ ಸಮವಾಗಿತ್ತೆಂದು ಕಂಡುಬರುತ್ತದೆ. ಇದರಿಂದ ಒಂದು ಖಂಡುಗ ಮತ್ತು ಐದು ಬಳ್ಳ ಭೂಮಿಯು ಒಂದು ಮಾಕಾಣಿಗೆ ಸಮವೆಂದು ಅರ್ಥವಾಗುತ್ತದೆ. ಇಲ್ಲಿ ಉಕ್ತವಾಗಿರುವ ಸೊತ್ತಿಯೂರು ಮುಡಿಗೊಣ್ಡಚೋಳಮಂಡಲದ ಗಂಗೈಗೊಣ್ಡಚೋಳವಳನಾಡಿನ ಇಡೈನಾಡಿನಲ್ಲಿದೆ ಎಂದು ಹೇಳಲಾಗಿದೆ.

ಇದೇ ಊರಿನ ನಂ ಗೂ. ೨೧೫ನೆಯ ಶಾಸನದಲ್ಲಿ ಕಾಲಸೂಚನೆ ಸ್ಪಷ್ಟವಾಗಿದೆ. ಅದೇ ರಾಜನ, ಈ ಶಾಸನದ ಕಾಲ ಶಕವರ್ಷ ೯[೫]೫, ಹಾಗೂ ಒಂದನೆಯ ರಾಜೇಂದ್ರಚೋಳನ ಆಳ್ವಿಕೆಯ ೩೧ನೆಯ ವರ್ಷವಾಗಿತ್ತೆಂದು ಹೇಳಿದೆ. ಇದು ಕ್ರಿ.ಶ. ೧೦೩೨ಕ್ಕೆ ಸರಿಹೊಂದುತ್ತದೆ. ರಾಜೇಂದ್ರಚೋಳನು ತನ್ನ ಆಳ್ವಿಕೆಯ ವರ್ಷಗಳನ್ನು ಕ್ರಿ.ಶ. ೧೦೧೨ನೆಯ ಮಾರ್ಚ್ ೨೭ ಮತ್ತು ಜುಲೈ ೭ರ ನಡುವಣ ಒಂದು ದಿನದಿಂದ ಗಣಿಸುತ್ತಾನೆ.[1] ಆದ್ದರಿಂದ ನಮ್ಮ ಶಾಸನದಲ್ಲಿ ಉಕ್ತವಾಗಿರುವ ಕಾಲವು ಆತನ ಆಳ್ವಿಕೆಯ ೨೧ನೆಯ ವರ್ಷವಾಗುತ್ತದೆ. ಶಾಸನದಲ್ಲಿ ಉಕ್ತವಾಗಿರುವಂತೆ ೩೧ನೆಯ ವರ್ಷವಲ್ಲ.[2] ಶಾಸನದಲ್ಲಿ ಒಂದನೆಯ ರಾಜೇಂದ್ರಚೋಳನ ಪ್ರಶಸ್ತಿಯು ಉಕ್ತವಾಗಿರುವುದರಿಂದ ಅದು ಅವನಿಗೆ ಸಂಬಂಧಿಸಿದ ಶಾಸನವೆಂದು ಗುರುತಿಸುವುದು ಕಷ್ಟಕರವಾದ ವಿಷಯವೇನಲ್ಲ.

ಶ್ರೋತ್ರಿಯೂರಿನ ಈಶಾನ ಈಶ್ವರಮುಡೈಯಾರ್ ಮತ್ತು ಮೂಲಸ್ಥಾನಮುಡೈಯಾರ್ ದೇವಾಲಯಗಳಿಗಾಗಿ ಮಹಾಜನರು, ಸಮಯ ಮತ್ತು ಸಭೆಗಳು ಸಹ ನೀಡಿದ ಕೊಡುಗೆಯನ್ನು ಈ ಶಾಸನ ಪ್ರಸ್ತುತಪಡಿಸುತ್ತದೆ. ಇವುಗಳಲ್ಲಿ

---

[1] K.A.Nilakanta Sastri : *The Cōḷas* (II Edition, 1955), p. 194.

[2] ಇಲ್ಲಿಯೂ ಸಹ ರೈಸ್‌ರವರು ಇದನ್ನು ಎರಡು ಶಾಸನಗಳೆಂದು ಪರಿಗಣಿಸಿರುವುದಲ್ಲದೆ ಅವನ್ನು ಬೇರೆಬೇರೆ ಕಲ್ಲುಗಳ ಮೇಲೆ ಕೆತ್ತಲಾಗಿದೆ ಎಂದಿದ್ದಾರೆ. ಆದರೆ ಶಾಸನವನ್ನು ಒಂದೇ ಶಿಲೆಯ ಎರಡು ಮುಖಗಳಲ್ಲಿ ಕಣ್ಡರಿಸಲಾಗಿದೆ. ಹಳೆಯ ಆವೃತ್ತಿಯ 165ನೆಯ ಶಾಸನವು 164ನೆಯ ಶಾಸನದ ಮುಂದುವರಿದ ಭಾಗವಾಗಿದೆ.

ಎರಡನೆಯದಾದ ಮೂಲಸ್ಥಾನ ದೇವಾಲಯವನ್ನು ಕಟ್ಟಿಸಿದಾಕೆ ಮಾರಯ್ಯಶೆಟ್ಟಿಯ ಪತ್ನಿ ಗುಂಡಬ್ಬೆ. ಸುತ್ತೂರು ಇಂದು ಒಂದು ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿದ್ದು ಇಲ್ಲಿ ವೀರಶೈವರ ಮಠವೊಂದಿದೆ. ಪ್ರಸ್ತುತ ಸಂಕಟ ದಲ್ಲಿನ ಶಾಸನಗಳೇ ವ್ಯಕ್ತಪಡಿಸುವಂತೆ ಸುತ್ತೂರು ಒಂದು ಪುರಾತನ ನಗರವಾಗಿದೆ. ಈ ಶಾಸನದ ಕಾಲಕ್ಕೆ (ಕ್ರಿ.ಶ. ೧೦೩೨) ಅಥವಾ ಅದಕ್ಕಿಂತ ಸ್ವಲ್ಪ ಮುಂಚಿತವಾಗಿಯೇ ಇಲ್ಲಿನ ಈ ಮೂಲಸ್ಥಾನ ದೇವಾಲಯ ನಿರ್ಮಾಣವಾಗಿರಬೇಕು. ಆದರೆ ಈಶಾನ ಈಶ್ವರ ದೇವಾಲಯವು ಇನ್ನೂ ಪ್ರಾಚೀನವಾದುದೆಂದು ತೋರುತ್ತದೆ. ಈಶಾನ ಈಶ್ವರ ಪೊಡೈಯಾರ್ ಎಂಬುದು ಸುತ್ತೂರು ಮಠದ ಗುರುಪರಂಪರೆಯಲ್ಲಿ ಎರಡನೆಯ ಗುರುವಿನ ಹೆಸರಾಗಿತ್ತು ಎಂದು ಭಾವಿಸಲಾಗಿದೆ.[1] ಆದರೆ, ಅದು ದೇವರ ಹೆಸರಾಗಿದ್ದು ಆ ದೇವನ ಹೆಸರಿನಲ್ಲಿ ದೇವಾಲಯವೊಂದು ಅಂದು ಅಸ್ತಿತ್ವದಲ್ಲಿತ್ತೆಂಬುದನ್ನು ಶಾಸನವು ಸ್ಪಷ್ಟಪಡಿಸುತ್ತದೆ. ದೇವರಿಗೆ ದತ್ತಿಬಿಡುವುದಲ್ಲದೆ ಪಂಚಮಹಾಶಬ್ದ (ಪಂಚವಾದ್ಯ)ಗಳನ್ನು ಉಪಯೋಗಿಸಲು ಏರ್ಪಾಡು ಮಾಡಲಾಗಿದ್ದು, ತಿವಳಿ, ದಟ್ಟೆ, ಖಂಡಿಕೆ, ಜಯಗಣ್ಟೆ ಮತ್ತು ಕಾಳೆ ಎಂಬಿವೇ ಆ ವಾದ್ಯಗಳು ಎಂಬ ಅಂಶ ಶಾಸನದಿಂದ ವ್ಯಕ್ತವಾಗುತ್ತದೆ.

ಶಕ ೯೪೩ ಕ್ಕೆ ಸಮನಾದ ಕ್ರಿ.ಶ. ೧೦೨೧ರ ನಂದಿಗುನ್ದ ಶಾಸನದಲ್ಲಿ (ನಂ.ಗೂ. ೨೦೧) ಅರಸನ ಹೆಸರಿಲ್ಲ. ಆದರೆ 'ತಿರುಮಣ್ಣಿವಳರ' ಎಂದು ಆರಂಭವಾಗುವ ಒಂದನೆಯ ರಾಜೇಂದ್ರಚೋಳನ ಪ್ರಶಸ್ತಿ ಶಾಸನದ ಆರಂಭದಲ್ಲಿದೆ. ಆದ್ದರಿಂದ ಆ ಶಾಸನ ರಾಜೇಂದ್ರಚೋಳನದೆಂದು ಗುರುತಿಸಬಹುದು. ಮುಸಂಗಿಯಲ್ಲಿ ಚಾಳುಕ್ಯ ಜಯಸಿಂಹನೊಡನೆ ಹೋರಾಡಿ ಪಡೆದ ವಿಜಯ ಮತ್ತು ರಟ್ಟವಾಡಿಯ ಆಕ್ರಮಣದ ವಿವರದೊಡನೆ ಪ್ರಶಸ್ತಿ ಮುಕ್ತಾಯಗೊಳ್ಳುತ್ತದೆ. ಅದೇ ಕಲ್ಲಿನ ಹಿಂಭಾಗದಲ್ಲಿ ಮುಂದುವರಿದ ಶಾಸನ ದೇವಾಲಯಕ್ಕೆ ಕೊಟ್ಟ ದಾನಗಳ ವಿವರಗಳನ್ನು ನೀಡಿದೆ. ಈ ಶಾಸನದ ಕಾಲ ಕ್ರಿ.ಶ. ೧೦೨೧ ಮಾರ್ಚ್ ೧. ಈ ಹೊತ್ತಿಗಾಗಲೇ ಮುಸಂಗಿ ಅರ್ಥಾತ್ ರಾಯಚೂರು ಜಿಲ್ಲೆಯ ಮಸ್ಕಿಯ ಕದನದಲ್ಲಿ ಅರಸನ ದಿಗ್ವಿಜಯವು ಪ್ರಶಸ್ತಿಯಲ್ಲಿ ಸೇರ್ಪಡೆಯಾಗಿರುವುದರಿಂದ, ಉಕ್ತವಾದ ತೇದಿಗೂ ಕೆಲ ತಿಂಗಳುಗಳ ಮೊದಲೇ ಈ ಕದನ ಸಂಭವಿಸಿರಬಹುದೆಂದು ಊಹಿಸಲು ಅವಕಾಶವಿದೆ. ಆಸ್ಥಾನಕವಿಗಳು ಪ್ರಶಸ್ತಿಯನ್ನು ಪರಿಷ್ಕರಿಸಿ ಈ ವಿವರವನ್ನೂ ಸೇರಿಸಲು ಹಾಗೂ ಅಧಿಕಾರಿಗಳು ಇದನ್ನು ತಮ್ಮ ಶಾಸನಗಳಲ್ಲಿ ಬಳಸಲು ಕನಿಷ್ಠಪಕ್ಷ ೨ ಅಥವಾ ೩ ತಿಂಗಳ ಕಾಲಾವಕಾಶ ಬೇಕಾಗುತ್ತದೆಂದು ಭಾವಿಸಿದಲ್ಲಿ ಇಮ್ಮಡಿ ಜಯಸಿಂಹನ ವಿರುದ್ಧ ಮಸ್ಕಿಯಲ್ಲಿ ನಡೆದ ಕದನವು ಕ್ರಿ.ಶ. ೧೦೨೦ನೆಯ ಉತ್ತರಾರ್ಧ ಅಥವಾ ೧೦೨೧ನೆಯ ಜನವರಿ ಮಾಸದಲ್ಲಿ ನಡೆಯಿತೆಂದು ಹೇಳಲು ಅವಕಾಶವಿದೆ.

ಶಾಸನದಲ್ಲಿ ತೇದಿಯನ್ನು ಸೂಚಿಸಿದ ನಂತರ ಎಡೆದೊಱೆನಾಡನ್ನು ಸುರಕ್ಷಿತವಾಗಿ ಇಡಲಾಯಿತೆಂದು ಹೇಳಿದೆ. (ಎಡೆದೊಱೆನಾಡುಳ್ ಪದಿನಿಕ್ಕಿ). ಇದು ಚೋಳ ರಾಜನಿಗೇ ಅನ್ವಯಿಸುವುದೆಂದೂ, ಆ ಪ್ರಾಂತದಲ್ಲಿ ಸರಿಯಾದ ಆಡಳಿತವನ್ನು ನಿರ್ವಹಿಸಲು ಮತ್ತು ಶಾಂತಿ ನೆಲೆಗೊಳಿಸಲು ಈತನು ಏರ್ಪಾಟುಮಾಡಿದನೆಂದೂ ತರ್ಕಿಸಬಹುದು. ಈ ಎಡೆದೊಱೆನಾಡನ್ನು ಕಾವೇರಿಯ ಪಶ್ಚಿಮಕ್ಕಿರುವ ಎಡತೊರೆನಾಡು ಎಂದು ಗುರುತಿಸಬಹುದಾದರೂ ಈ ಪ್ರಾಂತ ಅವನ ಆಡಳಿತಕ್ಕೆ ಈ ವೇಳೆಗಾಗಲೇ ಬಂದಿತ್ತಾದ ಕಾರಣ ಸುಮಾರು ಈ ಶಾಸನದ ಕಾಲದವೇಳೆಗೆ ಈ ಪ್ರಾಂತದಲ್ಲಿ ಯಾವುದೋ ಗಲಭೆಯುಂಟಾಗಿ ಅದನ್ನು ಅಡಗಿಸಿ ಇಲ್ಲಿ ಆತನು ಶಾಂತಿಯನ್ನು ನೆಲೆಗೊಳಿಸಿರಬೇಕೆಂದು ಊಹಿಸಬೇಕಾಗುತ್ತದೆ. ಈಗಿನ ರಾಯಚೂರು ಜಿಲ್ಲೆಯ ಹೆಚ್ಚಿನಭಾಗವನ್ನೊಳಗೊಂಡ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಣ ಪ್ರದೇಶಕ್ಕೂ ಎಡದೊಱೆ ಎಂಬ ಹೆಸರಿತ್ತು.[2] ಕದನಕ್ಷೇತ್ರವಾದ ಮಸ್ಕಿಯು ಈ ಪ್ರದೇಶದಲ್ಲಿದ್ದು ಆತನು ದಿಗ್ವಿಜಯಾನಂತರ ಈ ಪ್ರದೇಶದಲ್ಲಿ ಶಾಂತಿ ನೆಲೆಗೊಳ್ಳುವಂತೆ ಮಾಡಲು ಪ್ರಯತ್ನಿಸಿದನೆಂದು ಊಹಿಸುವುದು ಹೆಚ್ಚು ಸಮಂಜಸವೆನಿಸುತ್ತದೆ. ಶಾಸನ ದೊರೆತ ಸ್ಥಳವಾದ ನಂದಿಗುನ್ದವು ಮೈಸೂರು ನಾಡಿನಲ್ಲಿದೆ.

ಕ್ರಿ. ಶ. ೧೦೩೭ನೆಯ ವರ್ಷದ ಅಂಕನಾಥಪುರದ ಹೆ.ಕೋ. ೭ನೆಯ ಶಾಸನವು ನೊಲನಾಡಿನಲ್ಲಿ ಕೂಡಲೂರಿನ ನಿಗಳಂಕಮಲ್ಲಚಂಗಾಳ್ವನು ಮುತ್ತಿಗೆಹಾಕಿದಾಗ ಪ್ರಿಂಗೆಯ ಹಲವು ಗಾವುಣ್ಡರು, ನಾಗಮಂಗಲವನ್ನು ಕಲ್ನಾಡಾಗಿ ಪಡೆದರೆಂದು ತಿಳಿಸುತ್ತದೆ. ಪಲರ್ಗೆಚ್ಚಿಗಂಡ ಮತ್ತು ತೆಲುಗರಮಾರಿ ಎಂಬ ಬಿರುದುಗಳನ್ನು ಹೊಂದಿದ್ದ ಮಹಾಮಣ್ಡಳೇಶ್ವರ ಪಂಚವಮಾರಾಯನು ಆ ಬಿರುದುಗಳನ್ನು ಕೆಲವು ಗಾವುಂಡರಿಗೆ ಕೊಟ್ಟನು ಎಂದಿದೆ. ಒಂದನೆಯ ರಾಜೇಂದ್ರಚೋಳನು ಪಂಚವನ್ ಮಾರಾಯ ಎಂಬ ಬಿರುದನ್ನು ಹೊಂದಿದ್ದನೆಂಬುದು ಚೋಳ ರಾಜರಾಜನ

---

1 ಎಂ. ಜಿ. ನಂಜುಂಡಾರಾಧ್ಯ : ಶಿವರಾತ್ರಿ ಶಿವಾಚಾರ್ಯ (೧೯೬೧) p. xiii-xiv.

2 *Epigraphia Indica*, XII, p 295-96

ಮಾಲಂಬಿಶಾಸನದಿಂದ ತಿಳಿದಿದೆ.[1] ಆದ್ದರಿಂದ ಪ್ರಸ್ತುತ ಶಾಸನದಲ್ಲಿ ಬರುವ ಪಂಚವಮಹಾರಾಯನನ್ನೂ ರಾಜೇಂದ್ರ ಚೋಳನೆಂದೇ ಗುರುತಿಸಲು ಅವಕಾಶವಿದೆ. ಆದರೆ, ಈ ಶಾಸನದಲ್ಲಿ ಆತನನು ಕೇವಲ ಮಹಾಮಣ್ಡಲೇಶ್ವರನೆಂದು ಸಂಬೋಧಿಸಲು ಕಾರಣಗಳನ್ನು ವಿವರಿಸುವುದು ಸುಲಭವಲ್ಲ. ಈ ಶಾಸನದ ಕಾಲದ ವೇಳೆಗೆ ಚಂಗಾಳ್ವರು ಚೋಳರ ಸಾರ್ವಭೌಮತ್ವವನ್ನು ಒಪ್ಪಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಚಂಗಾಳ್ವನ ಹೆಸರನ್ನು ಇಲ್ಲಿ ಕೊಟ್ಟಿಲ್ಲ. ಹನಸೋಗೆಯ ಶಾಸನದ ಹೇಳಿಕೆಯನ್ನಾಧರಿಸಿ ತನ್ನ ಸ್ವಂತ ಹೆಸರಿನ ಜೊತೆಗೆ ರಾಜೇಂದ್ರಚೋಳನೆಂಬ ಅಭಿದಾನವನ್ನು ಧರಿಸಿದ ನನ್ನಿಚಂಗಾಳ್ವನು ಚೋಳದೊರೆಯಿಂದ ಪರಾಜಿತನಾದ ಮೊದಲನೆಯ ಅರಸನೆಂದು ರೈಸ್‌ರವರು ಭಾವಿಸಿದ್ದರು. ಅಲ್ಲದೆ ಮಾಲಂಬಿ ಶಾಸನದಲ್ಲಿನ ಹೇಳಿಕೆಯನ್ನಾಧರಿಸಿ ಪನಸೋಗೆಯ ಯುದ್ಧದಲ್ಲಿ ಸೋಲಿಸಲಾದ ಚಂಗಾಳ್ವನು ಈತನೇ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.[2] ಆದರೆ, ಆ ಶಾಸನದಲ್ಲಿ ಮನಿಜನಿಂದ ಸೋಲಿಸಲ್ಪಟ್ಟ ವೈರಿಗಳ ಹೆಸರನ್ನೇ ಹೇಳಿಲ್ಲ. ಪ್ರಸ್ತುತ ಶಾಸನದಲ್ಲಿ ಕ್ರಿ.ಶ. ೧೦೩೭ರಲ್ಲಿ ಚಂಗಾಳ್ವರು ಚೋಳರ ಅಧೀನದಲ್ಲಿದ್ದ ನಾಡನ್ನು ಮುತ್ತಿದರೆಂಬ ವಿಷಯದ ಪ್ರಸ್ತಾಪವಿರುವುದರಿಂದ ಈ ಶಾಸನ ಕಾಲದ ವೇಳೆಗೂ ಇನ್ನೂ ಚಂಗಾಳ್ವರು ಸ್ವತಂತ್ರರಾಗಿಯೇ ಇದ್ದರೆಂಬುದು ಸ್ಪಷ್ಟವಾಗುತ್ತದೆ.[3]

ಹೆ.ಕೋ. ೬೦ ಕ್ರಿ. ಶ. ೧೦೫೭ನೆಯ ವರ್ಷದ ಇಮ್ಮಡಿ ರಾಜೇಂದ್ರಚೋಳನ ಶಾಸನ. ಇದು ಕುಱುವನ್ದ ವಂಶಕ್ಕೆ ಸೇರಿದ ಪೆರ್ಬ್ಬಯಲಿನ ಏಚನ ಪತ್ನಿಯಾದ ದೇಕಬ್ಬೆಯ ಮರಣವೃತ್ತಾಂತವನ್ನು ತಿಳಿಸುವ ಸುಂದರವಾದ ಕಾವ್ಯಾತ್ಮಕ ರಚನೆಯಾಗಿದೆ.[4] ಈ ಶಾಸನದಲ್ಲಿ ಆಕೆಯ ತಂದೆತಾಯಿಗಳ ವಂಶಾವಳಿಯನ್ನು ಕೊಟ್ಟಿದೆ. ಆಕೆಯ ತಂದೆಯಾದ ರವಿಗನು ನುಗುನಾಡಿನ ಅಧಿಕಾರಿಯಾಗಿದ್ದ. ತಾತ (ತಾಯಿಯ ತಂದೆ) ಎಡೆನಾಡಿನ ಅಧಿಪತಿಯಾಗಿದ್ದನು.

ನುಗುನಾಡಿನ ಅಧಿಪರು				**ಎಡೆನಾಡಿನ ಅಧಿಪರು**
ಎಱೆಯಂಗ				ಸತ್ಯವಾಕ್ಯ ನಾಲ್ಗೋಜ (ಪತ್ನಿ–ಬೂತಬ್ಬೆ)
|				|
ಏಚ				|
|				|
ಜವನಿಯಮ್ಮ (ಪತ್ನಿ–ಜಾಕಬ್ಬೆ)				|
|				|
ರವಿಗ	—	ಪತ್ನಿ	—	ಪೊನ್ನಕ್ಕ
|				
ದೇಕಬ್ಬೆ ನವಿಲೆ ನಾಡಿನ ಏಚನೊಡನೆ ಮದುವೆ				

ಕುಡಿಯರ ವಂಶಕ್ಕೆ ಸೇರಿದ ರವಿಗನು ಎಡೆನಾಡಿನ ಅಧಿಪನಾದ ನಾಲ್ಗೋಜನ ಮಗಳಾದ ಪೊನ್ನಕ್ಕನನ್ನು ವರಿಸಿದ್ದ. ಇವರಿಬ್ಬರಿಗೆ ಜನಿಸಿದ ದೇಕಬ್ಬೆಯನ್ನು ನವಿಲೆನಾಡಿನ ಏಚನು ವಿವಾಹವಾದ. ಉತ್ತಮ ಜಟ್ಟಿ (ಜಟ್ಟಿಗ) ಯಾಗಿದ್ದ ಈ ಏಚನು ಯಾವುದೋ ಸಂದರ್ಭದಲ್ಲಿ ಶೌರ್ಯದಿಂದ ತನ್ನ ದಾಯಿಗನನ್ನು ಇರಿದ (ಒಟ್ಟಜೆಯಿನಿಱಿದು) ನೆಂದು ಹೇಳಲಾಗಿದೆ.[5] ಈ ಸಾವು ಹತ್ಯೆಯೆಂದು ಪರಿಗಣಿಸಲ್ಪಟ್ಟು ಏಚನನ್ನು ತಲಕಾಡಿಗೆ ಒಯ್ಯಲಾಯಿತು. ಅಲ್ಲಿ ಅರಸನು ಇವನನ್ನು ಮರಣಶಿಕ್ಷೆಗೊಳಪಡಿಸಿದನು. ಇದನ್ನು ಕೇಳಿದ ದೇಕಬ್ಬೆಯು ಸತಿಯಾಗಲು ನಿರ್ಧರಿಸಿದಳು. ಆಕೆಯ ಮಾತಾಪಿತೃಗಳು ಮತ್ತು ಸಂಬಂಧಿಕರು ಆಕೆಯನ್ನು ತಡೆಯಲು ಯತ್ನಿಸಿದಾಗ, “ನುಗುನಾಡಿನ ಅಧಿಕಾರಿಯ ಮಗಳೂ

---

[1] ಎ.ಕ., ಸಂಪುಟ ೧ (ಪರಿಷ್ಕೃತ ಆವೃತ್ತಿ 1972.), **ಪೀಠಿಕೆ, ಪು.** XXXI

[2] B. L. Rice: *Mysore and Coorg from Inscriptions*, p. 142.

[3] ರಾಜೇಂದ್ರಚೋಳನು ಯುವರಾಜನಾಗಿದ್ದಲೇ ಚಂಗಾಳ್ವರ ಮೇಲೆ ವಿಜಯವನ್ನು ಸಾಧಿಸಿದ್ದನು. ಬಹುಶಃ ಕ್ರಿ. ಶ. ೧೦೩೭ರ ಸುಮಾರಿಗೆ ಚಂಗಾಳ್ವರು ದಂಗೆ ಎದ್ದಿರಬಹುದು ಎಂದು ಡಾ. ಮಹಾಲಿಂಗಂ ಅವರು ಹೇಳುತ್ತಾರೆ.

[4] ಈ ಶಾಸನ ಎಪಿಗ್ರಾಫಿಯ ಇಂಡಿಕಾದ ಆರನೆಯ ಸಂಪುಟದಲ್ಲಿ ಪ್ರಕಟವಾಗಿವೆ. ಇದನ್ನು ಕೆಳಗೆ ಪ್ರಸ್ತಾಪಿಸಲಾಗಿದೆ.

[5] ಶಕ್ತಿಯುತನಾಗಿದ್ದ ಈ ಜಟ್ಟಿಗ ಏಚನು ದುರದೃಷ್ಟವಶಾತ್ ಸ್ಪರ್ಧೆಯೊಂದರಲ್ಲಿ ತನ್ನ ವಿರೋಧಿಯನ್ನು ಕೊಂದ. ಆತನು ಅರಸನಿಗೆ ಸಂಬಂಧಿಸಿದವನೆಂದು ತೋರುತ್ತದೆ ಎಂದು ರೈಸ್‌ರವರು ಅಭಿಪ್ರಾಯಪಟ್ಟಿದ್ದಾರೆ. (ಎ.ಕ. III (ಮೊದಲ ಆವೃತ್ತಿ), Introduction, p. 15). ಆದರೆ ಈ ಊಹೆ ಆಧಾರರಹಿತವಾದುದಾಗಿದೆ.

ನವಿಲೆನಾಡಿನ ಅಧಿಕಾರಿಯ ಪತ್ನಿಯೂ ಆದ ನಾನು ಜೀವಿಸಿದ್ದೇ ಆದರೆ ಎರಡೂ ವಂಶದ ಕೀರ್ತಿಗೆ ಕಳಂಕ ಉಂಟಾಗುವುದು" ಎಂದು ವಾದಿಸಿ, ಅವರನ್ನು ಒಪ್ಪಿಸಿದಳು. ಆನಂತರ, ಆಕೆ ದೇವರ ನೈವೇದ್ಯ ಹಾಗೂ ನಂದಾದೀಪಕ್ಕಾಗಿ ಭೂಮಿ ಮತ್ತು ತೋಟವನ್ನು ದಾನವಾಗಿ ಕೊಟ್ಟು ಪ್ರಾಣವನ್ನು ತ್ಯಜಿಸಿದಳು. ತಲಕಾಡು ಅಂದಿನ ರಾಜಧಾನಿಯಾಗಿದ್ದಿರಬೇಕು. ಆ ಕಾರಣದಿಂದಲೇ ಏಚನನ್ನು ಅಲ್ಲಿಗೆ ಕರೆದೊಯ್ದಿರಬೇಕು. ಕೊಲೆಯ ಅಪರಾಧಕ್ಕೆ ಮರಣದಂಡನೆಯನ್ನು ವಿಧಿಸುತ್ತಿದ್ದ ವಿಷಯವೂ ಇದರಿಂದ ವ್ಯಕ್ತವಾಗುತ್ತದೆ. ಈ ಶಾಸನವು ಸುಲಭವಾದ ಪದ್ಯರೂಪದಲ್ಲಿದ್ದು ಇದರಲ್ಲಿ ಕರುಣರಸವೇ ಪ್ರಧಾನವಾಗಿದೆ. ಕವಿಯಾದ ಮಲ್ಲನನ್ನು ಕವಿರಾಜಬಾನ್ಧವ ಎಂದು ವರ್ಣಿಸಲಾಗಿದೆ.

ರೆ. ಕಿಟ್ಟೆಲ್‌ರವರಿಂದ ಈ ಶಾಸನ ಈ ಮೊದಲೇ ಪ್ರಕಟವಾಗಿದೆ. ಪೊನ್ನಕ್ಕನ ತಾಯಿ ಬೂತಬ್ಬೆ. ಆದರೆ ಪೊನ್ನಕ್ಕನ ತಂದೆಯಾದ ರವಿಗನ ಮಾವನ ಹೆಸರು ಶಾಸನದಲ್ಲಿ ಉಕ್ತವಾಗಿಲ್ಲವೆಂದು ಅವರು ಹೇಳಿದ್ದಾರೆ. ಕಿಟ್ಟೆಲ್‌ರವರ ಪ್ರಕಾರ ಪೊನ್ನಕ್ಕನ ತಂದೆ ಎಡೆನಾಡಿನ ನಾಲ್ಗೋಡಿನ ಹಿರಿಯ ಅಧಿಕಾರಿ (ನಾಲ್ಗೋಡಿನ ಮುಖ್ಯ) ಯಾಗಿದ್ದ. ಆದರೆ ಆತ ಎಡೆನಾಡಿನ ಅಧಿಪತಿ (ಎಡೆನಾಡಧಿಪತಿ) ಯೂ ಆಗಿದ್ದ. ಶಾಸನ ಪಾಠವನ್ನು ವ್ಯತ್ಯಾಸವಾಗಿ ಓದಿದುದರ ಪರಿಣಾಮವಾಗಿ ಈ ರೀತಿಯ ಅಭಿಪ್ರಾಯಗಳುಂಟಾಗಿವೆ. ರೈಸ್‌ರವರು ಶಾಸನದ ಈ ಭಾಗದಲ್ಲಿನ ಹೆಸರನ್ನು (ಶಾಸನ ಪಾಠದ ೧೩ನೆಯ ಸಾಲು) ನಾಲ್ಗೋಜ ಎಂದು ಓದಿದ್ದಾರೆ. ಈ ಪಾಠವನ್ನು ನಾವು ಒಪ್ಪಿದ್ದೇವೆ. ಇದರಿಂದ ಪೊನ್ನಕ್ಕನ ತಂದೆಯ ಹೆಸರು ಸತ್ಯವಾಕ್ಯ ನಾಲ್ಗೋಜ ಎಂದು ತಿಳಿದುಬರುತ್ತದೆ. ೧೪ನೆಯ ವೃತ್ತದ ಭಾಷಾಂತರದಲ್ಲಿ (೧೯-೨೦ ನೆಯ ಸಾಲುಗಳು) ದೇಕಬ್ಬೆಯ ಪತಿಯು ಇರಿದು ಕೊಂದ ದಾಯಿಗನು ಚೋಳರಾಜನ ದಾಯಿಗನಾಗಿರಬಹುದು ಅಥವಾ ಏಚನ ದಾಯಿಗನಾದರೂ ಆಗಿರಬಹುದೆಂದು ಕಿಟ್ಟೆಲ್‌ರವರು ಹೇಳಿದ್ದಾರೆ.[1] ಏಚನು ಪರಾಕ್ರಮಿಯಾದ ಜಟ್ಟಿಗನಾಗಿದ್ದು ಆತ ತನ್ನ ಪರಾಕ್ರಮದಿಂದ ದಾಯಿಗನನ್ನು ಕೊಂದನೆಂದು ವರ್ಣಿಸಲಾಗಿದೆ. ಕೊಲೆಯಾದವನು ರಾಜನ ದಾಯಾದಿ ಎಂದಿಟ್ಟುಕೊಂಡರೆ ಏಚನು ಅವನಿಗಿಂತಲೂ ಮೇಲುಗೈ ಉಳ್ಳವನಾಗಿರಬೇಕೆಂಬ ಅಭಿಪ್ರಾಯ ಉಂಟಾಗುತ್ತದೆಯಲ್ಲದೆ, ಅಲ್ಲಿದ್ದ ರಾಜನ ದಾಯಿಗರು ಯಾರು ಮತ್ತು ಅವರ ಸ್ಥಾನಮಾನಗಳೇನು ಎಂಬ ಪ್ರಶ್ನೆಗಳು ಸಹ ಉದ್ಭವಿಸುತ್ತವೆ. ಮನೆತನದ ಅಂತಃಕಲಹದ ಫಲಿತಾಂಶ ಕೊಲೆಯಲ್ಲಿ ಮುಕ್ತಾಯಗೊಂಡಿತು ಎಂಬುದೇ ಹೆಚ್ಚು ಸಮಂಜಸವೆನಿಸುತ್ತದೆ. ಕಿಟ್ಟೆಲ್‌ರವರು ದೇಕಬ್ಬೆಯ ಮರಣವನ್ನು ಆತ್ಮಬಲಿ ಎಂದು ವರ್ಣಿಸಿ ಅದು ಸತಿ ಪದ್ಧತಿಗಿಂತ ಭಿನ್ನವೆಂದು ಭಾವಿಸಿದ್ದಾರೆ. ಈ ವ್ಯತ್ಯಾಸ ಅತಿಸೂಕ್ಷ್ಮ ರೀತಿಯದ್ದಾಗಿದೆ.

ಕ್ರಿ.ಶ. ೧೦೬೩ನೆಯ ವರ್ಷದ (ಹೆ.ಕೋ. ೩೪ನೆಯ) ಇಮ್ಮಡಿ ರಾಜೇಂದ್ರಚೋಳನ ಶಾಸನದಲ್ಲಿ ಆತನನ್ನು ರಾಜಕೇಸರಿ ಎಂದು ಕರೆಯಲಾಗಿದೆ. ನೆವಲೆನಾಡು ಮುಡಿಗೊಣ್ಡಶೋಳಮಂಡಲದ ಒಂದು ಭಾಗವಾಗಿತ್ತೆಂದು ಅದರಲ್ಲಿ ಹೇಳಿದೆ. ಪ್ರಸ್ತುತ ಆವೃತ್ತಿಯಲ್ಲಿ ಮುದ್ರಣವಾಗಿರುವ ಈ ಶಾಸನಪಾಠವು ರೈಸ್‌ರವರಿತ್ತ ಪಾಠಕ್ಕಿಂತ ಭಿನ್ನವಾಗಿದೆ. ರೈಸ್‌ರವರು ಕೆಜೆಯೂರಿನ ನಾಗಣ್ಣನು ನಾಡಿನ ಒಡೆಯ ಗಂಗಯನ ಮತ್ಸರಕ್ಕೆ ಹೆದರಿ ಅವನಿಗೆ ಶರಣಾಗತ ನಾದನೆಂದೂ, ಆಗ ಗಂಗಯನ ಮಗ ಸರಚಗಾವುಣ್ಡನು ನಾವು ನಾಗಣ್ಣನನ್ನು ಸಹಿಸಲಾರೆವು . . . . . ಎಂದು ಹೇಳಿದ ನೆಂದೂ ಮುಂತಾಗಿ ಅರ್ಥೈಸಿದ್ದಾರೆ.[2] ಶಾಸನವು ಭಗ್ನವಾಗಿರುವುದರಿಂದ ಅರ್ಥವಿವರಣೆ ಸ್ಪಷ್ಟವಾಗುವುದಿಲ್ಲವೆಂದು ಅಡಿ ಟಿಪ್ಪಣಿಯಲ್ಲಿ ಹೇಳಿದ್ದಾರೆ. ಕೆಜೆಯೂರ ನಾಗಣ್ಣನು ಕೊಳಿಗಾಲದ ಸಂಗಯನನ್ನು ಕೊಂದನೆಂದೂ, ಅದಕ್ಕೆ ಪ್ರತಿಯಾಗಿ ಮೇಲೆ ಹೇಳಿದ ನಾಗಣ್ಣನು ರಾಚಗಾವುಣ್ಡನಿಂದ ಹತನಾದನೆಂದೂ ಶಾಸನದಿಂದ ತಿಳಿದುಬರುತ್ತದೆ. ರಾಚಗಾವುಣ್ಡನಿಗೆ ಗಣ್ಡರಾದಿತ್ಯ ಚೋಳಗಾಮುಣ್ಡನೆಂಬ ಇನ್ನೊಂದು ಹೆಸರಿದ್ದಿತೆಂದೋ ಅಥವಾ ಆ ಹೆಸರಿನ ಬಿರುದು ಕೊಡಲ್ಪಟ್ಟಿತೆಂದೋ ತೋರುತ್ತದೆ. ಶಾಸನದ ಕಲ್ಲನ್ನು ನೆಡಿಸಿದ ಗಂಗಗೊಣ್ಡನ ಮಗ ರಾಚಗೊಣ್ಡನು ಬೇರೊಬ್ಬ ವ್ಯಕ್ತಿ. ವೀರವಣವನ್ನು ಪಡೆದು ಭೂಮಿಯನ್ನು ವಿಕ್ರಯಿಸಿದ ನಾಡಗಣ್ಡರಾದಿತ್ಯ ಚೋಳಗಾಮುಣ್ಡನೂ ಸಹ ಭಿನ್ನವಾದ ವ್ಯಕ್ತಿಯೇ. ಕಲ್ಲನ್ನು ಕೆತ್ತಿದ ಶಿಲ್ಪಿ ಕೇತಾಚಾರಿ. ಈತನು ಭೂಮಿಯನ್ನು ದಾನವಾಗಿ ಪಡೆದಂತೆ ತೋರುತ್ತದೆ. ಕ್ರಿ.ಶ. ೧೦೫೩ನೆಯ ವರ್ಷದ ರಾಜಾದಿತ್ಯನ ಹೆ.ಕೋ. ೩೨ನೆಯ ಶಾಸನದಲ್ಲಿ ಉತ್ತಮ.ಚೋಳಗಾವುಣ್ಡನ ಮಗ ರಾಚಯನು ನಾಡಗಣ್ಡರಾದಿತ್ಯಚೋಳಗಾಮುಣ್ಡನೆಂಬ ಬಿರುದನ್ನು ಹೊಂದಿದ್ದಂತೆ ಕಂಡುಬರುತ್ತದೆ. ಈ ವ್ಯಕ್ತಿ ಮೇಲೆ ಹೇಳಿದ ಕ್ರಿ.ಶ. ೧೦೬೩ರ ಶಾಸನದಲ್ಲಿ ಕಾಣಿಸಿಕೊಂಡ ನಾಡಗಣ್ಡರಾದಿತ್ಯ ಚೋಳಗಾಮುಣ್ಡನಾಗಿರಬಹುದೇ ? ಈ ಕುರಿತು ಏನನ್ನೂ ನಿಶ್ಚಿತವಾಗಿ ಹೇಳಲಾಗದು.

---

[1] *Ep. Ind.*, VI, p. 218, note 6.

[2] ಎ.ಕ. IV, Hg. 115, Rice's edition, Translation p. 80.

ಹೊಯ್ಸಳರು

ಹೊಯ್ಸಳರ ಶಾಸನಗಳಲ್ಲಿ ಕೂಗಲೂರಿನ ಶಾಸನವು (ನಂ. ಗೂ. ೩೭೦) ವಿಷ್ಣುವರ್ಧನನಿಗೆ ಸಂಬಂಧಿಸಿದುದಾಗಿದೆ. ವಿಷ್ಣುವರ್ಧನನ ಆಳ್ವಿಕೆಯನ್ನು ಸೂಚಿಸುವ ಈ ತುಂಡು ಶಾಸನದಲ್ಲಿ ಉಳಿದೆಲ್ಲ ವಿವರಗಳೂ ನಷ್ಟವಾಗಿವೆ.

ಕಾರ್ಯ ಗ್ರಾಮದ ನಂ. ಗೂ. ೨೮೩ನೆಯ ಶಾಸನದ ಕಾಲ ಸು. ೧೨ನೆಯ ಶತಮಾನ. ಈ ಶಾಸನದಲ್ಲಿ ಭುಜಬಲ ವೀರಗಂಗ ಜಗದೇಕಮಲ್ಲ ಹೊಯ್ಸಳದೇವನ ಹೆಸರು ಉಕ್ತವಾಗಿದೆ. ಆತ ತ್ರಿಭುವನಮಲ್ಲನೆಂಬ ಬಿರುದನ್ನು ಧರಿಸಿರುವುದಲ್ಲದೆ, ತಲಕಾಡು, ಗಂಗವಾಡಿ, ನೊಳಂಬವಾಡಿ, ಕೊಂಗು, ನಂಗಲಿ, ಬನವಸೆ, ಉಚ್ಚಂಗಿ ಮುಂತಾದ ಪ್ರದೇಶಗಳನ್ನು ಗೆದ್ದವನೆಂದೂ ವರ್ಣಿಸಲಾಗಿದೆ. ಸಾಮಾನ್ಯವಾಗಿ ಈ ಬಿರುದುಗಳನ್ನು ವಿಷ್ಣುವರ್ಧನನಿಗೆ ಅನ್ವಯಿಸುತ್ತಿದ್ದು ಆತನನ್ನೇ ಇಲ್ಲಿ ಹೆಸರಿಸಿರಲೂಬಹುದು. ಸುಮಾರು ಕ್ರಿ. ಶ. ೧೧೪೦ರಲ್ಲಿ ವಿಷ್ಣುವರ್ಧನನು ಚಾಲುಕ್ಯ ಇಮ್ಮಡಿ ಜಗದೇಕಮಲ್ಲನಿಂದ ಪರಾಜಿತನಾದ ವಿಷಯ ನಮಗೆ ತಿಳಿದಿದೆ. ಆ ನಂತರ ಹೊಯ್ಸಳರು ಜಗದೇಕಮಲ್ಲನ ಸಾರ್ವಭೌಮತ್ವವನ್ನು ಸ್ವೀಕರಿಸಿರಬೇಕೆಂಬುದನ್ನು ಆ ಬಿರುದು ಸೂಚಿಸುತ್ತದೆ. ಆದರೆ ಪ್ರಸ್ತುತ ಶಾಸನದಲ್ಲಿ ಉಕ್ತವಾದ ಸಂವತ್ಸರ ಕ್ರೋಧಿ. ಇದು ವಿಷ್ಣುವರ್ಧನನ ಆಳ್ವಿಕೆಯ ಕಾಲದ ಕ್ರಿ. ಶ. ೧೧೨೪ಕ್ಕೆ ಹೊಂದಿಕೆಯಾಗುತ್ತದೆ. ಈ ವೇಳೆಗಾಗಲೇ ಒಮ್ಮೆ, ಸುಮಾರು ಕ್ರಿ. ಶ. ೧೧೨೨ರಲ್ಲಿ ವಿಷ್ಣುವರ್ಧನನು ಚಾಲುಕ್ಯ ಆರನೆಯ ವಿಕ್ರಮಾದಿತ್ಯನಿಂದ ಪರಾಜಿತನಾಗಿದ್ದ. ಆದರೆ ವಿಕ್ರಮಾದಿತ್ಯನು ಜಗದೇಕಮಲ್ಲನೆಂಬ ಬಿರುದನ್ನು ಧರಿಸಿರಲಿಲ್ಲ. ಆರನೆಯ ವಿಕ್ರಮಾದಿತ್ಯನ ಮೊಮ್ಮಗನಾದ ಜಗದೇಕಮಲ್ಲನು ತನ್ನ ಅಜ್ಜನ ಕಾಲದಲ್ಲಿಯೇ ಮಹಾಮಂಡಲೇಶ್ವರನಾಗಿದ್ದಿರಬಹುದೆಂಬುದು ಈಗ ತಿಳಿದಿದೆ. ಕ್ರಿ. ಶ. ೧೦೯೯ರ ಭಾಲ್ಕಿಯ ಶಾಸನದಲ್ಲಿ ಈತನ ಹೆಸರು ಉಕ್ತವಾಗಿದೆ.[1] ವಿಷ್ಣುವರ್ಧನನನ್ನು ಪರಾಜಿತಗೊಳಿಸುವಲ್ಲಿ ಈ ರಾಜಕುಮಾರ ಜಗದೇಕಮಲ್ಲನೂ ಭಾಗಿಯಾಗಿರಬೇಕು. ಎಂತಲೇ ಚಾಲುಕ್ಯರ ಅಧೀನತೆಯನ್ನು ಒಪ್ಪಿದ ವಿಷ್ಣುವರ್ಧನನು ಜಗದೇಕಮಲ್ಲನೆಂಬ ಬಿರುದನ್ನು ಕ್ರಿ. ಶ. ೧೧೨೪ರಲ್ಲಿಯೇ ಧರಿಸಿದನೆಂದು ತೋರುತ್ತದೆ.

ಈ ಸಂಪುಟದಲ್ಲಿರುವ ಒಂದನೆಯ ನರಸಿಂಹನ ಶಾಸನಗಳಲ್ಲಿ ಕೂಡ್ಲಾಪುರದ ಶಾಸನವು (ನಂ. ಗೂ. ೩೨೨) ಪ್ರಾಚೀನವಾದುದು. ಇದರ ಕಾಲ ಕ್ರಿ. ಶ. ೧೧೪೮. ಶಾಸನದ ಪೂರ್ವಾರ್ಧದಲ್ಲಿ ಪ್ರಥಮಗಂಗನೆನಿಸಿದ ಕೊಜ್ಗಣಿವರ್ಮನು ಮಾಡಿದ ದಾನವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಈ ವಿಷಯವನ್ನು ಈ ಮೊದಲೇ ಗಮನಿಸಿದ್ದೇವೆ. ಶಾಸನದ ಉತ್ತರಾರ್ಧದಲ್ಲಿ ವಿಷ್ಣುವರ್ಧನನಾರಸಿಂಹಪೆರ್ಮಾಳದೇವನ ಆಳ್ವಿಕೆಯ ಪ್ರಸ್ತಾಪವಿದೆ. ಈತನನ್ನು ಮೊದಲನೆಯ ನರಸಿಂಹನೆಂದು ಗುರುತಿಸಲಾಗಿದೆ. ಹಾವಳಿಯ ಶಾಸನದ[2] ಆಧಾರದ ಮೇಲೆ ವಿಷ್ಣುವರ್ಧನನು ಕ್ರಿ. ಶ. ೧೧೪೧ರಲ್ಲಿ ಮೃತಿಹೊಂದಿದನೆಂದು ಸಾಮಾನ್ಯವಾಗಿ ಒಪ್ಪಲಾಗಿದೆಯಾದರೂ ಆ ಶಾಸನದಲ್ಲಿ ಉಲ್ಲೇಖವಾದ ಹಿರಿಯರಸ ಬಿಟ್ಟಿದೇವನು ವಿಷ್ಣುವರ್ಧನನೆಂಬುದನ್ನು ಕೆಲವರು ಒಪ್ಪಿಲ್ಲ. ಪ್ರೊ. ಕೊಯೆಲ್ಹೊ ರವರು ಈ ವಿಷಯವನ್ನು ಚರ್ಚಿಸಿ ವಿಷ್ಣುವರ್ಧನನ ಉಲ್ಲೇಖವಿರುವ ಕ್ರಿ. ಶ. ೧೧೪೧ರ ನಂತರದ ಕ್ರಿ. ಶ. ೧೧೫೨ರ ವರೆಗಿನ ಕೆಲವು ಶಾಸನಗಳನ್ನು ವಿಷ್ಣುವರ್ಧನನಿಗೆ ಅನ್ವಯಿಸಲಾಗುವುದಿಲ್ಲವೆಂದು ಪ್ರತಿಪಾದಿಸಿದ್ದಾರೆ.[3] ಆದರೆ ಅವರ ವಾದಗಳು ಸಮಾಧಾನಕರವಾಗಿಲ್ಲ. ಸಂಬಂಧಪಟ್ಟ ಶಾಸನಗಳನ್ನು ಪರೀಕ್ಷಿಸುವ ಮುನ್ನವೇ ಈ ವಿವರಗಳನ್ನು ಚರ್ಚಿಸುವುದು ಅಪ್ರಸ್ತುತವಾದೀತು. ವಿಷ್ಣುವರ್ಧನನು ಕ್ರಿ. ಶ. ೧೧೫೨ರ ವರೆಗೆ ಆಳಿದನೆಂಬುದನ್ನು ಸದ್ಯಕ್ಕೆ ಅಂಗೀಕರಿಸಿ ಮೊದಲನೆಯ ನರಸಿಂಹನು ವಿಷ್ಣುವರ್ಧನನ ಜೊತೆಯಲ್ಲಿ ಆಳುತ್ತಿದ್ದರೂ ತನ್ನೊಬ್ಬನ ಹೆಸರಿನಲ್ಲಿಯೇ ಸ್ವತಂತ್ರವಾಗಿ ಶಾಸನಗಳನ್ನು ಹಾಕಿಸುತ್ತಿದ್ದನೆಂಬುದನ್ನು ಕ್ರಿ. ಶ. ೧೧೪೮ರ ಪ್ರಸ್ತುತ ಶಾಸನ ಸೂಚಿಸುತ್ತದೆ ಎಂದು ಮಾತ್ರ ಈಗ ಹೇಳಬಹುದು.

ಕ್ರಿ. ಶ. ೧೧೫೭ನೆಯ ವರ್ಷದ ಇದೇ ಒಂದನೆಯ ನರಸಿಂಹನ ಆಳ್ವಿಕೆಗೆ ಸಂಬಂಧಿಸಿದ ಗು. ಪೇ. ೨೧೫ನೆಯ ಶಾಸನವು ಮಹಾಪಸಾಯಿತನಾದ ಮಾಮಣಮಲ್ಲಣ್ಣನು 'ಕೊಂಗಿಂಗೆ ಧಾಳಿ ಇಟ್ಟ'ನೆನ್ನುತ್ತದೆ. ಇದಕ್ಕೂ ಮೊದಲೇ, ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿಯೇ, ಕೊಂಗುದೇಶವನ್ನು ಹೊಯ್ಸಳರು ವಶಪಡಿಸಿಕೊಂಡಿದ್ದರೆಂಬುದನ್ನು ಶಾಸನಗಳು ತಿಳಿಸುತ್ತವೆ.[4] ಕೊಂಗುವಿನಲ್ಲಿ ನಡೆದ ಕದನದಲ್ಲಿ ವಿಷ್ಣುವರ್ಧನನ ಸೈನಿಕರಿಗೆ ಅಡಿಗೈಮಾನ್ ಬಲಿಯಾದನೆಂಬುದು

---

[1] ಮಾನವಿಕ ಕರ್ಣಾಟಕ, ಸಂಪುಟ ೨, ಸಂಚಿಕೆ ೪ (ಬೀದರ್ ಜಿಲ್ಲೆಯ ಶಾಸನಗಳು–೨)

[2] ಎ. ಕ. VI Cm. 96

[3] *The Hoysaḷa Vamśa*, p. 116–117

[4] ಉದಾಹರಣೆಗೆ : ಎ. ಕ. ಸಂಪುಟ ೨ (1973 edition) ಶಾಸನ ಸಂಖ್ಯೆ 481. ಕಾಲ ಕ್ರಿ. ಶ. 1159.

ತಿಳಿದ ವಿಷಯುವೇ ಆಗಿದೆ. ಆದರೂ ಆ ಪ್ರದೇಶ ಸಂಪೂರ್ಣವಾಗಿ ಹೊಯ್ಸಳರ ವಶವಾಗಲಿಲ್ಲವೆಂಬುದು ಸುಸ್ಪಷ್ಟ. ಪ್ರಸ್ತುತ ಶಾಸನದಿಂದ ಮೊದಲನೆಯ ನರಸಿಂಹನು ಕೊಂಗುದೇಶವನ್ನು ವಶಪಡಿಸಿಕೊಳ್ಳಲು ಶಾಸನ ಕಾಲದ ೧೧೫೭ರ ಸುಮಾರಿಗೆ ಒಮ್ಮೆ ಪ್ರಯತ್ನಿಸಿದನೆಂಬುದು ಕಂಡುಬರುತ್ತದೆ.

ಕ್ರಿ. ಶ. ೧೧೬೨–೬೩ನೆಯ ವರ್ಷದ ನಿಟ್ರೆಯ ತಮಿಳುಶಾಸನದಲ್ಲಿ (ಗು.ಪೇ. ೬೪) ಮಹಾಪ್ರಧಾನ, ಸರ್ವಾಧಿಕಾರಿ. ಮಲ್ಲಿಕಾರ್ಜುನ ದಣ್ಣಾಯಕನು ಅರಸನ ಸೇನಾಧಿಪತಿಯಾಗಿ ಕಾಣಿಸಿಕೊಂಡಿದ್ದಾನೆ. ಆತ ಮತ್ತೊಬ್ಬ ಮಹಾದಣ್ಣಾಯಕ ನೊಡನೆ (ಆತನ ಹೆಸರು ಲಭ್ಯವಾಗಿಲ್ಲ) ಕೊಲ್ಗಣದ ವಾಸುದೇವರಿಗೆ ಭೂಮಿಯನ್ನು ದಾನವಾಗಿ ಕೊಟ್ಟನು. ಕ್ರಿ. ಶ. ೧೧೭೧ನೆಯ ವರ್ಷದ ಗು. ಪೇ. ೭೦ನೆಯ ಶಾಸನದಲ್ಲಿ ರಾಜನ ಇನ್ನೊಬ್ಬ ಅಧಿಕಾರಿಯಾದ ಮಹಾಪ್ರಧಾನ, ಸರ್ವಾಧಿಕಾರಿ ಹೆಗ್ಗಡೆ ಕಲ್ಲಯ್ಯನನ್ನು ಹೆಸರಿಸಲಾಗಿದೆ.

ಕ್ರಿ. ಶ. ೧೧೯೬ನೆಯ ವರ್ಷದ ಗು. ಪೇ. ೩ನೆಯ ಶಾಸನದಲ್ಲಿ ಉತ್ತರಕ್ಕೆ ಹೆದ್ದೊರೆವರೆಗಿನ ರಾಜ್ಯಗಳನ್ನು ವಶ ಪಡಿಸಿಕೊಂಡ ಎರಡನೆಯ ಬಲ್ಲಾಳನು ತನ್ನ ರಾಜಧಾನಿಯಾದ ದೋರಸಮುದ್ರದಲ್ಲಿ ಆಳುತ್ತಿದ್ದಾಗ ಆತನ ಅಧಿಕಾರಿಯಾದ ಕುಮಾರ ಲಕ್ಷ್ಮಣ ದಣ್ಣಾಯಕನು ಕುಡುಗುನಾಡು–೩೦೦ ಪ್ರಾಂತವನ್ನು ಆಳುತ್ತಿದ್ದನೆಂದು ಹೇಳಿದೆ. ಈ ಲಕ್ಷ್ಮಣದಣ್ಡ ನಾಯಕನು ಕ್ರಿ.ಶ. ೧೧೯೬–೯೭ರ (ನಂ.ಗೂ. ೨೨೦) ಶಾಸನದಲ್ಲಿ ಉಕ್ತನಾಗಿರುವ ಕುಮಾರ ಲಕ್ಷ್ಮಿದೇವ ದಣ್ಡನಾಯಕ ನೆಂದು ಗುರುತಿಸಬಹುದು. ಈ ಅಧಿಕಾರಿಯು ಹಿರಿಯನಾಡಿಗೆ ಸೇರಿದ ಎಡೆನಾಡಿನ ಸೊತ್ತಿಯೂರಿನಮೇಲೆ ದಂಡೆತ್ತಿಹೋಗಿ ಶತ್ರುಗಳನ್ನು ಓಡಿಸಿದನೆಂದು ಈ ಶಾಸನದಲ್ಲಿ ಹೇಳಿದೆ. ಈ ಶತ್ರುಗಳು ಯಾರು ಎಂಬುದನ್ನು ತಿಳಿಯಲು ಸಾಧ್ಯವಿಲ್ಲ. ಮೂರನೆಯ ಕುಲೋತ್ತುಂಗನು ಆಳುತ್ತಿದ್ದ ಈ ವೇಳೆಯಲ್ಲಿ ಚೋಳರು ತಮ್ಮ ರಾಜ್ಯವನ್ನು ಈ ಪ್ರದೇಶದಲ್ಲಿ ಪುನಃ ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು.[1] ಶಾಸನದಲ್ಲಿ ನಮೂದಿಸಲಾದ ಶತ್ರು ಈ ಚೋಳರಾಜನೋ ಇಲ್ಲವೇ ಆತನ ಪ್ರತಿನಿಧಿಯೋ ಆಗಿರಬಹುದಾದ ಸಾಧ್ಯತೆ ಉಂಟು. ಅದೇ ಸುತ್ತೂರಿನಲ್ಲಿ ೧೩ನೆಯ ಶತಮಾನಕ್ಕೆ ಸೇರಿದ ಮತ್ತೊಂದು ಭಗ್ನವಾದ ವೀರಗಲ್ಲು (ನಂ. ಗೂ. ೨೨೧) ಇದೆ. ಮಲಿಸೆಟಿಯ ಮಗ ಎಕ್ಕಟಿಗ ಚಿಕಣನು ಮಹಾಪ್ರಧಾನ ಹಿರಿಯ ನಾಯಕ ಮಂಚಯ್ಯಂಗಳ ಬೆಸದಿಂದ ಕಣಿಯಲದಲ್ಲಿ ನಡೆದ ಕದನದಲ್ಲಿ ಕಾದಿ ಸತ್ತನೆಂದು ಈ ಶಾಸನ ತಿಳಿಸುತ್ತದೆ. ಈ ಮಂಚಯ್ಯನು ಎರಡನೆಯ ವೀರಬಲ್ಲಾಳನ ಕ್ರಿ. ಶ. ೧೨೧೧ರ (ಹೆ. ಕೋ. ೭೪) ಶಾಸನದಲ್ಲಿ ಉಕ್ತವಾಗಿರುವ ಮಂಚಯ್ಯದಣ್ಣಾಯಕನಿರಬಹುದು. ಆತ ಮಹಾಪ್ರಧಾನ ಹಿರಿಯದಣ್ಡನಾಯಕ ಗೋವಿಂದಮಯ್ಯನ ತಮ್ಮನೆಂದು ಅದರಲ್ಲಿ ಹೇಳಿದೆ. ಇದು ನಿಜವಾದಲ್ಲಿ ನಂ ಗೂ. ೨೨೧ನೆಯ ಶಾಸನವೂ ಸಹ ಎರಡನೆಯ ಬಲ್ಲಾಳನ ಆಳ್ವಿಕೆಗೆ ಸಂಬಂಧಿಸಿದು ದಾಗಿರಬೇಕು. ಮತ್ತು ಮೇಲೆ ಹೇಳಿದ ಕಣಿಯಲ ಕದನವು ಹೊಯ್ಸಳ ಮತ್ತು ಚೋಳರಿಗೆ ನಿರಂತರವಾಗಿ ನಡೆದ ಸಮರಗಳಲ್ಲಿ ಒಂದಾಗಿರಬೇಕು.

ಕ್ರಿ.ಶ. ೧೩ನೆಯ ಶತಮಾನಕ್ಕೆ ಸೇರಿದ ಶೋಟಿಗಂಗದೇವನ ಆಳಿಕೆಯ ೧೪ನೆಯ ವರ್ಷದ ಕೆಲಸೂರಿನ (ಗು.ಪೇ. ೧೦೨) ತಮಿಳು ಶಾಸನವು ಆ ಹಳ್ಳಿಯು ಮುಡಿಗೊಣ್ಡಶೋಟಿಮಣ್ಡಲಮ್‌ಗೆ ಸೇರಿದ ಗಂಗೈಕೊಣ್ಡಶೋಟಿವಟಿನಾಡಿನ ಕುಡುಗೂರುನಾಡಿನಲ್ಲಿ ಇತ್ತೆಂದು ಸೂಚಿಸಿರುವುದನ್ನು ಇಲ್ಲಿ ಗಮನಿಸಬಹುದು. ಇಲ್ಲಿ ಪ್ರಸ್ತಾಪಮಾಡಲಾಗಿರುವ ರಾಜನು ಮೂರನೆಯ ಚೋಳ ಕುಲೋತ್ತುಂಗನ ಸಾಮಂತನಾಗಿದ್ದು ಗಂಗರ ಬಿರುದುಗಳನ್ನು ಧರಿಸಿದ್ದ. ಇವನ ವಂಶಸ್ಥರಲ್ಲಿ ಕೆಲವರು ಕೋಲಾರಜಿಲ್ಲೆಯ ಸುತ್ತಮುತ್ತ ಆಳುತ್ತಿದ್ದುದು ಕಂಡುಬಂದಿದೆ. ಶಾಸನದಲ್ಲಿ ಉಕ್ತವಾಗಿರುವ ಕಾಲವು ಮೂರನೆಯ ಕುಲೋತ್ತುಂಗ ಚೋಳನ ಆಳಿಕೆಯ ಕಾಲವಾಗಿದ್ದಿರಬಹುದು. ಹಾಗಾದಪಕ್ಷದಲ್ಲಿ ಅದು ಕ್ರಿ. ಶ. ೧೧೯೧–೯೨ಕ್ಕೆ ಸರಿಹೊಂದುವುದು ಕ್ರಿ.ಶ. ೧೧೯೧–೯೨ರಲ್ಲಿ ಕುಡುಗೂರುನಾಡು ಮೂರನೆಯ ಕುಲೋತ್ತುಂಗನ ಅಧೀನದಲ್ಲಿತ್ತು. ಕ್ರಿ.ಶ. ೧೧೯೬ರಲ್ಲಿ ಕುಮಾರ ಲಕ್ಷ್ಮಿದೇವನು ಈ ಭಾಗವನ್ನು ಆಳುತ್ತಿದ್ದು ಇಲ್ಲಿಯ ಶತ್ರುಗಳನ್ನು ಹಿಂದಕ್ಕೋಡಿಸಲು ಪ್ರಯತ್ನಿಸುತ್ತಿದ್ದ. ಬಹುಶಃ ಮಂಚಯ್ಯನೂ ಇದೇ ಪ್ರಯತ್ನದಲ್ಲಿ ತೊಡಗಿದ್ದಿರಬೇಕು. ನಂ ಗೂ. ೨೨೧ರಲ್ಲಿ ಉಕ್ತವಾಗಿರುವ ಕಣಿಯಾಲವು ಗುಂಡ್ಲುಪೇಟೆ ತಾಲೂಕಿನ ಕಣ್ಣೆಗಾಲವಾಗಿರಬಹುದು.

ಹೆ.ಕೋ. ೮೨ನೆಯ ತಮಿಳು ಶಾಸನವು ವೀರಬಲ್ಲಾಳದೇವನಿಗೆ ಸಂಬಂಧಿಸಿದುದಾಗಿದೆ. ಶಾರ್ವರಿ ಸಂವತ್ಸರ ಕುಂಭಮಾಸ ಎಂದು ಶಾಸನದ ಕಾಲವನ್ನು ಸೂಚಿಸಲಾಗಿದೆ. ಕ್ರಿಸ್ತಶಕದ ವರ್ಷವೊಂದರೊಡನೆ ಸರಿಹೊಂದಿಸಲು

[1] *A.R.S.I.E.*, 1907, Pt. II para 67 p. 74.

ಬೇಕಾದ ವಿವರಗಳು ಇದರಲ್ಲಿಲ್ಲ. ಉಕ್ತನಾದ ಅರಸನು ಇಮ್ಮಡಿ ಬಲ್ಲಾಳನೇ ಅಥವಾ ಮೂರನೆಯ ಬಲ್ಲಾಳನೇ ಎಂದು ಖಚಿತವಾಗಿ ಹೇಳಲೂ ಸಾಧ್ಯವಿಲ್ಲ. ಏಕೆಂದರೆ ಇವರಿಬ್ಬರ ಆಳಿಕೆಯ ಕಾಲದಲ್ಲೂ ಶಾರ್ವರಿ ಸಂವತ್ಸರವು ಬಂದಿದೆ. ಈ ಶಾಸನದಲ್ಲಿ ನುಗುನಾಡು ಮುಡಿಗೊಂಡ ಶೋಳಮಂಡಲಮ್‌ಗೆ ಸೇರಿದ ಗಂಗೈಕೊಂಡ ಶೋಳವಳನಾಡಿನಲ್ಲಿತ್ತೆಂದು ಹೇಳಿದೆ. ಆದ್ದರಿಂದ ಶಾಸನ ಹುಟ್ಟಿದ ಕಾಲದಲ್ಲಿ ಆ ಪ್ರದೇಶವು ಚೋಳರ ಅಧೀನದಲ್ಲಿದ್ದು ಆ ಪ್ರದೇಶಗಳಿಗೆ ತಮ್ಮ ಅರಸರ ಹೆಸರನ್ನೇ ಅವರು ಕೊಟ್ಟಿದ್ದರೆಂಬುದು ಇದರಿಂದ ಸೂಚಿತವಾಗುತ್ತದೆ. ಕ್ರಿ.ಶ. ೧೧೯೧-೯೨ರಲ್ಲಿ ಕುಡುಗುನಾಡು ಸಹ ಇದೇ ಪ್ರದೇಶಕ್ಕೆ ಸೇರಿತ್ತೆಂಬುದನ್ನು ಮೇಲೆ ಗಮನಿಸಿದ್ದೇವೆ. ಕ್ರಿ.ಶ. ೧೧೯೬ನೆಯ ವರ್ಷದ ಶಾಸನದಲ್ಲಿ ಕುಡುಗುನಾಡು ತಮಿಳು ಹೆಸರುಗಳುಳ್ಳ ಪ್ರಾಂತದ ಭಾಗವಾಗಿತ್ತೆಂದು ಹೇಳಿಲ್ಲ. ಕ್ರಿ.ಶ. ೧೨೧೮ (ಹೆ.ಕೋ. ೮೧)ರ ಶಾಸನದ ಪ್ರಕಾರ ನುಗುನಾಡು ಸಹ ಈ ಪ್ರದೇಶಗಳೊಡನೆ ಸಂಬಂಧ ಹೊಂದಿಲ್ಲ. ಆದ್ದರಿಂದ ಈ ಶಾಸನವು ಕ್ರಿ.ಶ. ೧೨೮೦ಕ್ಕೂ ಮೊದಲು, ಕ್ರಿ.ಶ. ೧೧೯೬ಕ್ಕೂ ಹಿಂದಿನ ವರ್ಷದಲ್ಲಿ ಹುಟ್ಟಿದ್ದಾಗಿರಬಹುದೆಂದು ಹೇಳಬಹುದು. ಶಾರ್ವರಿ ಸಂವತ್ಸರವು ಕ್ರಿ.ಶ. ೧೧೮೦ಕ್ಕೆ ಸರಿಹೋಗುತ್ತದೆ. ಆದ್ದರಿಂದ ಈ ಶಾಸನದ ಕಾಲ ೧೧೮೦ ಮತ್ತು ಅದರಲ್ಲಿ ಉಕ್ತನಾಗಿರುವ ಅರಸನು ಎರಡನೆಯ ಬಲ್ಲಾಳನಾಗಿರಬಹುದೆಂದು ಹೇಳಬಹುದು.

ಕ್ರಿ.ಶ. ೧೨೧೮ರ (ಹೆ.ಕೋ. ೮೧ ಮತ್ತು ೮೩) ಶಾಸನಗಳಲ್ಲಿ ಕುಮಾರ ಮಾಧವದಣ್ಣಾಯಕನು ಎರಡನೆಯ ವೀರಬಲ್ಲಾಳನ ಅಧೀನನಾಗಿ ಕುಮಾರನಾಡನ್ನು ಏಕಾಧಿಷ್ಠಿತವಾಗಿ ಆಳುತ್ತಿದ್ದನೆಂದು ಹೇಳಿದೆ. ಆತನನ್ನು ಮಹಾಪ್ರಧಾನ, ಸರ್ವಾಧಿಕಾರಿ, ಮಹಾಪಸಾಯತ, ಬಾಹತ್ತರನಿಯೋಗಾಧಿಪತಿ ಮತ್ತು ಅನೇಕದೇಶಾಧಿಪತಿ ಎಂದು ವರ್ಣಿಸಲಾಗಿದೆ. ಆತನೊಡನೆ ಕೇಶವದಣ್ಣಾಯಕನ ಹೆಸರನ್ನೂ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಅವರ ಪರಸ್ಪರ ಸಂಬಂಧ ತಿಳಿದಿಲ್ಲ. ನುಗುನಾಡಿಗೆ ಸೇರಿದ್ದ ಕುಂದೂರು ಗ್ರಾಮವನ್ನು ಕಲ್ಲಂಬಾಳಿನ ಕಾಮೇಶ್ವರದೇವರಿಗೆ ದತ್ತಿಯಾಗಿ ಕೊಡಲಾಗಿತ್ತು. ಕುಂದೂರಿನಲ್ಲಿ ದೊರೆತ ಹೆ. ಕೋ. ೮೩ನೆಯ ಶಾಸನವು ಪ್ರಧಾನ ನರಸಿಂಹನಾಯಕ ಹಾಗೂ ಮಹಾಪ್ರಧಾನ ತಿಪ್ಪರಸಯ್ಯನ ಸಾಮಂತನಾದ ಎಜಿಮನಾಯಕರು ಈ ದತ್ತಿಯನ್ನು ಸ್ಥಿರಗೊಳಿಸಿದರೆಂದು ತಿಳಿಸುತ್ತದೆ. ಕ್ರಿ.ಶ ೧೧೯೮ರಲ್ಲಿ ನುಗುನಾಡನ್ನು ಮಹಾಪ್ರಧಾನ ಹಿರಿಯ ದಣ್ಣಾಯಕ ಗೌಡಯ್ಯನು ಆಳುತ್ತಿದ್ದನೆಂದು ಜೋಡಿ ಕಾಟೂರಿನಲ್ಲಿ ದೊರೆತ ನಂ. ಗೂ. ೧೩೬ರ ಶಾಸನದಲ್ಲಿ ಹೇಳಿದೆ.

ಎರಡನೆಯ ನರಸಿಂಹನ ಅಧಿಕಾರಿಗಳಲ್ಲಿ ಒಬ್ಬನಾದ ಶ್ರೀರಂಗದಣ್ಣಾಯಕನು ಕ್ರಿ. ಶ. ೧೨೨೧ನೆಯ ವರ್ಷದ (ಗು.ಪೇ. ೮೯) ಶಾಸನದಲ್ಲಿ ಉಕ್ತನಾಗಿದ್ದು, ಆತನು ಹಿರಿಯನಾಡಿನ ಮಹಾಪ್ರಭುವಾದ ಕೊಲುಗಣದ ಶಂಕರಗಾವುಂಡ ನೊಡನೆ ವಿಜಯನಾರಾಯಣದೇವರಿಗೆ ದಾನವನ್ನು ಕೊಟ್ಟ ವಿಷಯ ಅದರಲ್ಲಿ ಹೇಳಿದೆ. ಈ ಶಂಕರಗಾವುಂಡನು ಕ್ರಿ.ಶ. ೧೨೨೯ನೆಯ ವರ್ಷದ ಕೆಲಸೂರಿನ (ಗು ಪೇ. ೧೦೧) ಮತ್ತೊಂದು ಶಾಸನದಲ್ಲೂ ಕಾಣಿಸಿಕೊಂಡಿದ್ದಾನೆ. ಪ್ರಸ್ತುತ ಸಂಪುಟದಲ್ಲಿ ಇನ್ನಿಬ್ಬರು ಅಧಿಕಾರಿಗಳ ಹೆಸರು ನಮಗೆ ತಿಳಿದುಬರುತ್ತದೆ. ಮಹಾಪ್ರಧಾನ, ಸರ್ವಾಧಿಕಾರಿ ಎಂದು ವರ್ಣಿಸಲಾದ ಮಲ್ಲಿಕಾರ್ಜುನ ದಂಡನಾಯಕ ಮತ್ತು ಜಲ್ಲಹ ದಣ್ಣಾಯಕರೆಂಬ ಇನ್ನಿಬ್ಬರು ಸೇನಾನಿಗಳು ಕ್ರಿ. ಶ ೧೨೨೭ರ (ನಂ. ಗೂ. ೩೨೧) ಶಾಸನದಲ್ಲಿ ದಾನಿಗಳಾಗಿ ಕಾಣಿಸಿಕೊಂಡಿದ್ದಾರೆ. ಬದನಾಳು ಶಾಸನದಲ್ಲಿ ಸೂಚಿತವಾದ ಕಾಲದ ವಿವರಗಳು ಸರಿಹೊಂದುವುದಿಲ್ಲವಾದರೂ, ಆ ಶಾಸನದ ಕಾಲ ಕ್ರಿ ಶ. ೧೨೭೮ರ ಮಾರ್ಚಿ ೧೪ ಎಂದು ಹೇಳಬಹುದು (ನಂ.ಗೂ. ೨೬೪). ಅಂದು ಕುಮಾರ ಸೋಮೇಶ್ವರನು ರಾಜಧಾನಿ ಕಣ್ಣಾನೂರಿನಿಂದ ಆಳುತ್ತಿದ್ದ ನೆಂದು ಆ ಶಾಸನದಿಂದ ತಿಳಿದಿದೆ. ಆ ಶಾಸನವನ್ನು ಪ್ರೊ. ಕೊಯೆಲ್ಹೋರವರು ಗಮನಿಸಿದ್ದಾರೆ.[1] ಶಾಸನದಲ್ಲಿ ಇಮ್ಮಡಿ ನರಸಿಂಹನ ಹೆಸರನ್ನೇ ಹೇಳಿಲ್ಲ. ಇದು ಸೋಮೇಶ್ವರನು ಸ್ವತಂತ್ರವಾಗಿ ಹಾಕಿಸಿದ ಶಾಸನವಾಗಿದೆ. ಆದ್ದರಿಂದ ಈ ಶಾಸನದಲ್ಲಿ ಉಕ್ತವಾದಕಾಲದಿಂದಲೇ ಹೊಯ್ಸಳರಾಜ್ಯದ ದಕ್ಷಿಣಭಾಗದ ಆಡಳಿತವನ್ನು ಸೋಮೇಶ್ವರನಿಗೆ ವಹಿಸಿರುವ ಸಾಧ್ಯತೆ ಇದೆ.[2]

ಸೋಮೇಶ್ವರನ ೭ ಶಾಸನಗಳಲ್ಲಿ ೪ ಶಾಸನಗಳು ತಮಿಳು ಮತ್ತು ಗ್ರಂಥಾಕ್ಷರಗಳಲ್ಲಿದ್ದು ತಮಿಳು ಭಾಷೆಯಲ್ಲಿವೆ. ಹೆಚ್ಚು ಕಡಿಮೆ ಆ ಶಾಸನ ಕಲ್ಲುಗಳೆಲ್ಲಾ ಒಡೆದುಹೋಗಿ ಶಾಸನಗಳ ಬಹುಭಾಗ ಹಾಳಾಗಿವೆ. ಕ್ರಿ. ಶ. ೧೨೪೧ ನೆಯ ವರ್ಷದ ನಂ.ಗೂ. ೨೫೬ರ ಶಾಸನದಲ್ಲಿ ತರಯೂರು ಪೆರಿಯನಾಡಿನಲ್ಲಿತ್ತೆಂದು ಹೇಳಿದೆ. ಕ್ರಿ.ಶ. ೧೨೩೩ರ ಹೆ.ಕೋ. ೨೨ರ ಶಾಸನದಲ್ಲಿ ಬಪನಾಡಿನ ಪ್ರಸ್ತಾಪವಿದೆ. ಹೆ. ಕೋ. ೪೮ನೆಯ ಕನ್ನಡ ಶಾಸನದ ಪಾಠವು ಮಾತ್ರ ಸಂಪೂರ್ಣ

---

[1] *The Hoysaḷa Vaṁśa*, p. 185.

[2] cf. K. R. Venkataraman : *Hoysaḷas in the Tamil country*, p. 15.

ವಾಗಿದ್ದು ಇದರ ಕಾಲ ಕ್ರಿ.ಶ. ೧೨೫೫. ಅದು ಮಲ್ಲಿಕಾರ್ಜುನ ಮತ್ತು ಬಾಣೇಶ್ವರ ದೇವಾಲಯಗಳಿಗೆ ಬಿಟ್ಟ ದತ್ತಿಯ ವಿಷಯವನ್ನು ಪ್ರಸ್ತಾಪಿಸುವುದಲ್ಲದೆ ಮಹಾಪ್ರಧಾನ, ಸರ್ವಾಧಿಕಾರಿ ಅಲಾಳದೇವ ದಣ್ಣಾಯಕನ ಅತಿಕಾರ (ಅಧಿಕಾರ)ವನ್ನು ಕುರಿತು ಹೇಳಿವೆ. ಈ ಶಾಸನದ ಭಾಷೆ ಬಹುಮಟ್ಟಿಗೆ ತಮಿಳು ಭಾಷೆಯಿಂದ ಪ್ರಭಾವಿತವಾಗಿರುವುದನ್ನು ಗಮನಿಸಬಹುದು.

ಮೂರನೆಯ ನರಸಿಂಹನ ಪ್ರಸಿದ್ಧನಾದ ಸೇನಾನಿ ಪೆರುಮಾಳದಣ್ಣಾಯಕ. ಈತನ ಉಲ್ಲೇಖ ಕ್ರಿ.ಶ. ೧೨೮೫ನೆಯ ವರ್ಷದ ನಂ.ಗೂ. ೨೧೭ನೆಯ ಶಾಸನದಲ್ಲಿದೆ. ಪ್ರೊ. ಕೊಯೆಲ್ಹೋರವರು ಹೆಗ್ಗಡೆ ಕಲ್ಲಯ್ಯ (ಗು.ಪೇ. ೪೭) ಮತ್ತು ಮಹಾಪ್ರಧಾನ, ಸರ್ವಾಧಿಕಾರಿ ಮಲ್ಲಿಕಾರ್ಜುನ (ಗು.ಪೇ. ೬೪) ಇಬ್ಬರನ್ನೂ ಮೂರನೆಯ ನರಸಿಂಹನ ಮಂತ್ರಿಗಳೆಂದು ಭಾವಿಸಿದ್ದಾರೆ.[1] ಈ ಎರಡೂ ಶಾಸನಗಳಲ್ಲಿ ಸಂವತ್ಸರಗಳ ಹೆಸರನ್ನು ಮಾತ್ರ ಸೂಚಿಸಿದ್ದು ಈ ಸಂವತ್ಸರಗಳು ಮೊದಲನೆಯ ನರಸಿಂಹ ಮತ್ತು ಮೂರನೆಯ ನರಸಿಂಹ ಇವರಿಬ್ಬರ ಆಳ್ವಿಕೆಯ ಕಾಲದಲ್ಲಿಯೂ ಬಂದಿರುವ ಕಾರಣ ಈ ಶಾಸನಗಳು ಮೂರನೆಯ ನರಸಿಂಹನ ಕಾಲದ್ದೆಂದು ಭಾವಿಸಲಾಗಿದೆ. ಆದರೆ ಶಾಸನಗಳ ಲಿಪಿ ೧೪ನೆಯ ಶತಮಾನಕ್ಕಿಂತಲೂ ೧೨ನೆಯ ಶತಮಾನಕ್ಕೆ ಸೇರಿದುವೆಂದೇ ಹೇಳಬಹುದು. ಅಲ್ಲದೇ ಗು.ಪೇ. ೬೪ರ ಶಾಸನದಲ್ಲಿ ಅರಸನನ್ನು ವಿಷ್ಣುವರ್ಧನ ಪೋಸಳ ಶ್ರೀವೀರನಾರಸಿಂಹದೇವನೆಂದು ಕರೆಯಲಾಗಿರುವದರಿಂದ ಆತನು ವಿಷ್ಣುವರ್ಧನನ ಮಗನೆಂದು ಅದು ತೋರಿಸುತ್ತದೆ. ಈ ಸಂದರ್ಭದಲ್ಲಿ ಕ್ರಿ.ಶ. ೧೧೪೮ನೆಯ ವರ್ಷದ ನಂ.ಗೂ. ೩೨೨ನೆಯ ಶಾಸನ ಹಾಗೂ ತಾರಣ ಸಂವತ್ಸರದ ನಂ.ಗೂ. ೩೨೭ನೆಯ ಶಾಸನಗಳಲ್ಲಿ ಮೊದಲನೆಯ ನರಸಿಂಹನನ್ನು ವಿಷ್ಣುವರ್ಧನನಾರಸಿಂಹ ಪೆರುಮಾಳದೇವನೆಂದು ಹೆಸರಿಸಿರುವುದನ್ನು ಉದಹರಿಸಬಹುದು. ಎಂತಲೇ ಗು.ಪೇ. ೪೭ ಮತ್ತು ೬೪ನೆಯ ಶಾಸನಗಳನ್ನು ಮೊದಲನೆಯ ನರಸಿಂಹನ ಕಾಲಕ್ಕೆ ಸೇರಿಸಲಾಗಿದೆ.

ಗು. ಪೇ. ೩೪ರ ಆಲತ್ತೂರಿನ ಶಾಸನವು ಮೂರನೆಯ ಬಲ್ಲಾಳನಿಗೆ ಸೇರಿದುದಾಗಿದೆ. ಅದರ ಕಾಲ ಶಕ ೧೨೦೫ನೆಯ ವಿಜಯ ಸಂವತ್ಸರದ ಫಾಲ್ಗುಣ ಶುದ್ಧ ೧೦ ಶುಕ್ರವಾರ. ಈ ವಿವರಗಳು ಸರಿಯಿಲ್ಲ. ಶಕವರ್ಷ ಹಾಗೂ ಸಂವತ್ಸರಗಳಲ್ಲಿ ಹೊಂದಾಣಿಕೆಯಿಲ್ಲ. ಶಕವರ್ಷವು ಕ್ರಿ. ಶ. ೧೨೮೩–೮೪ಕ್ಕೆ ಸರಿಹೊಂದುತ್ತಿದ್ದು ಆಗ ಮೂರನೆಯ ನರಸಿಂಹನೇ ಇನ್ನೂ ರಾಜ್ಯಭಾರ ಮಾಡುತ್ತಿದ್ದ. ಶಾಸನದ ೩–೪ನೆಯ ಸಾಲುಗಳಲ್ಲಿ "ಶ್ರೀಮತು ಪ್ರತಾಪಚಕ್ರವರ್ತಿಯು ಶ್ರೀ ವೀರಬಲ್ಲಾಳದೇವರಸರು" ಎಂದಿರುವುದರಿಂದ ಪ್ರತಾಪಚಕ್ರವರ್ತಿ ಎಂದರೆ ಮೂರನೆಯ ನರಸಿಂಹ ಹಾಗೂ ಬಲ್ಲಾಳ (ಮೂರನೆಯ ಬಲ್ಲಾಳ) ಇಬ್ಬರೂ ಒಟ್ಟಿಗೆ ಆ ವರ್ಷದಲ್ಲಿ ಆಳುತ್ತಿದ್ದರೆಂದು ಅರ್ಥೈಸಬಹುದು. ಹಾಗಿದ್ದಲ್ಲಿ ಬಲ್ಲಾಳನು ನರಸಿಂಹನೊಡಗೂಡಿ ರಾಜ್ಯಭಾರ ಮಾಡುತ್ತಿದ್ದನೆಂದು ಹೇಳಬೇಕಾಗುತ್ತದೆ. ಒಂದು ವೇಳೆ ವಿಜಯ ಸಂವತ್ಸರವನ್ನೇ ಗಣನೆಗೆ ತೆಗೆದುಕೊಳ್ಳುವುದಾದರೆ ಅದಕ್ಕೆ ಸಮನಾದ ಶಕವರ್ಷ ೧೨೧೫ ಆಗುತ್ತಿದ್ದು ಅದು ಕ್ರಿ. ಶ. ೧೨೯೩–೯೪ಕ್ಕೆ ಸರಿಹೋಗುತ್ತದೆ. ಆದರೂ ಶಾಸನದಲ್ಲಿ ಕೊಟ್ಟಿರುವ ಇತರ ವಿವರಗಳು ಪರಸ್ಪರ ಹೊಂದುವುದಿಲ್ಲ. ಉಕ್ತ ತಿಥಿಯು ಕ್ರಿ. ಶ. ೧೨೯೪ ಫೆಬ್ರುವರಿ ೭ ಭಾನುವಾರದಂದು ಬಂದಿತ್ತು. ಆದರೆ ಈ ವೇಳೆಗೆ ಮೂರನೆಯ ಬಲ್ಲಾಳನು ಆಳುತ್ತಿದ್ದನು.

ಮಹಾಪ್ರಧಾನ ಪೆರುಮಾಳದಣ್ಣಾಯಕನು ಆಳುತ್ತಿದ್ದನೆಂದು ಶಾಸನದಲ್ಲಿ ಹೇಳಿದ್ದರೂ, ಆ ಪ್ರದೇಶದ ಹೆಸರು ದೊರೆತಿಲ್ಲ. ಆತ ಸಿತಗರಗಂಡ, ನೀಲಗಿರಿ (ಸಾಧಾರ?) ಮುಂತಾದ ಬಿರುದುಗಳನ್ನು ಹೊಂದಿದ್ದ. ಆತನೂ ಕ್ರಿ. ಶ. ೧೨೯೨ನೆಯ ಫೆಬ್ರುವರಿ ೨೦ರ ನಂ. ಗೂ. ೩೨೯ನೆಯ ಶಾಸನದಲ್ಲಿ ವರ್ಣಿತನಾಗಿರುವ, ಇನ್ನು ಮೂವರು ಮಂತ್ರಿಗಳೊಡನೆ ಉಲ್ಲೇಖಿತನಾದ . . . . ಮೆಯ ದಣ್ಣಾಯಕನ ಮಗನಾದ ಪೆರುಮಾಳದೇವ ದಣ್ಣಾಯಕನೂ ಅನನ್ಯರೆಂದು ಭಾವಿಸಬಹುದು. ಅದೇ ವರ್ಷದ ಜೂನ್ ೮ರ (ನಂ. ಗೂ. ೩೪೦) ಶಾಸನದಲ್ಲಿ ಈ ಪೆರುಮಾಳುದೇವಣ್ಣಾಯಕನ ಪ್ರಸ್ತಾಪವಿದೆ. ನಂ. ಗೂ. ೩೨೯ನೆಯ ಶಾಸನದಲ್ಲಿ ಉಕ್ತವಾಗಿರುವ ಭೀಮಯ ದಣ್ಣಾಯಕ ಮತ್ತು ಮಂಚಣದಣ್ಣಾಯಕರ ಪ್ರಸ್ತಾಪವೂ ಇದರಲ್ಲಿ ಬಂದಿದೆ. ಶಾಸನದಲ್ಲಿ ಭೀಮಯನನ್ನು ಗೋಪಿಯ ದಣ್ಣಾಯಕನ ಮಗನೆಂದೂ, ಮಂಚಯನನ್ನು ಅಲ್ಲಾಳದೇವ ದಣ್ಣಾಯಕನ ಮಗನೆಂದೂ ಹೇಳಲಾಗಿದೆ. ಕ್ರಿ. ಶ. ೧೩೧೦ರಲ್ಲಿ ಪೆರುಮಾಳನ ಮಗನಾದ ಮಾಧವ ದಣ್ಣಾಯಕನು ಹದಿನಾಲ್ಕುನಾಡನ್ನು ತನ್ನ ರಾಜಧಾನಿಯಾದ ತೆರಕಣಾಂಬಿಯಿಂದ ಆಳುತ್ತಿದ್ದನೆಂಬುದು ಗು. ಪೇ. ೧೫೨ನೆಯ. ಶಾಸನದಿಂದ ವ್ಯಕ್ತವಾಗಿದೆ. ಈ ಮಾಧವ ದಣ್ಣಾಯಕನು ಕ್ರಿ. ಶ. ೧೩೧೪ರ ನಂ. ಗೂ. ೩೪೭, ೧೩೧೫ರ ಗು.ಪೇ. ೨೨೩ ಮತ್ತು ೧೩೬೮ರ ಗು. ಪೇ. ೧೭೪ನೆಯ ಶಾಸನಗಳಲ್ಲೂ ಉಕ್ತನಾಗಿದ್ದಾನೆ. ಈ ಮಾಧವನಿಗೆ ಭರತಜೀಯದಣಾ ಯಕ

---

1 *op.cit.* p. 209, note 4.

ನೆಂಬ ಮಗನಿದ್ದು ಆತ ಕ್ರಿ. ಶ. ೧೩೨೦ರಲ್ಲಿ ಅದೇ ಪ್ರದೇಶವನ್ನು ಆಳುತ್ತಿದ್ದ (ಗು. ಪೇ. ೪೦). ಈ ಪ್ರಾಂತಗಳನ್ನು ಆತನ ಸಹೋದರನಾದ ಕೇತಯ್ಯನು ಕ್ರಿ. ಶ. ೧೩೨೭ (ಗು. ಪೇ. ೧೮೯) ಮತ್ತು ಕ್ರಿ.ಶ. ೧೩೩೨ರಲ್ಲಿ ಆಳುತ್ತಿದ್ದುದು ಕಂಡುಬಂದಿದೆ (ನಂ. ಗೂ. ೧೩೪).

ವಿಜಯನಗರ

ಕ್ರಿ. ಶ. ೧೩೬೪ನೆಯ ವರ್ಷದ ನಂ. ಗೂ. ೨೫೪ನೆಯ ತಗಡೂರಿನ ಶಾಸನವು ವೀರಬುಕ್ಕಣ್ಣವೊಡೆಯ (ವೊದಲನೆಯ ಬುಕ್ಕ)ನ ಮಗನಾದ ಚಿಕ್ಕಕಂಪಣ್ಣವೊಡೆಯನಿಗೆ ಸಂಬಂಧಿಸಿದೆ. ಈ ಆರಸನು ಈಗಿನ ತಮಿಳುನಾಡಿನ ಚಂಗಲ್ಪೇಟೆ ಮತ್ತು ಉತ್ತರ ಆರ್ಕಾಟ್ ಹಾಗೂ ದಕ್ಷಿಣ ಕರ್ನಾಟಕದ ಪೂರ್ವಭಾಗದ ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳನ್ನೊಳಗೊಂಡ ಪ್ರದೇಶಗಳನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ.[1] ಮಧುರೆಯಲ್ಲಿ ಮಹಮದೀಯರ ಆಳ್ವಿಕೆಯನ್ನು ಕೊನೆಗಾಣಿಸಿದವನು ಈತನೇ. ಈತ ಕ್ರಿ.ಶ ೧೩೬೪-೯೯ರ ತುಂಡು ಶಾಸನದಲ್ಲಿ (ಗು. ಪೇ. ೧೩೨) ಕುಮಾರನಂಜಣ್ಣನೊಡನೆಯೂ ಹಾಗೂ ಕ್ರಿ.ಶ. ೧೩೬೨ನೆಯ ವರ್ಷದ ಗು. ಪೇ. ೧೨ನೆಯ ಶಾಸನದಲ್ಲೂ ಕಾಣಿಸಿ ಕೊಂಡಿದ್ದಾನೆ. ಕ್ರಿ. ಶ. ೧೩೬೪ ಡಿಸೆಂಬರ್ ೨೪ರ ಶಾಸನ (ಗು. ಪೇ. ೧೮) ದಿಂದ ಆ ವೇಳೆಗೆ ಕಂಪಣ್ಣನು ಮೃತಿಹೊಂದಿದ್ದ ನೆಂದು ತಿಳಿದುಬರುತ್ತದೆ. ಆ ಶಾಸನವು ಆತನ ಮಗನಾದ ನಂಜಣ್ಣನು ಮರಣ ಹೊಂದಿದ್ದ ತನ್ನ ಹಿರಿಯನಿಗೆ ಪುಣ್ಯಲಭಿಸ ಲೆಂದು ಹಳ್ಳಿಯೊಂದನ್ನು ದಾನವಾಗಿ ಕೊಟ್ಟ ವಿಷಯವನ್ನು ಪ್ರಸ್ತುತಪಡಿಸುತ್ತದೆ. ಕ್ರಿ. ಶ. ೧೩೬೪ರ "ಸೆಪ್ಟೆಂಬರ್ ೧ ಮತ್ತು ಡಿಸೆಂಬರ್ ೧೧ರ ನಡುವಣ ಒಂದುದಿನದಲ್ಲಿ" ಕಂಪಣ್ಣನು ಮೃತಿ ಹೊಂದಿರಬಹುದೆಂದು ಸಿವೆಲ್‌ರವರು ಊಹಿಸಿದ್ದಾರೆ.[2] ನಂಜಣ್ಣನು ಕ್ರಿ. ಶ. ೧೩೪೦ರಲ್ಲಿಯೂ ಸಹ ಆ ಪ್ರದೇಶದಲ್ಲಿ ರಾಜಪ್ರತಿನಿಧಿಯಾಗಿ ಆಳುತ್ತಿದ್ದನೆಂದು ತಿಳಿದುಬಂದಿದೆ.

ಹೆ. ಕೋ. ೧೪೯ನೆಯ ತಾಮ್ರಶಾಸನ ಎರಡನೆಯ ಹರಿಹರನ ಆಳ್ವಿಕೆಯ ಕಾಲಕ್ಕೆ ಸೇರಿದುದಾಗಿದೆ. ಶಕವರ್ಷ ೧೨೦೦ನೆಯ ಸಿದ್ಧಾರ್ಥಿ ಸಂವತ್ಸರದ ಕಾರ್ತಿಕ ಬಹುಳ ೩೦ ಎಂಬ ತೇದಿಯ ವಿವರಗಳನ್ನೊಳಗೊಂಡ ಈ ಶಾಸನದಲ್ಲಿ ಲಿಪಿ ಸ್ಖಾಲಿತ್ಯಗಳಿವೆ. ಉಕ್ತವಾದ ಈ ಶಾಸನದ ಕಾಲ ಶುದ್ಧ ತಪ್ಪು ಎಂಬುದು ಮೇಲ್ನೋಟಕ್ಕೇ ಸ್ಪಷ್ಟವಾಗುತ್ತದೆ. ಸಿದ್ಧಾರ್ಥಿ ಸಂವತ್ಸರವು ಎರಡನೆಯ ಹರಿಹರನ ಆಳ್ವಿಕೆಯ ಕಾಲದಲ್ಲಿ ಬಂದಿದ್ದು. ಅದಕ್ಕೆ ಸಮನಾದ ಶಕವರ್ಷ ೧೩೦೧ ಆಗುತ್ತದೆ. ಈ ಶಾಸನದ ನೈಜತೆಯ ಬಗೆಗೆ ಸಂದೇಹವುಂಟಾಗುತ್ತದೆ.

ಎರಡನೆಯ ದೇವರಾಯನ ಕ್ರಿ. ಶ. ೧೪೧೫ರ ಶಾಸನವು (ನಂ. ಗೂ ೨೪೪) ಉಮ್ಮತ್ತೂರಿನ ಠಾಣೆಯರಸ (ಅಧಿಕಾರಿ) ನಾದ ಚಿಕ್ಕದೇವಪ್ಪನನ್ನು ಹೆಸರಿಸುತ್ತದೆ. ತ್ರಿಯಂಬಕಪುರದ ತಾಮ್ರಶಾಸನವು (ಗು. ಪೇ. ೧೪೯) ಎರಡನೆಯ ಬುಕ್ಕನ ಮಗನಾದ ಹರಿಹರನು ಮಾಡಿದ ದಾನವನ್ನು ತಿಳಿಸುತ್ತದೆ. ಎರಡನೆಯ ಬುಕ್ಕನಿಗೆ ಹರಿಹರನೆಂಬ ಮಗನಿರಲಿಲ್ಲ. ಆದರೆ ವೊದಲನೆಯ ದೇವರಾಯನಿಗೆ ಆ ಹೆಸರಿನ ಮಗನಿದ್ದ. ಶಾಸನವು ದೇವರಾಯನನ್ನು ಹೆಸರಿಸಿಯೇ ಇಲ್ಲ. ಅಲ್ಲದೆ ಅದರಲ್ಲಿ ಉಕ್ತವಾಗಿರುವ ಶಕವರ್ಷ ೧೪೩೨ ಸಹ ನಿಶ್ಚಿತವಾಗಿ ತಪ್ಪು. ೧೩೪೨ಕ್ಕೆ ಬದಲಾಗಿ ೧೪೩೨ ಎಂದು ತಪ್ಪಾಗಿ ಖಂಡರಿಸಿರಬಹುದೆಂದು ಊಹಿಸಿದರೂ ತೇದಿಯ ಉಳಿದ ವಿವರಗಳು ಹೊಂದಿಕೆಯಾಗುವುದಿಲ್ಲ. ಶಾಸನದಲ್ಲಿ ಉಕ್ತವಾದ ಹೇವಿಳಂಬಿ ಸಂವತ್ಸರವನ್ನು ಸರಿಯಾದುದೆಂದು ಭಾವಿಸಿ, ಅದನ್ನು ಕ್ರಿ. ಶ. ೧೪೧೭ಕ್ಕೆ ಸರಿಹೊಂದಿಸಿದ್ದೇವೆ. ಆದರೆ ಕಾಲವನ್ನು ಸಂಖ್ಯೆಗಳಲ್ಲಿ ಸೂಚಿಸದೆ ಪದಗಳಲ್ಲಿ ಸೂಚಿಸಲಾಗಿದೆ. ಅದುವರೆಗಿನ ಶಾಸನಭಾಗವು ಸಂಸ್ಕೃತದಲ್ಲಿದ್ದು ಅಲ್ಲಿಂದ ಮುಂದಕ್ಕೆ ಅದು ಕನ್ನಡದಲ್ಲಿ ಮುಂದುವರಿದಿದೆ. ಭಾಷಾಪ್ರಯೋಗದಲ್ಲೂ ತಪ್ಪಿದೆ. ಎರಡನೆಯ ಬುಕ್ಕನ ಸೋದರಳಿಯನಾದ ಮೂರನೆಯ ಹರಿಹರನು ತನ್ನನ್ನು ಬುಕ್ಕನಮಗನೆಂದು ಕರೆದುಕೊಂಡಿರ ಬಹುದು. ಈ ಪದ್ಧತಿ ಅಪರೂಪವಾದುದೇನಲ್ಲ. ಈಗ ಊಹಿಸುವ ಕಾಲದಲ್ಲಿ (ಕ್ರಿ. ಶ. ೧೪೧೭) ವೊದಲನೆಯ ದೇವರಾಯ ಆಳುತ್ತಿದ್ದ. ಹರಿಹರನು ಶಾಸನದಲ್ಲಿ ತನ್ನ ತಂದೆಯನ್ನು ಹೆಸರಿಸಲಿಲ್ಲವೇಕೆ ? ಇದಕ್ಕೆ ಸಮಾಧಾನ ಹೇಳುವುದು ಕಷ್ಟ. ಈ ಎಲ್ಲ ಕಾರಣಗಳಿಂದಾಗಿ ಈ ಶಾಸನದ ಸತ್ಯಾಸತ್ಯತೆಯನ್ನೂ ಸಂದೇಹಿಸಬೇಕಾಗುತ್ತದೆ.

---

[1] R. Sewell: *Historial Inscriptions of Southern India*, p.195 ff.

[2] *Ibid.*, p. 199.

ಗು.ಪೇ. ೭೮ನೆಯ ಶಾಸನದ ಕಾಲ ಶಕವರ್ಷ ೧೩೪೪ಕ್ಕೆ ಸಮನಾದ ಕ್ರಿ.ಶ. ೧೪೨೨ ಅಗಸ್ಟ್ ೨. ತನ್ನ ತಂದೆಯಾದ ದೇವರಾಯ ಮಹಾರಾಯನಿಗೆ ದೇವಲೋಕ ಲಭಿಸಲಿ ಎಂದು ಪ್ರಾರ್ಥಿಸಿ ಆ ಸಲುವಾಗಿ ಮಹಾಮಂಡಲೇಶ್ವರನಾದ ಮೂರನೆಯ ಹರಿಹರನು ನಂಜುಂಡೇಶ್ವರ ದೇವರಿಗೆ ಮತ್ತು ೧೧ ಜನ ಬ್ರಾಹ್ಮಣರಿಗೆ ಕೊಟ್ಟ ದಾನದ ವಿಷಯವನ್ನು ಇದು ತಿಳಿಸುತ್ತದೆ. ಇದರಿಂದ ಈ ವೇಳೆಗೆ ದೇವರಾಯನು ಮೃತಿ ಹೊಂದಿದ್ದನೆಂದು ಊಹಿಸಬಹುದಾಗಿದೆ.

ನಂಜನಗೂಡಿನ ರಾಘವೇಂದ್ರಸ್ವಾಮಿ ಮಠದಲ್ಲಿರುವ ತಾಮ್ರಶಾಸನವು (ನಂ.ಗೂ. ೧೧೦) ಕೃಷ್ಣದೇವರಾಯನು ಉದಯಗಿರಿಯನ್ನು ಜಯಿಸಿದ ನಂತರ ಆ ಜಯೋತ್ಸಾಹದ ಸ್ಮರಣಾರ್ಥವಾಗಿ ಆ ಮಠದ ಅರ್ಚಕರಿಗೆ ಕೊಟ್ಟ ದಾನದ ದಾಖಲೆಯಾಗಿದೆ. ಶಾಸನದ ಕಾಲ ಶಕವರ್ಷ ೧೪೧೨. ಈ ತೇದಿಯನ್ನು ಸಂಖ್ಯಾಸಂಕೇತ ಪದಗಳಾದ ನೇತ್ರ, ಇಂದು, ವೇದ, ಭೂ ಎಂಬ ಪದಗಳಿಂದ ಸೂಚಿಸಲಾಗಿದ್ದು, ಅದು ಕ್ರಿ.ಶ. ೧೪೯೦ಕ್ಕೆ ಸರಿಹೊಂದುತ್ತದೆ. ಆದರೆ ಈ ವೇಳೆಗೆ ಇನ್ನೂ ಕೃಷ್ಣದೇವರಾಯನು ಪಟ್ಟಕ್ಕೆ ಬಂದಿರಲಿಲ್ಲ. ಕೃಷ್ಣದೇವರಾಯನು ಸು. ಕ್ರಿ.ಶ. ೧೫೧೩ರಲ್ಲಿ ಉದಯಗಿರಿಯನ್ನು ಗೆದ್ದನೆಂಬುದು ನಮಗೆ ತಿಳಿದಿದೆ. ಒಂದು ವೇಳೆ ಶಾಸನದಲ್ಲಿ ಕಾಲವನ್ನು ಸೂಚಿಸಲು ಸಂಖ್ಯೆಗಳನ್ನು (ಅಂಕಿಗಳಿಂದ) ಬಳಸಿದ್ದಲ್ಲಿ, ಆ ಸಂಖ್ಯೆಗಳನ್ನು ತಪ್ಪಾಗಿ ಕಣ್ಡರಿಸಲಾಗಿದೆ ಎಂದು ಭಾವಿಸಬಹುದಿತ್ತು, ಆದರೆ ಅದು ಸಂಖ್ಯಾಸಂಕೇತಪದ (chronogram) ಗಳಿಂದ ಸೂಚಿತವಾಗಿದ್ದು ಅದನ್ನು ಶಕ ೧೪೧೨ ಎಂದೇ ಅರ್ಥೈಸಬೇಕಾಗಿದೆ. ಆದ್ದರಿಂದ ಈ ಶಾಸನದ ನೈಜತೆಯು ಸಹ ಅನುಮಾನಾಸ್ಪದವಾಗಿದೆ. ದುರದೃಷ್ಟವಶಾತ್ ನಾವು ಆ ಶಾಸನದ ಮೂಲಪ್ರತಿಯನ್ನು ಪರೀಕ್ಷಿಸಲು ಮಾಡಿದ ಯತ್ನಗಳು ಫಲಿಸಲಿಲ್ಲ. ಆದುದರಿಂದ ಅದರ ಲಿಪಿಯ ಬಗ್ಗೆಯೂ ಏನನ್ನೂ ಹೇಳಲು ಸಾಧ್ಯವಿಲ್ಲ.

ಹೆ.ಕೋ. ೧೩೩ ಮತ್ತು ೧೪೩ನೆಯ ಉಯ್ಯಂಬಳ್ಳಿಯ ಮತ್ತು ಮಗ್ಗೆಯ ಎರಡು ಶಾಸನಗಳೂ ಸಾಳುವ ನರಸಿಂಹನ ಅಧಿಕಾರಿಯಾಗಿದ್ದ ಪ್ರಧಾನ ತಿಪ್ಪರಸಯ್ಯನು ಕ್ರಮವಾಗಿ ಕಿತ್ತೂರಿನ ರಾಮಯ್ಯದೇವರಿಗೂ ಮಗ್ಗೆಯ ಬಾಣೇಶ್ವರ ದೇವರಿಗೂ ಬಿಟ್ಟ ದತ್ತಿಯನ್ನು ಕುರಿತಾಗಿವೆ. ಒಂದರಲ್ಲಿ (ಹೆ. ಕೋ. ೧೩೩) ಕಠಾರಿ ಸಾಳುವ ನರಸಿಂಗರಾಜ ವರ್ಮನೆಂದೂ ಇನ್ನೊಂದರಲ್ಲಿ (ಹೆ.ಕೋ. ೧೪೩) ನರಸಿಂಗಾರಾಯನೆಂದೂ ಅರಸನನ್ನು ಹೆಸರಿಸಲಾಗಿದೆ ಈ ಎರಡೂ ಶಾಸನಗಳು ನಾಲ್ಕು ದಿನಗಳ ಅಂತರದಲ್ಲಿ, ಕ್ರಿ.ಶ. ೧೪೯೭ರಲ್ಲಿ, ಅಸ್ತಿತ್ವಕ್ಕೆ ಬಂದವು. ಹೆ.ಕೋ. ೧೩೩ನೆಯ ಶಾಸನದಲ್ಲಿ ರಾಜನನ್ನು ನರಸಿಂಗರಾಜವರ್ಮನೆಂದು ಹೆಸರಿಸಿರುವುದು ಸ್ವಾರಸ್ಯದ ಸಂಗತಿಯಾಗಿದೆ.

ಹೆ.ಕೋ. ೮೯ ಸಾಳುವ ಇಮ್ಮಡಿ ನರಸಿಂಹನ ತಾಮ್ರಶಾಸನ ಇದರಲ್ಲಿ ಕಾಲವನ್ನು 'ಭಾಗ್ಯ ಭಾಗ್ಯೇ' ಎಂಬ ಸಂಕೇತದಿಂದ ಸೂಚಿಸಿದೆ. ಕಟಪಯ ಪದ್ಧತಿಯಂತೆ ಇದು ಶಕಕಾಲ ೧೪೧೪ ಎಂದು ಹೇಳಬಹುದು. ಇದರಲ್ಲಿ ಅರಸನ ವಂಶಾವಳಿಯನ್ನು ಕೊಟ್ಟಿದೆ. ನರಸಿಂಹನು ಅಹೋಬಲದ ಅಧಿದೇವತೆಯಾದ ನರಸಿಂಹನ ವರಪ್ರಸಾದದಿಂದ ಜನಿಸಿದನೆಂದೂ, ಎಂತಲೇ ಆ ದೇವರ ಹೆಸರನ್ನು ಆತನಿಗಿಡಲಾಯಿತೆಂದೂ ಹೇಳಿದೆ. ಅರಸನ ಆಣತಿಯಂತೆ, ಅರಸನು ನೀಡಿದ ದ್ರವ್ಯದಿಂದ, ನಾಗನಾಯಕನು ಭಗ್ನವಾಗಿದ್ದ ಕೆರೆಗಳನ್ನು ಜೀರ್ಣೋದ್ಧಾರಗೊಳಿಸಿ, ಹೊಸ ಕೆರೆಗಳನ್ನು ನಿರ್ಮಿಸಿ ಆ ಪ್ರದೇಶದಲ್ಲಿ ನಾಲ್ವತ್ತು ಬ್ರಾಹ್ಮಣರ ಒಂದು ಅಗ್ರಹಾರವನ್ನು ನೆಲೆಗೊಳಿಸಬೇಕೆಂದು ಅರಸನನ್ನು ಪ್ರಾರ್ಥಿಸಿದನು. ಅರಸನು ದೇವಸಮುದ್ರ ಪ್ರತಿನಾಮವಾದ ಚಾಕೇನಹಳ್ಳಿಯನ್ನು ಅಗ್ರಹಾರವಾಗಿ ಮಾಡಿದನು. ದತ್ತಿ ಆಚಂದ್ರಾರ್ಕ್ಯತಾರಕವಾಗಿರಲೆಂದು ನಾಗನಾಯಕನು ಅರಸನ ದಾನವನ್ನು ತಾಮ್ರ ಶಾಸನಗಳ ಮೇಲೆ ಬರೆಯಿಸಿಕೊಡಬೇಕೆಂದು ಕೇಳಿಕೊಂಡನೆಂದು ಈ ಶಾಸನದಲ್ಲಿ ಹೇಳಿರುವುದು ಗಮನಾರ್ಹವಾಗಿದೆ. ನಾಗನಾಯಕನನ್ನು ಸಂಗೀತ ವಿದ್ಯಾಸರ್ವಸ್ವನೆಂದೂ, ಸಾಹಿತ್ಯರಸ ಜೀವಿತನೆಂದೂ ಬಣ್ಣಿಸಲಾಗಿದೆ

ನಂ.ಗೂ. ೩೭೭ನೆಯ ಶಾಸನದಲ್ಲಿ ನರಸಣ್ಣನಾಯಕನ ಮನೆಯ ಶಿರಪ್ರಧಾನನೆನಿಸಿದ ತಿಪ್ಪರಸಯ್ಯನು ನೀಡಿದ ದತ್ತಿಯ ವಿಷಯವಿದೆ. ರಾಜಾಧಿರಾಜ, ರಾಜಪರಮೇಶ್ವರ ಮತ್ತು ಕಡಹಾರಿಸಾಳುವನೆಂಬ ಬಿರುದುಗಳನ್ನು ನರಸಣ್ಣ ನಾಯಕನು ಧರಿಸಿದ್ದಾನೆ. ಕ್ರಿ.ಶ. ೧೫೦೨ನೆಯ ವರ್ಷದ ಈ ಶಾಸನಕಾಲದಲ್ಲಿ ಸಾಳುವ ಇಮ್ಮಡಿ ನರಸಿಂಹನು ಆಳುತ್ತಿದ್ದನು. ಮೇಲೆ ಚರ್ಚಿಸಿದ ಹೆ.ಕೋ. ೧೩೩ ಮತ್ತು ೧೪೩ನೆಯ ಶಾಸನಗಳಲ್ಲಿ ಉಕ್ತವಾಗಿರುವ ನರಸಿಂಗರಾಜವರ್ಮ ಮತ್ತು ನರಸಿಂಗರಾಯರನ್ನು ಈ ಇಮ್ಮಡಿ ನರಸಿಂಹನೆಂದು ಗುರುತಿಸಬಹುದು. ಆದರೆ ಪ್ರಸ್ತುತ ಶಾಸನದಿಂದ ಈತನು ಹೆಸರಿಗೆ ಮಾತ್ರ ರಾಜನಾಗಿದ್ದು ಆಡಳಿತ ಸೂತ್ರವನ್ನು ತುಳುವರಾಜನಾದ ನರಸಣ್ಣನಾಯಕನೇ ವಹಿಸಿಕೊಂಡಿದ್ದನೆಂಬುದು ಸ್ಪಷ್ಟವಾಗುತ್ತದೆ. ಈತನು ಕಡಹಾರಿ ಸಾಳುವನೆಂಬ ಬಿರುದನ್ನು ಧರಿಸಿರುವ ವಿಷಯ ಗಮನಾರ್ಹ. ಈ ಮೂರು ಶಾಸನಗಳಲ್ಲಿ ಉಕ್ತನಾಗಿರುವ ತಿಪ್ಪರಸಯ್ಯನು ಒಬ್ಬನೇ ಆಗಿದ್ದಾನೆ.

ಆರವೀಡು ವಂಶದ ಬುಕ್ಕನ ಮಗನೂ, ಪಿನ್ನಮನ ಮೊಮ್ಮಗನೂ ಆದ ರಾಮರಾಯನ ಆಳ್ವಿಕೆಗೆ ಸೇರಿದ ಕ್ರಿ.ಶ. ೧೫೫೩ನೆಯ ವರ್ಷದ ಶಾಸನ (ನಂ.ಗೂ. ೧೧೩)ದಲ್ಲಿ ಆ ಅರಸನ ವಂಶಾವಳಿಯನ್ನು ಕೊಟ್ಟಿದೆ. ಆತನ ರಾಣಿಯಾದ ಲಕ್ಕಾಂಬಿಕೆಗೆ ಜನಿಸಿದ ಶ್ರೀರಂಗನನ್ನು ಈ ಶಾಸನ ಸ್ತುತಿಸಿದೆ. ವಿಜಯನಗರದ ಅರಸರು ಸಾಮಾನ್ಯವಾಗಿ ಧರಿಸುತ್ತಿದ್ದ ಹಲವಾರು ಬಿರುದುಗಳನ್ನು ಈತನು ಧರಿಸಿದ್ದಾನೆ. ಈ ಶಾಸನವನ್ನು ಕಣ್ಡರಿಸಿದಾತ ಮಂಗಣಾಚಾರ್ಯನ ಮಗ ವೀರಣ. ಅರವತ್ತು ವರ್ಷಗಳ ನಂತರ ಆರವೀಡು ಮನೆತನದ ಮೊದಲನೆಯ ಶ್ರೀರಂಗರಾಯನ ಕ್ರಿ.ಶ. ೧೫೭೬ನೆಯ ವರ್ಷದ ಶಾಸನವನ್ನು ಕಣ್ಡರಿಸಿದಾತನೂ ಇವನೇ (ನಂ.ಗೂ. ೧೧೨). ಈ ದೃಷ್ಟಿಯಿಂದ ಪ್ರಸ್ತುತ ಶಾಸನವನ್ನೂ ಕೂಟಶಾಸನ ವೆಂದೇ ಪರಿಗಣಿಸಬೇಕಾಗುತ್ತದೆ. ಈ ತಾಮ್ರಶಾಸನದ ಮೂಲಪ್ರತಿಯೂ ನಮಗೆ ದೊರಕಲಿಲ್ಲ.

ಗು.ಪೇ. ೧೯೯ರ ಭೀಮನಬೀಡಿನ ಕನ್ನಡ ಶಾಸನವು ನಾಗರೀ ಲಿಪಿಯಲ್ಲಿದೆ. ಈ ಶಾಸನದಲ್ಲಿ ಶಕವರ್ಷ ಕೊಟ್ಟಿಲ್ಲ. ಆದರೆ ಬಹುಧಾನ್ಯ ಸಂವತ್ಸರ ಶ್ರಾವಣ ಶು. ೧೨ ಎಂದು ಕಾಲ ನಿರ್ದೇಶನವಿದೆ. ಲಿಪಿಶಾಸ್ತ್ರದ ಆಧಾರದ ಮೇಲೆ ಇದನ್ನು ೧೬ನೆಯ ಶತಮಾನದ್ದೆಂದು ಹೇಳಬಹುದು. ಕಾಲವನ್ನು ಸರಿಯಾಗಿ ಗುರುತಿಸಲು ಅವಶ್ಯಕವಾದ ವಿವರಗಳು ಇದರಲ್ಲಿ ಇಲ್ಲ. ಆದರೆ ಉಕ್ತವಾಗಿರುವ ಸಂವತ್ಸರವು ಶಕವರ್ಷ ೧೪೪೦ಕ್ಕೆ ಸಮನಾದ ಕ್ರಿ.ಶ. ೧೫೧೮ರಲ್ಲಿ ಬರುತ್ತದೆ. ಮಹಾ ಮಂಡಲೇಶ್ವರ ಕೃಷ್ಣರಾಯನಿಗೆ ಪುತ್ರಸಂತಾನವಾದ ಸಂದರ್ಭದಲ್ಲಿ ತಾತನ ಅಪ್ಪಣೆಯ ಮೇರೆಗೆ ಗೋವಿಂದರಾಜನು ಶ್ರೀನಿವಾಸಪಂಡಿತ ಮತ್ತು ತಿರುಮಲಪಂಡಿತರಿಗೆ ಬಹುಶಃ ಗ್ರಾಮವೊಂದನ್ನು ದಾನವಾಗಿ ಕೊಟ್ಟ ವಿಷಯವನ್ನು ಇದು ತಿಳಿಸುತ್ತದೆ. ಅಷ್ಟು ಸಮಂಜಸವೆನಿಸದಿದ್ದರೂ, ಶಾಸನದಲ್ಲಿ ಉಕ್ತವಾಗಿರುವ ಕೃಷ್ಣರಾಯನನ್ನು ಕೃಷ್ಣದೇವರಾಯನೆಂದು ಗುರುತಿಸಬಹುದೇನೋ! ಕೃಷ್ಣದೇವರಾಯನು ತನ್ನ ಮಗನಾದ ತಿರುಮಲನಿಗೆ ಕ್ರಿ.ಶ. ೧೫೨೪ರಲ್ಲಿ ಪಟ್ಟಾಭಿಷೇಕವನ್ನು ನೆರವೇರಿಸಿದನೆಂಬುದು, ಆಗ ತಿರುಮಲನಿಗೆ ಕೇವಲ ೬ ವರ್ಷಗಳಾಗಿತ್ತೆಂಬುದು ನಮಗೆ ತಿಳಿದಿದೆ. ಎಂದಮೇಲೆ ತಿರುಮಲನು ಕ್ರಿ.ಶ. ೧೫೧೮ರಲ್ಲಿ ಹುಟ್ಟಿದನೆಂದು ಊಹಿಸಬಹುದು. ಪ್ರಸ್ತುತ ಶಾಸನದಲ್ಲಿ ಉಕ್ತವಾಗಿರುವ ಪುತ್ರೋತ್ಸವದ ವಿಷಯವು ಇದೇ ತಿರುಮಲನ ಜನನವನ್ನು ಸೂಚಿಸುತ್ತದೆಂದು ಊಹಿಸಲೂ ಸಾಧ್ಯವಾದೀತು. ಬಹುಶಃ ಈ ಶಾಸನದ ಕಾಲಕ್ಕೆ ತಿರುಮಲ ಜನಿಸಿರಬೇಕು. ಈ ಶಾಸನದಲ್ಲಿ ಪ್ರಸ್ತಾಪವಾಗಿರುವ ಗೋವಿಂದರಾಜನು ಕೃಷ್ಣದೇವರಾಯನ ಅಧೀನದಲ್ಲಿ ಅಧಿಕಾರಿಯಾಗಿದ್ದ ಸಾಳುವ ಗೋವಿಂದರಾಜನೆಂದು ತೋರುತ್ತದೆ. ಕ್ರಿ.ಶ. ೧೫೨೧ರ ಗು.ಪೇ. ೧೩೪ನೆಯ ಮತ್ತೊಂದು ಶಾಸನದಲ್ಲೂ ಈ ಗೋವಿಂದರಾಜನ ಪ್ರಸ್ತಾಪ ಬಂದಿದೆ.

ಈ ಸಂಪುಟದಲ್ಲಿ ಇದೇ ತಿರುಮಲರಾಯನ ಮರಣವನ್ನು ಸೂಚಿಸುವ ಶಾಸನ ಸಹ ಇದ್ದಂತಿದೆ. ಬಹಳಮಟ್ಟಿಗೆ ಭಗ್ನವಾದ ಈ ಶಾಸನ (ನಂ.ಗೂ. ೯೩)ದಲ್ಲಿ ಉಕ್ತವಾದ ಕಾಲ ಶಕ ೧೪೫೧ (ಕ್ರಿ.ಶ. ೧೫೨೯, ಫೆಬ್ರವರಿ ೭). ಇದರಲ್ಲಿ ತಿರುಮಲರಾಯನಿಗೆ ಪುಣ್ಯ ಲಭಿಸಲೆಂದು ದಾನವೊಂದನ್ನು ನೀಡಲಾಯಿತೆಂದಿದೆ. ತಿರುಮಲರಾಯನು ಈ ವೇಳೆಗೆ ಮರಣ ಹೊಂದಿದ್ದು ಅವನಿಗೆ ಸದ್ಗತಿ ದೊರಕಲೆಂದು ಈ ದಾನವನ್ನು ನೀಡಿದಂತೆ ತೋರುತ್ತದೆ. ಆಳುತ್ತಿದ್ದ ಅರಸನ ಹೆಸರಾಗಲೀ, ಇತರ ವಿವರಗಳಾಗಲೀ ಲಭ್ಯವಿಲ್ಲ. ಆದರೆ ಶಾಸನ ಕೃಷ್ಣದೇವರಾಯನ ಕಾಲದ್ದು. ತಿರುಮಲನು ತಂದೆಯು ಜೀವಿಸಿದ್ದಾಗಲೇ ಸತ್ತನೆಂಬುದೂ, ಈ ಮನೋವ್ಯಥೆಯಲ್ಲಿಯೇ ಅರಸನೂ ಸತ್ತನೆಂಬುದೂ ತಿಳಿದಿದೆ. ಶಾಸನೋಕ್ತ ತಿರುಮಲನು ಈ ಯುವ ರಾಜನೇ ಆಗಿದ್ದಲ್ಲಿ, ಶಾಸನ ಕಾಲಕ್ಕೂ ಮೊದಲು ಆತನು ನಿಧನ ಹೊಂದಿದನೆಂದು ಹೇಳಬಹುದು. ಆದರೆ ನ್ಯೂನಿಜನು ಪಟ್ಟಾಭಿಷೇಕವಾದ ಎಂಟು ತಿಂಗಳುಗಳಲ್ಲಿಯೇ ತಿರುಮಲನು ರೋಗಪೀಡಿತನಾಗಿ ಮರಣಹೊಂದಿದನೆಂದು ಹೇಳಿರುವುದನ್ನು ಇಲ್ಲಿ ನೆನಪಿನಲ್ಲಿಡಬೇಕು. ಅದು ನಿಜವಾದಲ್ಲಿ ಆತನು ೧೫೨೪-೨೬ರಲ್ಲಿ ನಿಧನನಾಗಿರಬೇಕು. ಈ ಹೇಳಿಕೆ ಸಹ ಎಷ್ಟರ ಮಟ್ಟಿಗೆ ನಿಜವೆಂಬುದೂ ಪರಿಶೀಲನಾರ್ಹವೇ.

ಶಕವರ್ಷ ೧೪೬೪ಕ್ಕೆ ಸಮನಾದ ಕ್ರಿ. ಶ. ೧೫೪೩ನೆಯ ಫೆಬ್ರವರಿ ೩ರ ನಂ. ಗೂ. ೧೧೫ನೆಯ ಶಾಸನವು ಸಲಕ ರಾಜನ ಮಗನಾದ ತಿರುಮಲರಾಯ ಮಹಾರಾಯನು ಎಮ್ಮೆಬಸವೇಂದ್ರನಿಗೆ ಗ್ರಾಮವನ್ನು ದತ್ತಿಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ವೇಳೆಗೆ ಅಚ್ಯುತರಾಯನು ಮರಣಹೊಂದಿದ್ದನು. ಆತನ ಮಗನಾದ ಯುವರಾಜ ವೆಂಕಟನ ಪ್ರತಿನಿಧಿಯಾಗಿ ಸಲಕರಾಜ ತಿರುಮಲನು ಅಧಿಕಾರ ಸೂತ್ರಗಳನ್ನು ವಹಿಸಿದ್ದು, ಕ್ರಮೇಣ ತಾನೇ ಸಿಂಹಾಸನಾರೂಢ ನಾಗಲು ಪ್ರಯತ್ನಿಸಿದನೆಂಬುದು ತಿಳಿದ ವಿಷಯವೇ. ಪ್ರಸ್ತುತಶಾಸನವು ತಿರುಮಲನು ಸ್ವತಂತ್ರನಾಗಿ ತನ್ನ ಹೆಸರಿನಲ್ಲಿಯೇ ದಾನಗಳನ್ನು ನೀಡುತ್ತಿದ್ದ ಆ ಕಾಲದ್ದಾಗಿದೆ. ಶಾಸನದಲ್ಲಿ ಅವನು ಸಾರ್ವಭೌಮಸೂಚಕವಾದ ಎಲ್ಲ ಬಿರುದುಗಳನ್ನೂ ಧರಿಸಿದುದು ಕಂಡುಬಂದಿದೆ. ದಾನವನ್ನು ಪಡೆದ ಎಮ್ಮೆಬಸವೇಂದ್ರನು ಒಬ್ಬ ವಿರಶೈವಗುರು. ದತ್ತಿಯಾಗಿ ಕೊಡಲಾದ ಕೊಮ್ರಕೆರೆ ಗ್ರಾಮವು ಹಸ್ತಿನಾವತಿವಳಿತದಲ್ಲಿರುವ ಮೂಡನಾಡಿನ ಕುರುಗೋಡು ಸೀಮೆಯಲ್ಲಿದೆ. ಈ ಗ್ರಾಮವು ಬಳ್ಳಾರಿ

ಜಿಲ್ಲೆಯಲ್ಲಿರುವ ಕುರುಗೋಡಿನ ಸಮೀಪದಲ್ಲಿನ ಒಂದು ಗ್ರಾಮವಾಗಿರಬಹುದು. ಈ ವೀರಶೈವ ಗುರು ಬಹುಶಃ ಹೊಸಪೇಟೆಯ ಬಳಿ ಜಂಬುನಾಥ ಬೆಟ್ಟದ ಮೇಲೆ ತನ್ನ ಮಠವನ್ನು ಹೊಂದಿದ್ದನೆಂದು ಹೇಳಲಾಗಿದೆ. ಈತನು ಕಾಲಜ್ಞಾನದ ಕರ್ತೃ. ಈ ವಿಷಯ ಶಾಸನದಲ್ಲೇ ಉಕ್ತವಾಗಿದೆ. ನಂಜನಗೂಡಿನಲ್ಲಿರುವ ರಾಘವೇಂದ್ರಸ್ವಾಮಿಮಠದವರ ವಶಕ್ಕೆ ಈ ತಾಮ್ರ ಶಾಸನವು ಹೇಗೆ ಬಂತೆಂಬುದು ತಿಳಿದುಬಂದಿಲ್ಲ.

ಉಮ್ಮತ್ತೂರಿನ ಪಾಳೆಯಗಾರರು

ರೈಸ್‌ರವರು ಎ. ಕ. ಸಂಪುಟ IVರ ಪೀಠಿಕೆಯ ಭಾಗದಲ್ಲಿ ಈ ಪಾಳೆಯಗಾರರ ವಂಶಾವಳಿಯನ್ನು ಕೊಟ್ಟಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಪ್ರಕಟವಾಗಿರುವ ಶಾಸನಗಳಷ್ಟನ್ನೇ ಆಧರಿಸಿ ಈ ಪಾಳೆಯಗಾರರ ವಂಶಾವಳಿಯನ್ನು ವಿಶ್ಲೇಷಿಸಿದಾಗ ಈ ವರೆಗೆ ತಿಳಿದಿದ್ದ ಅಂಶಗಳಿಗಿಂತ ಭಿನ್ನವಾದ ಹಲವಾರು ವಿಷಯಗಳು ಗೋಚರವಾಗಿವೆ.

ಕ್ರಿ. ಶ. ೧೪೩೦ನೆಯ ವರ್ಷದ ಗು. ಪೇ. ೨೪ನೆಯ ಶಾಸನದಲ್ಲಿ ವೀರಸೋವಣ್ಣವೊಡೆಯನ ಮಗನಾದ ಮಹಾಮಂಡಲೇಶ್ವರ ಚಿಕ್ಕವೊಡೆಯನು ತೆರಕಣಾಂಬಿ ರಾಜ್ಯವನ್ನು ಆಳುತ್ತಿದ್ದನೆಂದು ಹೇಳಿದೆ. ಈತ ಉಮ್ಮತ್ತೂರು ಕುಟುಂಬಕ್ಕೆ ಸೇರಿದವನೆಂಬುದಕ್ಕೆ ಅವಶ್ಯಕವಾದ ಆಧಾರಗಳಿಲ್ಲ. ಆ ಪಾಳೆಯಗಾರರು ಹೊಂದಿದ್ದ ಯಾವ ಪ್ರಶಸ್ತಿಗಳನ್ನೂ ಈತ ಶಾಸನದಲ್ಲಿ ಹೊಂದಿಲ್ಲ. ಕ್ರಿ.ಶ. ೧೪೬೭ನೆಯ ವರ್ಷದ ನಂ. ಗೂ. ೧೮೧ನೆಯ ಶಾಸನವು ಉಮ್ಮತ್ತೂರಿನ ಸೋಮಯ್ಯದೇವನನ್ನು ಕುರಿತದ್ದಾಗಿದೆ. ಈ ಶಾಸನವು ಒಡೆದಿದ್ದು ಆತನನ್ನು ಸ್ತುತಿಸುವ ಶಾಸನದ ಭಾಗವು ನಷ್ಟವಾಗಿದೆ. ಆತನು ನಂಜುಂಡೇಶ್ವರ ದೇವರ ಭಕ್ತನೆಂದು ಹೇಳಿದೆ. ಎರಡು ವರ್ಷಗಳ ನಂತರದ, ಶಕ ೧೩೯೧ಕ್ಕೆ ಸಮನಾದ ಕ್ರಿ.ಶ. ೧೪೬೯ರ ಗು. ಪೇ. ೧೭೬ನೆಯ ಶಾಸನದಲ್ಲಿ ಸೋಮರಾಯವೊಡೆಯನ ಮಗನಾದ ವೀರಗಜಬೇಟೆಕಾಱ ದೇವರಾಜವೊಡೆಯನ ಉಲ್ಲೇಖವಿದೆ. ಆತ ಕುಡುಗುನಾಡನ್ನು ಆಳುತ್ತಿದ್ದಂತೆ ಕಂಡುಬರುತ್ತದೆ. ಕ್ರಿ. ಶ. ೧೪೮೨ರ ಚಿಕ್ಕಣಾಪುರದ ಶಾಸನದಲ್ಲಿ ತೆರಕಣಾಂಬಿಯ ವೀರಭದ್ರದೇವರಿಗೆ ಮಹಾಮಂಡಲೇಶ್ವರ ವೀರನಂಜರಾಯವೊಡೆಯನು ಬಿಟ್ಟ ದತ್ತಿಯ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಈತನು ತೆರಕಣಾಂಬಿನಾಡಿನಲ್ಲಿ ಆಳುತ್ತಿದ್ದನೆಂದು ತರ್ಕಿಸಲು ಅವಕಾಶವಿದೆ. ಆದರೆ ಸಾಮಾನ್ಯವಾಗಿ ಉಮ್ಮತ್ತೂರಿನ ಅರಸರು ಹೊಂದಿದ್ದ ಫೇಣಾಂಕ ಚಕ್ರೇಶ್ವರ, ಪೆಸಾಳಿಹನುಮ ಮುಂತಾದ ಬಿರುದುಗಳು ಈ ಮೇಲ್ಕಾಣಿಸಿದ ಶಾಸನಗಳಲ್ಲಿ ಉಕ್ತವಾಗಿಲ್ಲ.

ಶಕ ೧೪೦೦ರ (ಕ್ರಿ. ಶ. ೧೪೮೮) ಗು. ಪೇ. ೧೭೮ನೆಯ ಶಾಸನದಲ್ಲಿ ಈ ಬಿರುದುಗಳನ್ನು ಧರಿಸಿದ್ದ ಅರಸರ ವಂಶಾವಳಿಯನ್ನು ಈ ಕೆಳಗೆ ಕಾಣಿಸಿದಂತೆ ಕೊಟ್ಟಿದೆ.

ವೀರಹನುಮಪ್ಪಒಡೆಯ
|
ಇಮ್ಮಡಿರಾಯ
|
ದೇವಣ್ಣ ಒಡೆಯ — ಬೆದ್ದೆಯ ನಂಜರಾಯ ಒಡೆಯ

ಈ ನಂಜರಾಯ ಒಡೆಯನು ಕ್ರಿ. ಶ. ೧೪೮೯ (ಗು. ನೇ. ೧೨೦) ಕ್ರಿ. ಶ. ೧೪೯೦ (ನಂ. ಗೂ. ೨೫೯) ಕ್ರಿ. ಶ. ೧೪೯೨ (ನಂ. ಗೂ. ೩೩೪; ಮತ್ತು ಗು.ಪೇ. ೧೩೫), ಕ್ರಿ. ಶ. ೧೪೯೫ (ನಂ. ಗೂ. ೩೩೫ ಮತ್ತು ೩೩೬) ಮತ್ತು ಕ್ರಿ.ಶ. ೧೫೦೪ (ಗು. ಪೇ ೧೧೫ ಮತ್ತು ೧೧೪)ನೆಯ ವರ್ಷಗಳ ಶಾಸನಗಳಲ್ಲಿ ಸಹ ಕಾಣಿಸಿಕೊಂಡಿದ್ದಾನೆ.

ಕ್ರಿ. ಶ. ೧೪೯೭ರ ಶಾಸನದಲ್ಲಿ ವೀರನಂಜರಾಯನ ಮಗನಾದ ಚನ್ನನಂಜರಾಯಒಡೆಯನು ಮಾಡಿದ ದಾನದ ಪ್ರಸ್ತಾಪವಿದೆ. ಆದರೆ ಕ್ರಿ. ಶ. ೧೫೦೪ರಲ್ಲಿ ಪುನಃ ನಂಜರಾಯನೇ ದಾನಿಯಾಗಿರುವುದನ್ನು ನೋಡಿದ್ದೇವೆ. ಕ್ರಿ. ಶ. ೧೫೩೦ರ ಶಾಸನದಲ್ಲಿ ಮಲ್ಲರಾಜ ಒಡೆಯನ ಪ್ರಸ್ತಾಪವಿದೆ. ಆದರೆ ಈತನಿಗೆ ನಂಜರಾಜನೊಡನೆ ಇದ್ದ ಸಂಬಂಧ ತಿಳಿದುಬಂದಿಲ್ಲ.

ಪ್ರಸ್ತುತ ಸಂಪುಟದಲ್ಲಿ ಪ್ರಕಟವಾಗಿರುವ ಶಾಸನಗಳನ್ನು ಆಧರಿಸಿ ಈ ವಿವರಗಳನ್ನು ಚರ್ಚಿಸಿದ್ದೇವೆ. ರೈಸ್‌ರವರು ಕೋಟೆಯ ನಾಯಕರ ವಿಷಯವನ್ನು ಪ್ರಸ್ತಾಪಿಸಿ, ಕೋಟೆ ಎಂಬುದು ಗೋಪಾಲಸ್ವಾಮಿಬೆಟ್ಟದ ಮೇಲಿರುವ ಬೆಟ್ಟದಕೋಟೆ ಎಂದು ಗುರುತಿಸಿದ್ದಾರೆ. 'ಚೇರಚೋಳಪಾಂಡ್ಯ ಮೂವರುರಾಯರಗಂಡ', 'ನೀಲಗಿರಿಸಾಧಾರವೊಡೆಯ' ಅಥವಾ 'ನೀಲಗಿರಿನಾಡಾಳ್ವ' ಎಂಬ ಬಿರುದುಗಳನ್ನು ಹೊಂದಿದ್ದ ಆ ನಾಯಕರ ಹೆಸರುಗಳನ್ನೂ ಪಟ್ಟಿಮಾಡಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಈ ಬಿರುದುಗಳನ್ನು ಹೊಂದಿದ್ದ ಕೆಲವರು ಕಂಡುಬಂದಿದ್ದಾರೆ. ಕ್ರಿ. ಶ. ೧೫೦೪, ಆಗಸ್ಟ್ ೧೫ರ ಶಾಸನದಲ್ಲಿ (ಹೆ.ಕೋ.೨೮) ದೇವರಾಜವೊಡೆಯನ ಪ್ರಸ್ತಾಪವಿದೆ. ಹೆಸರಿನ ಸಾಮ್ಯದಮೇಲೆ ಅದೇ ವರ್ಷದ ಆಗಸ್ಟ್ ೨೬ರ ನಂ.ಗೂ. ೧೫೭ನೆಯ ಶಾಸನದಲ್ಲಿ ಉಕ್ತವಾಗಿರುವ ದೇವರಾಜನೂ ಈತನೂ ಒಬ್ಬನೆಂದೇ ಭಾವಿಸಬಹುದಾಗಿದೆ. ಆದರೆ ಅದೇ ತೇದಿಯ (ಕ್ರಿ. ಶ. ೧೫೦೪, ಆಗಸ್ಟ್ ೧೫) ಇನ್ನೊಂದು ಶಾಸನವು (ನಂ. ಗೂ. ೧೫೯) ದೇವರಾಜ ಒಡೆಯನು ಧರಿಸಿದ್ದ ಬಿರುದುಗಳನ್ನೇ ಹೊಂದಿದ್ದ ಮೂಡಣಕೋಟೆಯ ಗೋವಣ್ಣ ಒಡೆಯನನ್ನು ಪ್ರಸ್ತಾಪಿಸಿದೆ. ಇವರಿಬ್ಬರ ಸಂಬಂಧವೆಂತಹುದು? ಇನ್ನೊಂದು ಕಡೆ, ಅದೇ ಕಾಲದಲ್ಲಿ ವೀರನಂಜರಾಯನು ಉಮ್ಮತ್ತೂರಿನ ಪಾಳೆಯಗಾರನಾಗಿದ್ದುದು ಕಂಡುಬರುತ್ತದೆ.

ಇಲ್ಲಿ ನಾವು ಒಂದು ಊಹೆಯನ್ನು ಮಾಡಬಹುದು. ಗು.ಪೇ. ೧೭೮ನೆಯ ಶಾಸನದಲ್ಲಿ ನಿರೂಪಿಸಲಾಗಿರುವ ವಂಶಾವಳಿಯನ್ನು ಮೇಲೆ ಕೊಟ್ಟಿದ್ದೇವಷ್ಟೆ. ಅದರಲ್ಲಿ ಬರುವ ಇಮ್ಮಡಿರಾಯನಿಗೆ ದೇವಣ್ಣ ಮತ್ತು ವೀರನಂಜರಾಯನೆಂಬಿಬ್ಬರು ಮಕ್ಕಳಿದ್ದಿರಬೇಕು. ಕಾರಣಾಂತರಗಳಿಂದ ಹಿರಿಯನಾದ ದೇವಣ್ಣನು ಮೂಡಣಕೋಟೆಯ ಸುತ್ತಲಿನ ಪ್ರದೇಶದಲ್ಲಿ ತನ್ನದೇ ಆದ ಪಾಳೆಯವೊಂದನ್ನು ರೂಪಿಸಿಕೊಂಡಿರಬಹುದೇ? ಗೋವಣ್ಣ ಒಡೆಯನು ಈ ದೇವಣ್ಣನ ಮಗನಾಗಿರಬಹುದೇ?

ಕ್ರಿ.ಶ. ೧೫೦೬ (ಶಕ ೧೪೨೭)ನೆಯ ಗು.ಪೇ. ೨೬ನೆಯ ಶಾಸನ ವೀರನರಸಿಂಹನ ಆಳ್ವಿಕೆಯ ಕಾಲದ್ದು. ಇದರಲ್ಲಿ 'ಪೆನುಗೊಂಡಚಕ್ರೇಶ್ವರ' ಬಿರುದಾಂಕಿತನಾದ ದೇವಣ ಒಡೆಯನ ಮಗ ವೀರಚಿಕ್ಕರಾಜ ಒಡೆಯನು ತೆರಕಣಾಂಬೆನಾಡನ್ನು ಆಳುತ್ತಿದ್ದನೆಂದಿದೆ. ಈ ದೇವಣ್ಣನೇ ದೇವರಾಜ ಒಡೆಯ. ಗು.ಪೇ. ೧೭೬ನೆಯ ಶಾಸನದಲ್ಲಿ ಉಕ್ತನಾದ ಸೋಮರಾಯ ಒಡೆಯನೇ ಇಮ್ಮಡಿರಾಯ ಒಡೆಯನೆಂದು ಭಾವಿಸಿದಲ್ಲಿ ಚಿಕ್ಕರಾಯನು ಇಮ್ಮಡಿರಾಯನ ಮೊಮ್ಮಗನಾಗುತ್ತಾನೆ. ಮಲ್ಲರಾಜನೆಂಬುದು ಈತನ ಇನ್ನೊಂದು ಹೆಸರಾಗಿರಬಹುದು.[1] ಇವುಗಳನ್ನೆಲ್ಲಾ ಕ್ರೋಢೀಕರಿಸಿ ಉಮ್ಮತ್ತೂರಿನ ಪಾಳೆಯಗಾರರ ವಂಶಾವಳಿಯನ್ನು ಹೀಗೆ ರೂಪಿಸಬಹುದು.

ಹನುಮಪ್ಪಒಡೆಯ
|
ಇಮ್ಮಡಿರಾಯಒಡೆಯ (ಸೋಮರಾಯಒಡೆಯ)
|
- ದೇವಣ್ಣ ಒಡೆಯ (ಕ್ರಿ.ಶ. ೧೪೮೮, ೧೫೦೪)
  - ಚಿಕ್ಕರಾಯ (ಮಲ್ಲರಾಜ)
  - ಗೋವಣ್ಣ ಒಡೆಯ
    - ⋮ ಮಲ್ಲರಾಜ (ಕ್ರಿ.ಶ. ೧೫೩೦)
- ನಂಜರಾಜ (ಕ್ರಿ.ಶ. ೧೪೮೨–೧೫೦೪)
  - ಚನ್ನ ನಂಜರಾಜ (ಕ್ರಿ.ಶ. ೧೪೯೭)

ಈ ಮೇಲಿನ ವಿವೇಚನೆಯಿಂದ ಕ್ರಿ.ಶ. ೧೫೦೪ರಿಂದ ೧೫೩೦ರ ವರೆಗೆ ಈ ಪಾಳೆಯಗಾರರ ಶಾಸನಗಳಿಲ್ಲದಿರುವ ಅಂಶ ವ್ಯಕ್ತವಾಗುತ್ತದೆ. ಕೃಷ್ಣದೇವರಾಯನು ತನ್ನ ಆಳಿಕೆಯ ಕಾಲದಲ್ಲಿ (ಕ್ರಿ.ಶ. ೧೫೦೯–೨೯) ಉಮ್ಮತ್ತೂರಿನ

[1] K. A. Nilakanta Sastri and N. Venkataramanayya: *Further Sources of Vijayanagara History*, I, pp. 181–83

ಒಬ್ಬ ಪಾಳೆಯಗಾರನನ್ನು ಅಣಿದ ವಿಷಯ ನಮಗೆ ತಿಳಿದಿದೆ. ಬಹುಶಃ ಆತನು ಆಳುತ್ತಿರುವವರೆಗೂ ಈ ಪಾಳೆಯಗಾರರು ತಮ್ಮ ಪಾಳೆಯದ ಮೇಲಿನ ಅಧಿಕಾರವನ್ನು ಕಳೆದುಕೊಂಡಿದ್ದರು. ಕ್ರಿ.ಶ. ೧೫೩೦ರವರೆಗೂ ಇವರ ಶಾಸನಗಳು ಇಲ್ಲ. ಆದರೆ ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಸಾಹಿತ್ಯಿಕ ಆಧಾರಗಳಿಂದ ಕೃಷ್ಣದೇವರಾಯನು ಅಡಗಿಸಿದ ಉಮ್ಮತ್ತೂರಿನ ಪಾಳೆಯಗಾರನ ಹೆಸರು ಗಂಗರಾಜನೆಂಬುದು ತಿಳಿದಿದೆ. ಆದರೆ ಶಾಸನಗಳಲ್ಲಿ ಈ ಗಂಗರಾಜನ ಉಲ್ಲೇಖವೇ ಇಲ್ಲ. ಕ್ರಿ.ಶ. ೧೫೦೪ನೆಯ ಶಾಸನದಲ್ಲಿ ಕಾಣಿಸಿಕೊಳ್ಳುವಾತ ನಂಜರಾಜ. ಸಾಹಿತ್ಯಿಕ ಆಧಾರಗಳಲ್ಲಿ ಉಕ್ತನಾದ ಗಂಗರಾಜನು ಈ ನಂಜರಾಜನೆಂದೇ ತೋರುತ್ತದೆ.

ಶಕ ೧೪೩೪ಕ್ಕೆ ಸಮನಾದ ಕ್ರಿ.ಶ. ೧೫೧೨ರ ಡಿಸೆಂಬರ್ ೯ನೆಯ ದಿನಾಂಕದ ನಂ.ಗೂ. ೩೦೨ನೆಯ ನರಸಿಂಹವರ್ಮನ ಮಗನಾದ ಕೃಷ್ಣವರ್ಮಮಹಾಧಿರಾಜನ ಶಾಸನದಲ್ಲಿ ಆತನ ಅಧಿಕಾರಿಯೊಬ್ಬನ, ಹಾಗೂ ತಲಕಾಡಿನ ಪ್ರಸ್ತಾಪವಿದೆ. ಅಧಿಕಾರಿಯ ಹೆಸರು ಸ್ಪಷ್ಟವಾಗಿಲ್ಲ. ಶಾಸನೋಕ್ತ ಕೃಷ್ಣವರ್ಮಮಹಾಧಿರಾಜನು ಕೃಷ್ಣದೇವರಾಯನೇ ಆಗಿದ್ದಲ್ಲಿ, ಈ ಶಾಸನದ ಕಾಲದ ವೇಳೆಗೆ ತಲಕಾಡು ಮತ್ತು ಉಮ್ಮತ್ತೂರುಗಳನ್ನು ಕೃಷ್ಣದೇವರಾಯನು ವಶಪಡಿಸಿಕೊಂಡಿದ್ದನೆಂದು ಊಹಿಸಬಹುದು. ಏನಿದ್ದರೂ, ಕ್ರಿ. ಶ. ೧೫೧೩ರ ಆಕ್ಟೋಬರ್ ೪ರ ವೇಳೆಗೆ ಉಮ್ಮತ್ತೂರಿನ ಪಾಳೆಯಗಾರರನ್ನು ಸೋಲಿಸಿ, ಸಾಳುವ ಗೋವಿಂದರಾಜನನ್ನು ತೆರಕಣಾಂಬಿಸೀಮೆಯ ಪ್ರಾಂತಾಧಿಕಾರಿಯಾಗಿ ನೇಮಿಸಿದುದಂತೂ ಖಚಿತ (ಗು. ಪೇ. ೧೩೬)[1]

ಮೈಸೂರಿನ ಒಡೆಯರು

ಪ್ರಸ್ತುತ ಸಂಪುಟದಲ್ಲಿ ಮೈಸೂರು ಒಡೆಯರಿಗೆ ಸಂಬಂಧಿಸಿದ ಐವತ್ತಕ್ಕೂ ಮಿಕ್ಕಿದ ಶಾಸನಗಳು. ಈ ಮನೆತನದ ಕೊನೆಯ ಅರಸರಾದ ಜಯಚಾಮರಾಜ ಒಡೆಯರು ೨೩–೯–೭೪ರಲ್ಲಿ ವಿಧಿವಶರಾದರು. ಈ ಅರಸರ ವಂಶಾವಳಿಯನ್ನು ರೂಪಿಸುವಲ್ಲಿ ಅನೇಕ ತೊಡಕುಗಳಿವೆ. ಶಕ ೧೫೬೧ಕ್ಕೆ ಸಮನಾದ ಕ್ರಿ.ಶ. ೧೬೩೯ರ ಕಂಠೀರವ ನರಸರಾಜನ ಗಜ್ಜಿಗನಹಳ್ಳಿ ತಾಮ್ರಶಾಸನದಲ್ಲಿ (ನಂ.ಗೂ. ೨೧೨) ಇವರ ಒಂದು ವಂಶಾವಳಿಯನ್ನು ಕೊಟ್ಟಿದೆ. ವಿಜಯನಗರದ ಇಮ್ಮಡಿ ವೆಂಕಟಪತಿರಾಯನು ಘನ ಶೈಲ–ಪೆನುಗೊಂಡ–ದಿಂದ ಆಳುತ್ತಿದ್ದನೆಂದು ಇದು ಹೇಳುತ್ತದೆ. ಮುಂದುವರಿದು ಗೋದಾವರೀ ಪ್ರದೇಶದಲ್ಲಿ ವೈಭವದಿಂದ ಆಳಿದ ಅರಸರು, ಕರ್ನಾಟಕಕ್ಕೆ ಬಂದು ಇಲ್ಲಿ ಆಳಿದರೆಂದು ಹೇಳಿ, ಚಾಮರಾಜ, ಆತನ ಮಗ ಬೆಟ್ಟದ ಚಾಮರಾಜ ಮತ್ತು ಮೊಮ್ಮಗ ಕಂಠೀರವನರಸ ರಾಜರನ್ನು ಶಾಸನ ಪ್ರಸ್ತಾಪಿಸಿದೆ. ಚಾಮರಾಜನಿಗೂ ಮೊದಲಿನವರು ಗೋದಾವರೀ ಪ್ರದೇಶದ ಯಾವಭಾಗದಲ್ಲಿ ಆಳುತ್ತಿದ್ದರೆಂಬುದನ್ನಾಗಲಿ, ಅವರು ಕರ್ನಾಟಕಕ್ಕೆ ಬರಲು ಕಾರಣಗಳನ್ನಾಗಲೀ ಶಾಸನ ಸ್ಪಷ್ಟೀಕರಿಸಿಲ್ಲ. ಚಾಮರಾಜನಿಗೂ ಮೊದಲು ಮೈಸೂರಿನಲ್ಲಿ ಈ ಮನೆತನದ ಇತರರು ಆಳಿದರೆಂದೂ, ಬೆಟ್ಟದ ಚಾಮರಾಜನ ನಂತರ ಆಳಿದವನು ಇಮ್ಮಡಿ ರಾಜಒಡೆಯನೇ ಹೊರತು ಕಂಠೀರವನರಸರಾಜನಲ್ಲ ವೆಂಬುದೂ, ನಮಗೆ ತಿಳಿದಿದೆ. ರಾಜಒಡೆಯರ ಮೊಮ್ಮಗನಾದ ಆರನೆಯ ಚಾಮರಾಜನ ಬಳಿಕ ಈ ಇಮ್ಮಡಿ ರಾಜ ಒಡೆಯನು ಒಂದು ವರ್ಷಕಾಲ ಮಾತ್ರ ಆಳಿದನು. ಮೈಸೂರು ಜಿಲ್ಲೆಯ ಎಲ್ಲ ಶಾಸನಗಳೂ ಪ್ರಕಟವಾಗುವಾಗ ಇದಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ಚರ್ಚಿಸಲಾಗುತ್ತದೆ. ಕಲಿಯುಗ ೪೭೨೬, ಶಕವರ್ಷ ೧೫೪೬ಕ್ಕೆ ಸಮನಾದ ಕ್ರಿ. ಶ. ೧೬೨೪–೫ನೆಯ ವರ್ಷದ ಮುಳ್ಳೂರು ಶಾಸನ (ಹೆ. ಕೋ. ೯೭)ದಲ್ಲಿ ಉಕ್ತನಾಗಿರುವ ಚಾಮರಾಜನು, ಆರನೆಯ ಚಾಮರಾಜನೆಂದು ತೋರುತ್ತದೆ.

ಶಕ ೧೫೬೫ (ಕ್ರಿ. ಶ. ೧೬೪೪)ನೆಯ ನಂ. ಗೂ. ೧೪ನೆಯ ಶಾಸನವನ್ನು ನಂದಿಯ ವಿಗ್ರಹವೊಂದರ ಪೀಠದ ಮೇಲೆ ಕೆತ್ತಿದೆ. ಇದು ಮೈಸೂರಿನ ಚಾಮರಾಜ ಒಡೆಯರ ಮಗನಾದ ದಳವಾಯಿ ವಿಕ್ರಮರಾಯನ ಸೇವೆ ಎಂದು ಶಾಸನದಲ್ಲಿ ಹೇಳಿದೆ. ಈ ಚಾಮರಾಜ ಒಡೆಯನು ಯಾರು ? ರಾಜಒಡೆಯರ ಸೋದರನಾದ ಬೆಟ್ಟದ ಚಾಮರಾಜನ ಮಗ (natural son) ಎಂಬುದು ಒಂದು ಅಭಿಪ್ರಾಯ. ಆದರೆ ಶಾಸನವೊಂದರಲ್ಲಿ ವಿಕ್ರಮರಾಯನು ರಾಜಒಡೆಯರ ಮಗನೆಂದು ಹೇಳಿದೆ.[2]

---

1 ಮೇಲೆ ನಮೂದಿಸಲಾದ ಗ್ರಂಥದ ಪುಟ ೨೦೦ ಹಾಗೂ ಅಡಿಟಿಪ್ಪಣಿಯೊಂದಿಗೆ ಹೋಲಿಸಿ.

2 S. K. Aiyangar : *Ancient India and South Indian History and Culture*, II, p. 222 and note.

ಗು. ಪೇ. ೧೪೬ನೆಯ ತ್ರಿಯಂಬಕಪುರದ ಶಾಸನ ಹೊಸದಾಗಿ ಲಭ್ಯವಾದದ್ದು, ಬೆಟ್ಟದ ಚಾಮರಾಜನ ಮಗನಾದ ಕಂಠೀರವ ನರಸರಾಜನು ಆಳುತ್ತಿದ್ದಾಗ, ಶಕ ೧೫೭೬ (ಕ್ರಿ. ಶ. ೧೬೫೪) ರಲ್ಲಿ ತ್ರಿಯಂಬಕಪುರವನ್ನೊಳಗೊಂಡ ಸೀಮೆಯ ಅಧಿಕಾರಿಯಾಗಿದ್ದ ಬೊಮ್ಮರಸಯ್ಯನು ಆ ಗ್ರಾಮದ ಬಾವಿಯೊಂದನ್ನು ಜೀರ್ಣೋದ್ಧಾರಗೊಳಿಸಿದನು. ಈ ಬಾವಿಯನ್ನು ವೀರವೆಂಕಟಪತಿರಾಯನ ಮಗನಾದ ತಿರುಮಲರಾಜಯ್ಯನ ಕಾರ್ಯಕರ್ತನಾದ ಶಂಕರಯ್ಯನು ಐವತ್ತು ವರ್ಷಗಳಿಗೂ ಹಿಂದೆ ಶಕ ೧೫೨೬ (ಕ್ರಿ. ಶ. ೧೬೦೪)ರಲ್ಲಿ ತೋಡಿಸಿದ್ದನೆಂದೂ ಕೆಲ ಕಾಲದ ಬಳಿಕ ಕೂಪದಿಂದ ಗಂಗೋದಕ ನಡೆಯದೆ ಕೂಪ ಜೀರ್ಣವಾಗಿತ್ತೆಂದು ಶಾಸನದಲ್ಲಿ ಹೇಳಿದೆ. ಇಲ್ಲಿ ಉಕ್ತವಾದ ವೀರವೆಂಕಟಪತಿರಾಯನು ಆರವೀಡು ಮನೆತನದ ಒಂದನೆಯ ವೆಂಕಟಪತಿ. ಆದರೆ ಆತನಿಗೆ ತಿರುಮಲ ಅಥವಾ ತಿರುಮಲರಾಜಯ್ಯನೆಂಬ ಹೆಸರಿನ ಮಗನಿರಲಿಲ್ಲ. ವೆಂಕಟಪತಿಯ ಹಿರಿಯ ಸಹೋದರನಾದ ರಾಮನಿಗೆ ಆ ಹೆಸರಿನ ಮಗನೊಬ್ಬನಿದ್ದನು. ಶಾಸನೋಕ್ತ ತಿರುಮಲರಾಜಯ್ಯನು ಈತನೇ ಆಗಿರಬಹುದು. ಈ ಸಂಪುಟದ ಇನ್ನೂ ಕೆಲವು ಶಾಸನಗಳಲ್ಲಿ (ಉದಾ : ನಂ. ಗೂ. ೨೦೮) ಈತನು ರಾಮರಾಜ ತಿರುಮಲರಾಜಯ್ಯದೇವನೆಂಬ ಹೆಸರಿನಿಂದ ಕಾಣಿಸಿಕೊಂಡಿದ್ದಾನೆ.

ನಂ. ಗೂ. ೩೨೮ ಮತ್ತು ೩೫೫ನೆಯ ಶಾಸನಗಳೆರಡೂ ಕ್ರಿ. ಶ. ೧೬೬೨ನೆಯ ವರ್ಷದ್ದು. ದೇವರಾಜಒಡೆಯನು ಶ್ರೀರಂಗಪಟ್ಟಣದಿಂದ ಆಳುತ್ತಿದ್ದ ಆ ವರ್ಷ ದೇವಾಜಮ್ಮನು ಗತಿಸಿದ ಅರಸರ ನೆನಪಿನಲ್ಲಿ ಕಳಲೆ ಗ್ರಾಮದಲ್ಲಿ ಮಹಾಮಹತ್ತಿಗೆ ಒಂದು ಮಠವನ್ನು ಕಟ್ಟಿಸಿ, ಆ ಮಠಕ್ಕೆ ಕುಪ್ಪೆಹಟ್ಟಿ, ಸಂಬುಪುರ (ನಂ. ಗೂ. ೩೨೮) ಮತ್ತು ಉಪ್ಪಿನಹಳ್ಳಿ (ನಂ. ಗೂ. ೩೫೫) ಗ್ರಾಮಗಳನ್ನು ದಾನವಾಗಿ ನೀಡಿದಳೆಂದು ಆ ಶಾಸನಗಳಲ್ಲಿ ಹೇಳಿದೆ. ಈ ದೇವಾಜಮ್ಮನು ಕಂಠೀರವನರಸರಾಜವೊಡೆಯರ ಪತ್ನಿಯೆಂದು ಗುರುತಿಸಲಾಗಿದೆ.[1]

ಹೊರಮರಳಿ ಗ್ರಾಮದ ಶಕ ೧೫೯೧ (ಕ್ರಿ.ಶ. ೧೬೬೯)ನೆಯ ವರ್ಷದ ಶಾಸನ (ಹೆ.ಕೋ. ೧೭) ದೇವರಾಜ ವೊಡೆಯನ ಆಳಿಕೆಯನ್ನು ಪ್ರಸ್ತಾಪಿಸಿ, ಆತನ ಕುಮಾರ ಕಂಠೀರವ ಮಹೀಪಾಲಕನು ಕೊಟ್ಟ ದಾನವೊಂದನ್ನು ದಾಖಲು ಮಾಡಿದೆ. ಈ ಕಂಠೀರವನು ದೇವರಾಜವೊಡೆಯರ ಪೌತ್ರನೆಂದು ಶಾಸನದಲ್ಲಿ ಹೇಳಿದೆ. ಈ ಹೇಳಿಕೆ ದಳವಾಯಿ ತಾಮ್ರಶಾಸನದಲ್ಲಿ ಉಕ್ತವಾದ, ವಿಲ್ಕ್ಸ್ ಮಹಾಶಯನು 'ಮೈಸೂರಿನ ಚರಿತ್ರೆ' (History of Mysore)ಯಲ್ಲಿ ನಿರೂಪಿಸಿರುವ, ವಂಶಾವಳಿಗಿಂತ ಭಿನ್ನವಾಗಿದೆ. ವಾಸ್ತವವಾಗಿ ಈ ಕುಮಾರ ಕಂಠೀರವನು ಪಟ್ಟಕ್ಕೆ ಬರಲೇ ಇಲ್ಲ. ಈತನ ಹಿರಿಯ ಸೋದರನಾದ ಚಿಕ್ಕದೇವರಾಜನು ತಂದೆಯಾದ ದೊಡ್ಡದೇವರಾಜನ ನಂತರ ಆತನ ಉತ್ತರಾಧಿಕಾರಿಯಾದನು. ಕಂಠೀರವನ ಅಜ್ಜನಾದ ಶಾಸನೋಕ್ತ ದೇವರಾಜವೊಡೆಯನು ಖ್ಯಾತಿವೆತ್ತ ರಾಜವೊಡೆಯರ ಕಿರಿಯ ಸೋದರನಾದ ಮುಪ್ಪಿನ ದೇವರಾಜನೆಂದು ಗುರುತಿಸಬಹುದು. ಆದರೆ ಪ್ರೊ. ಎಸ್. ಕೆ. ಅಯ್ಯಂಗಾರ್ ಮತ್ತು ಶ್ರೀ ಹಯವದನ ರಾಯರ ಅಭಿಪ್ರಾಯದಂತೆ ಚಿಕ್ಕದೇವರಾಜನು ತನ್ನ ದೊಡ್ಡಪ್ಪನಾದ ಕೆಂಪದೇವಯ್ಯ (ಅಥವಾ ದೇವರಾಜವೊಡೆಯ)ನ ಬಳಿಕ ಪಟ್ಟಕ್ಕೆ ಬಂದನೇ ಹೊರತು ತಂದೆಯಾದ ದೊಡ್ಡದೇವರಾಜನ ನಂತರವಲ್ಲ. ಈ ದೊಡ್ಡದೇವರಾಜನು ಆಳಲೇ ಇಲ್ಲ.

ಕ್ರಿ.ಶ. ೧೬೭೦ನೆಯ ವರ್ಷದ ಹೆ.ಕೋ. ೧೩ನೆಯ ಶಾಸನದಲ್ಲಿ ಕಂಠೀರವ ಅರಸಿನವರು ಬಿಡಾರದ ವೆಂಕಟೈಯ್ಯನನ್ನು ಕಾಶಿಗೆ ಕಳುಹಿದ ನಿಮಿತ್ಯವಾಗಿ ಆರು ವರಹಗಳ ಭೂಮಿಯನ್ನು ಆತನಿಗೆ ದಾನವಾಗಿ ಕೊಟ್ಟರೆಂದು ಹೇಳಿದೆ. ಕಾಶಿಗೆ ಕಳುಹಿದುದರ ಕಾರಣ ಗೊತ್ತಿಲ್ಲ. ಇಲ್ಲಿ ಪ್ರಸ್ತಾಪಿಸಲಾಗಿರುವ ಕಂಠೀರವ ಅರಸನು ಕುಮಾರ ಕಂಠೀರವ ನರಸರಾಜನೇ. ತನ್ನ ತಂದೆ ಅಥವಾ ದೊಡ್ಡಪ್ಪನ ಆಳಿಕೆಯ ಕಾಲದಲ್ಲಿ ಈತನು ಹೊಂದಿದ್ದ ಅಧಿಕಾರಬಲವನ್ನು ಈ ಶಾಸನಗಳು ಸೂಚಿಸುತ್ತವೆ.

ನಂಜನಗೂಡಿನ (ನಂ.ಗೂ. ೧೯೯) ಮತ್ತು ಗಟ್ಟವಾಡಿಯ (ನಂ.ಗೂ. ೩೧೬,೩೧೭ ಮತ್ತು ೩೧೯) ತಾಮ್ರ ಶಾಸನಗಳು ಇಮ್ಮಡಿಕೃಷ್ಣರಾಜಒಡೆಯನು ನೀಡಿದ ಕ್ರಯ ಭೂದಾನ ಶಾಸನಗಳು. ಈ ನಾಲ್ಕರಲ್ಲಿಯೂ ದಾನವನ್ನು ಖರೀದಿಗೆ ಪಡೆದಾತ ವೆಂಕಟ್ರಾಮೈಯ್ಯನೆಂಬ ಒಬ್ಬಾತನೇ ಎಂದು ತೋರುತ್ತದೆ. ಆತನು ಪಡೆದ ಗ್ರಾಮಗಳೆಲ್ಲಾ ವಿಚಾರದಚಾವಡಿ ವಳಿತಕ್ಕೆ ಸೇರಿದವುಗಳಾದರೂ, ಚನ್ನಪಟ್ಟಣ, ತುರುವೇಕೆರೆ, ತಾಯೂರು ಮತ್ತು ಸತ್ಯಾಗಾಲ ಎಂಬ ಬೇರೆ ಬೇರೆ ಸ್ಥಳಗಳಲ್ಲಿದ್ದುವು. ನಂ.ಗೂ. ೧೯೯ ಮತ್ತು ೩೧೬ನೆಯ ಶಾಸನಗಳಲ್ಲಿ ಉಕ್ತವಾದ ಕ್ರಯವಾಗಿ ಪಡೆದ ಗ್ರಾಮಗಳು ಪಟ್ಟಣದ ಹೋಬಳಿಯೊಳಗಿದ್ದರೆ, ನಂ.ಗೂ. ೩೧೭ ಮತ್ತು ೩೧೯ನೆಯ ಶಾಸನಗಳಲ್ಲಿ ಉಕ್ತವಾದವುಗಳು

[1] C. Hayavadanarao : *Mysore Gazetteer*, II, pt. IV, pp. 2440-41

ಮಹಿಶೂರನಗರ ಹೋಬಳಿಗೆ ಒಳಪಟ್ಟಿದ್ದುವು. ಇವು ಅಂದಿನ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ವಿವರಗಳನ್ನೂ ನೀಡುತ್ತವೆ. ವಳಿತಗಳು ಹಿರಿದಾದ ಆಡಳಿತ ವಿಭಾಗಗಳು. ಅವುಗಳಲ್ಲಿ ಕೆಲವು ಹೋಬಳಿಗಳಿದ್ದು ಒಂದೊಂದು ಹೋಬಳಿಯಲ್ಲಿಯೂ ಕೆಲವು 'ಸ್ಥಳ'ಗಳಿದ್ದುವು. ವಿಚಾರಚಾವಡಿ ವಳಿತದೊಳಗೆ ಪಟ್ಟಣ ಹೋಬಳಿ ಹಾಗೂ ಮಹಿಶೂರನಗರ ಹೋಬಳಿಗಳಿದ್ದು ಚನ್ನಪಟ್ಟಣ ಮತ್ತು ತುರುವೇಕೆರೆ ಸ್ಥಳಗಳು ಪಟ್ಟಣ ಹೋಬಳಿಯೊಳಗೂ, ತಾಯೂರು ಮತ್ತು ಸತ್ಯಾಗಾಲ ಸ್ಥಳಗಳು ಮಹಿಶೂರನಗರ ಹೋಬಳಿಗೂ ಸೇರಿದ್ದುವು. ಆ ಗ್ರಾಮಗಳನ್ನು ವಿಕ್ರಯಿಸುವ ಮೊದಲು ಅವುಗಳ ಒಂದು ವರ್ಷದ ಆದಾಯದ ಲೆಕ್ಕವನ್ನು ಸಂಬಂಧಿಸಿದ ಶಾನುಭೋಗನಿಂದ ತಿಳಿದುಕೊಂಡು ನಿರ್ಣಯಿಸಲಾಯಿತೆಂದು ಹೇಳಿರುವುದು ಗಮನಾರ್ಹ.

ಮೈಸೂರಿನ ಒಡೆಯರು ಸಾಹಿತ್ಯ ಹಾಗೂ ಲಲಿತಕಲೆಗಳಲ್ಲಿ ಆಸಕ್ತಿ ಹೊಂದಿದ್ದು, ವಿದ್ವಾಂಸರ, ಪಂಡಿತರ ಪೋಷಕರಾಗಿದ್ದರು. ಕ್ರಿ.ಶ. ೧೬೮೮ನೆಯ ವರ್ಷದ ನಂ. ಗೂ. ೧೬೭ನೆಯ ಶಾಸನದಲ್ಲಿ ಚಿಕ್ಕದೇವರಾಜ ಒಡೆಯರು ಮೈಸೂರು ಹೋಬಳಿಗೆ ಸೇರಿದ ಏಚಿಗಹಳ್ಳಿ ಗ್ರಾಮವನ್ನು ಯಳವಂದೂರಿನ ದೊಡ್ಡಪಂಡಿತನಿಗೆ ದಾನವಾಗಿ ಕೊಟ್ಟನೆಂದು ಹೇಳಿದೆ. ದಾನಪಡೆದಾತನನ್ನು ಕುರಿತು ಹೆಚ್ಚಿನ ವಿವರಗಳಿಲ್ಲ.

ಕ್ರಿ.ಶ. ೧೮೧೬ ಮತ್ತು ೧೮೧೮ನೆಯ ವರ್ಷಗಳ ಹೆ.ಕೋ. ೨೭ ಮತ್ತು ೩೭ನೆಯ ಶಾಸನಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಮವಾಗಿ ಶಂಖಹಳಿ ಮತ್ತು ಚಕ್ಕೂರು ಗ್ರಾಮಗಳನ್ನು ಪ್ರಸಿದ್ಧ ವೀಣೆ ವಿದ್ವಾಂಸನಾದ ವೆಂಕಟಸುಬ್ಬಯ್ಯನಿಗೆ ದತ್ತಿಕೊಟ್ಟ ವಿಷಯ ಪ್ರಸ್ತಾಪವಾಗಿದೆ.

ಕ್ರಿ.ಶ. ೧೮೧೮ನೆಯ ಅಕ್ಟೋಬರ್ ೧೩ ಮತ್ತು ೧೪ರಂದು ಸವಾರ ಕಚೇರಿ ಅಂದರೆ ಅರಮನೆಯ ಕಚೇರಿಯಲ್ಲಿ ಬಕ್ಷಿಯಾಗಿದ್ಧ ಭೀಮರಾಯನು ದೇಬೂರು ಮತ್ತು ಹತ್ತವಾಳು ಗ್ರಾಮಗಳನ್ನು ಇನಾಮುಕೊಡಿಗೆಯಾಗಿ ಪಡೆದ ವಿಷಯ ನಂ.ಗೂ. ೧೩೩,೧೩೪,೧೫೦ ಮತ್ತು ೩೯೦ನೆಯ ಶಾಸನಗಳಿಂದ ವ್ಯಕ್ತವಾಗಿದೆ. ಇವು ಅಂದು ಅರಸರು ತಮ್ಮ ಅಧಿಕಾರಿಗಳ ನಿಷ್ಠಾವಾದ ಸೇವೆಯನ್ನು ಮನ್ನಿಸಿ ಗೌರವಿಸಲು ನೀಡಿದ ಕೊಡುಗೆ ಎನ್ನಬಹುದು.

ಕವಿಗಳು-ರೂವಾರಿಗಳು

ಪ್ರಸ್ತುತ ಸಂಪುಟದಲ್ಲಿ ಸುಮಾರು ಏಳು ಜನ ಶಾಸನ ಕವಿಗಳು ಬೆಳಕಿಗೆ ಬಂದಿದ್ದಾರೆ. ಇವರಲ್ಲಿ ಜಜ್ಜುಚದ ಮಲ್ಲನು ಪ್ರಾಚೀನ ಕವಿಯಾಗಿದ್ದು ಕ್ರಿ.ಶ. ೧೦೫೭ರ (ಹೆ.ಕೋ. ೬೦) ಬೆಳತೂರು ಶಾಸನವನ್ನು ಬರೆದಿದ್ದಾನೆ. ಈತನನ್ನು 'ಕವಿರಾಜಬಾಂಧವ' (ಕವಿರಾಜರ ಸ್ನೇಹಿತ) ಹಾಗೂ ಸನ್ದಜಿಕೆಯವಗಾದಮಲ್ಲಂ ಎಂದೂ ಶಾಸನದಲ್ಲಿ ಬಣ್ಣಿಸಿದೆ.

ಕ್ರಿ.ಶ. ೧೧೪೮ರ ಕೂಡ್ಲಾಪುರದ ಶಿಲಾಶಾಸನದ (ನಂ.ಗೂ. ೩೨೨) ಕರ್ತೃ ಗಂಗಮಂಡಲಪಂಡಿತ. ಕ್ರಿ.ಶ. ೧೪೪೮ರ ಗು.ಪೇ. ೧೪೭ನೆಯ ತ್ರಿಯಂಬಕಪುರದ ಶಾಸನ ಕವಿ ಯಜುರ್ವೇದದ ಕಾಶ್ಯಪಗೋತ್ರದ ವೇದಕೇಸರಿಭಟ್ಟನ ಮಗನಾದ ನೃಸಿಂಹ. ಶಾಸನವನ್ನು ರಚಿಸಿದುದಕ್ಕಾಗಿ ಈತನಿಗೆ ಒಂದು ವೃತ್ತಿ ಭೂಮಿಯನ್ನು ಕೊಡಲಾಯಿತು. ಇದೇ ಶಾಸನದಲ್ಲಿ ಶಾಸನಾಚಾರ್ಯನೆನಿಸಿದ ವರದಾಚಾರ್ಯರ ಪುತ್ರನಾದ ಶ್ರೀಗಿರಿ ಸಕಲಾಚಾರ್ಯನು ಎರಡು ವೃತ್ತಿ ಭೂಮಿಯನ್ನು ಪಡೆದನೆಂದು ಹೇಳಿರುವುದು ಸ್ವಾರಸ್ಯವಾದ ಸಂಗತಿ. ಈತನು ಇಂತಹ ದತ್ತಿಗಳಿಗೆ ಸಂಬಂಧಿಸಿದಂತೆ ಒಂದು ಅಧಿಕಾರ ಪದವಿಯನ್ನು ಪಡೆದಿದ್ದಿರಬಹುದೆಂದು ಬಹುಶಃ ಇದು ಸೂಚಿಸುತ್ತದೆ. ರಾಜಮಾನ್ಯಗಳನ್ನು ಕಾಪಿಡುವ ಅಥವಾ ರಾಜಶಾಸನಗಳನ್ನು ಹೊರಡಿಸುವ ಶಾಸನಾಧಿಕಾರಿ ಎಂಬ ಪದವಿಯನ್ನು ಪಡೆದಿದ್ದ ಅಧಿಕಾರಿಯೊಡನೆ ಬಹುಶಃ ಪ್ರಸ್ತುತ ಶಾಸನದ ಶಾಸನಾಚಾರ್ಯನನ್ನು ಹೋಲಿಸಬಹುದು.[1]

ಕ್ರಿ.ಶ. ೧೫೧೩, ೧೫೧೭ ಮತ್ತು ೧೫೨೧ರ (ನಂ. ಗೂ. ೩೯೮, ಗು.ಪೇ. ೧ ಮತ್ತು ಗು.ಪೇ. ೧೫೦) ಮೂರು ತಾಮ್ರಶಾಸನಗಳ ಕರ್ತೃ ಸಭಾಪತಿ. ವಿಜಯನಗರದ ಅರಸನಾದ ಕೃಷ್ಣದೇವರಾಜನ ಹಲವಾರು ಶಾಸನಗಳ ಕರ್ತೃವಾದ ಈತ ಪರಿಚಿತನಾದ ಕವಿಯಾಗಿದ್ದಾನೆ. ಈತ ಆಸ್ಥಾನಕವಿಯಾಗಿದ್ದು ಅಚ್ಯುತರಾಯನ ಕಾಲದಲ್ಲೂ ಅದೇ ಸ್ಥಾನದಲ್ಲಿ ಮುಂದುವರಿದಂತೆ ಕಂಡುಬರುತ್ತದೆ. ಸಲಕರಾಜನಮಗ ತಿರುಮಲ ಹಾಕಿಸಿದ ನಂ.ಗೂ. ೧೧೫ನೆಯ ಶಾಸನದ ಕರ್ತೃವೂ ಸಭಾಪತಿಯೇ. ಅದರ ಕಾಲ ಕ್ರಿ.ಶ. ೧೫೪೩. ಹೆಸರನ್ನು ಆಧರಿಸಿ ಈತನನ್ನು ಮೇಲೆ ಹೇಳಿದ ಸಭಾಪತಿ ಎಂದು

[1] D. C. Sircar : *Indian Epigraphical Glossary, p. 304*

ಗುರುತಿಸಿದರೆ ಈ ಶಾಸನಕವಿ ಮೂರು ದಶಕಗಳಿಗೂ ಹೆಚ್ಚುಕಾಲ ಅಧಿಕಾರದಲ್ಲಿದ್ದನೆನ್ನಬೇಕಾಗುತ್ತದೆ. ಇಷ್ಟು ದೀರ್ಘ ಕಾಲ ಒಬ್ಬಾತ ಅಧಿಕಾರದಲ್ಲಿ ಮುಂದುವರಿಯುವುದು ಅಸಾಮಾನ್ಯ.

ನಂ.ಗೂ. ೧೧೧ನೆಯ ಮತ್ತೊಂದು ತಾಮ್ರಶಾಸನವು ಆರವೀಡು ವಂಶದ ಶ್ರೀರಂಗರಾಯನ ಕಾಲದ್ದಾಗಿದ್ದು ಆ ಶಾಸನದ ಕರ್ತೃವನ್ನು ಸಭಾಪತಿಯ ಮಗನಾದ ಕವಿಶಾಸನಸ್ವಯಂಭು ಎಂದು ವರ್ಣಿಸಲಾಗಿದೆ. ಶಾಸನದ ಕಾಲವು ಶಕ ೧೪೯೭ ಆಗಿದ್ದು ಕ್ರಿ. ಶ. ೧೫೭೫ಕ್ಕೆ ಸರಿಹೊಂದುತ್ತದೆ. ಉಕ್ತವಾಗಿರುವ ಸಭಾಪತಿಯನ್ನು ಮೇಲೆ ಹೇಳಿದ ಸಭಾಪತಿಯಾಗಿರಬಹುದೆಂದು ಬಹುಶಃ ಗುರುತಿಸಬಹುದು. ಆದರೆ ಆತನ ಮಗನ ಹೆಸರು ಕವಿಶಾಸನಸ್ವಯಂಭು ಎಂದಾಗಿತ್ತೆ? ಅಥವಾ ಕವಿ ಎಂಬುದು ಆತನ ಹೆಸರಾಗಿದ್ದು ಶಾಸನಸ್ವಯಂಭು ಎಂಬುದು ಬಿರುದಾಗಿರಬಹುದೇ?

ಕ್ರಿ. ಶ. ೧೫೮೦ರ (ನಂ. ಗೂ. ೧೧೬) ಶಾಸನದಲ್ಲಿ ಮತ್ತೊಬ್ಬ ಸಭಾಪತಿಯ ಪ್ರಸ್ತಾಪವಿದೆ. ಆತನು ಕುಂಭಘೋಣದ ಕುಂಭಲಿಂಗನ ಮಗ. ಆದ್ದರಿಂದ ಮೇಲೆ ತಿಳಿಸಿದ ವ್ಯಕ್ತಿಗಿಂತ ಇವನು ಭಿನ್ನವೆಂಬುದು ಸ್ಪಷ್ಟ. ನಂ.ಗೂ. ೨೧೨ (ಕ್ರಿ. ಶ. ೧೬೩೯) ನೆಯ ಶಾಸನದಿಂದ ನರಸಿಂಹಾರ್ಯನ ಮಗ ನೃಹರಿ ಎಂಬ ಮತ್ತೊಬ್ಬ ಕವಿ ಬೆಳಕಿಗೆ ಬಂದಿದ್ದಾನೆ.

ಕ್ರಿ.ಶ. ೧೫೪೮ರ ಲೊಕ್ಕೆರೆ ಶಿಲಾಶಾಸನ (ಗು.ಪೇ. ೧೮೬) ಅಪ್ಪಾಜಿ ಜೋಯಿಸನ ಬರಪ ಎಂದಿದೆ. ಶಾಸನವನ್ನು ಆತ ಕಂಡರಿಸದಿದ್ದಲ್ಲಿ ಶಾಸನದ ಪಾಠವನ್ನು ಬರೆದಿರಬೇಕು. ಹಾಗೆಂದು ಅರ್ಥೈಸಲಾದೀತೆ? ತಾಂಡ್ಯದ (ಕ್ರಿ. ಶ. ೧೦೫೪) ಶಾಸನ (ನಂ.ಗೂ. ೧೭೮)ದಲ್ಲಿ 'ಬಾವಿಸೆಟ್ಟಿಪೇಳೆ' ಸತ್ಯವಾಕ್ಯ. . . . . ಯಾಚಾರಿ ಬರೆದನೆಂದಿದೆ. ಆದ್ದರಿಂದ ಬಾವಿಸೆಟ್ಟಿಯನ್ನು ಶಾಸನದ ಕರ್ತೃವೆಂದೂ ಸತ್ಯವಾಕ್ಯ ಕಂಡರಿಸಿದಾತನೆಂದೂ ಹೇಳಬೇಕು.

೧೫ಕ್ಕೂ ಹೆಚ್ಚಿನ ಶಾಸನ ಕಂಡರಿಸಿದವರು ಈ ಸಂಪುಟದಲ್ಲಿ ಉಕ್ತವಾಗಿದ್ದಾರೆ. ಪುನ್ನಾಟ ಸ್ಕಂದವರ್ಮನ ಬಸವನಪುರ ತಾಮ್ರಶಾಸನ (ನಂ.ಗೂ. ೧೭೫) ಕುನಾಚಾರಿಯ ಲಿಖಿತ ಎಂದು ಹೇಳಿದೆ. ಆತನ ಹೆಸರನ್ನು ಗಮನಿಸಿ ಶಾಸನವನ್ನು ಆತ ಕಂಡರಿಸಿದನೆನ್ನಬೇಕು. ನೀತಿಮಾರ್ಗನ ಗಟ್ಟವಾಡಿ ಶಿಲಾಶಾಸನ (ನಂ ಗೂ. ೩೧೪) ಬರೆದಾತ ಬಿದಿಯಮ್ಮ. ಆದರೆ ಅದೇ ಗ್ರಾಮದ ತಾಮ್ರಶಾಸನ (ನಂ.ಗೂ. ೪೦೨)ವನ್ನು ಕಂಡರಿಸಿದಾತ ವಿಶ್ವಕರ್ಮಾಚಾರ್ಯ. ಇದರ ಕಾಲ ಕ್ರಿ.ಶ. ೯೦೪. ರಾಷ್ಟ್ರಕೂಟ ಕಂಬಯ್ಯನ ಶಕ ೭೩೦ (ಕ್ರಿ.ಶ. ೮೦೮)ರ ತಾಮ್ರಶಾಸನ (ನಂ.ಗೂ. ೨೭೮) ವನ್ನು ಬರೆದಾತ ಸಹ ವಿಶ್ವಕರ್ಮಾಚಾರ್ಯನೇ. ಆದರೆ ಇದು ಮೇಲಿನ ಶಾಸನಕ್ಕಿಂತ ಒಂದು ಶತಮಾನದಷ್ಟು ಹಿಂದಿನದು. ವಿಶ್ವಕರ್ಮ ಎಂಬುದು ಸಾಮಾನ್ಯವಾಗಿ ಅಕ್ಕಸಾಲಿಗರಿಗೆ ಸಂಬಂಧಿಸಿದಂತೆ ಬಳಕೆಯಲ್ಲಿರುವ ಪದ. ಆದರೆ ಯಾವ ಶಬ್ದಕೋಶದಲ್ಲಿಯೂ ಈ ಪದಕ್ಕೆ ಅಂತಹ ಅರ್ಥವನ್ನು ಕೊಟ್ಟಿಲ್ಲ. ಉದಹರಿಸಲಾದ ಶಾಸನಗಳಲ್ಲಿನ ವಿಶ್ವಕರ್ಮಾಚಾರ್ಯ ಎಂಬ ಮಾತಿಗೆ ಅಕ್ಕಸಾಲಿಗನೆಂಬ ಅರ್ಥವನ್ನು ನೀಡುವುದಾದರೆ, ಈ ಬಳಕೆಯ ಮಾತು ೮-೯ನೆಯ ಶತಮಾನಗಳಿಂದಲೂ ರೂಢಿಯಲ್ಲಿದೆಯೆಂದು ಹೇಳಬೇಕಾಗುತ್ತದೆ.

ನಂ.ಗೂ. ೨೯೪ನೆಯ ಶಾಸನವನ್ನು ಬರೆದಾತ ಇಮ್ಮಡಿ ಪೆಮ್ಮಡಿಯಾಚಾರಿ. ಇದು ಆತನ ಶೀಘ್ರಲಿಖಿತವೆಂದು ಶಾಸನದಲ್ಲಿ ಹೇಳಿದೆ. ಕ್ರಿ.ಶ. ೧೦೫೭ರ ಬೆಳತೂರ ಶಾಸನದ ರೂವಾರಿ ಮುನಿವರಸಿಂಗಾಚಾರಿ. ಈತನನ್ನು ಮುಚ್ಚರಿಪರ ಗಂಡನೆಂದು ವರ್ಣಿಸಲಾಗಿದೆ. ಮುನಿವರಸಿಂಗಾಚಾರಿ ಎಂಬ ಹೆಸರನ್ನೇ ಮುನಿದವರಿಗೆ ಸಿಂಹಪ್ರಾಯದಂತಿರುವ ಆಚಾರಿ ಎಂದು ಅರ್ಥೈಸಬಹುದು! ಗು.ಪೇ. ೧೦೨ನೆಯ ಶಾಸನವನ್ನು ಬರೆದಾತ ಮಾಣಿಕ್ಯಾಚಾರಿ. ಕ್ರಿ.ಶ. ೧೧೪೮ರ ಕೂಡ್ಲಾಪುರದ ಶಾಸನವನ್ನು (ನಂ.ಗೂ. ೩೨೨) ಕಂಡರಿಸಿದಾತ ಮಡೆಮಾಚಾರಿ. ಚಾಕೇನಹಳ್ಳಿ ತಾಮ್ರಶಾಸನ (ಹೆ.ಕೋ. ೮೯) ವನ್ನು ಕೊರೆದಾತ ತಿಪ್ಪಯಾಚಾರಿಯ ಮಗ ಭೈರವಾಚಾರಿ. ಇವರೆಲ್ಲಾ ಆಚಾರಿ ಎಂಬ ನಾಮಾಂತ್ಯಪದವನ್ನು ಪಡೆದಿರುವುದನ್ನು ಗಮನಿಸಿ, ಇವರೆಲ್ಲಾ ಅಕ್ಕಸಾಲಿಗರೆಂದು ಶಾಸನಗಳ ಕಣ್ಡರಣೆ ಇವರ ಒಂದು ವೃತ್ತಿ ಎಂದೂ ಊಹಿಸಬಹುದಾಗಿದೆ.

ಆದರೆ ಸೇನಬೋವ, ರಾಯಸ ಮುಂತಾದ ಅಧಿಕಾರಿಗಳು ಈ ಕಾರ್ಯವನ್ನು ಅಧಿಕೃತವಾಗಿ ನಿರ್ವಹಿಸುತ್ತಿದ್ದರು. •ಸೇನಬೋವ ಗ್ರಾಮಗಳಲ್ಲಿನ ಲೆಕ್ಕಿಗ, ಕಾರಕೂನ. ರಾಯಸ ಎಂದರೆ ಕಾರ್ಯದರ್ಶಿ. ಈ ಹುದ್ದೆ ೧೪ನೆಯ ಶತಮಾನದ ನಂತರ, ವಿಜಯನಗರದ ಅರಸರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು. ಸೇನಬೋವ ಅರಪರಸ (ಹೆ.ಕೋ. ೧೨೩–ಕ್ರಿ.ಶ. ೧೦೭೯), ರಾಯಸಂ ಲಿಂಗಪ್ಪಯ್ಯ (ನಂ.ಗೂ. ೧೨೨–ಕ್ರಿ.ಶ. ೧೪೯೯), ರಾಯಸಂ ವೈದ್ಯಲಿಂಗಯ್ಯ (ನಂ.ಗೂ. ೧೨೩–ಕ್ರಿ.ಶ. ೧೭೪೬)—ಸಂಪುಟದಲ್ಲಿ ಕಾಣಿಸಿಕೊಳ್ಳುವ ಇಂತಹ ಅಧಿಕಾರಿಗಳು.

ಅಸಗರ (ಹೆ.ಕೋ. ೪೮–ಕ್ರಿ.ಶ. ೧೨೫೫), ಸಿರಿಪತಿಯ ಮಗ ಪೊನ್ನಯ್ಯ (ಹೆ.ಕೋ. ೪೭–ಕ್ರಿ.ಶ. ೧೩೨೭) ಲಿಂಗಣ (ನಂ.ಗೂ. ೨೯೨–ಕ್ರಿ.ಶ. ೧೫೨೭) ಮುಂತಾದ ಇತರರೂ ಶಾಸನಗಳನ್ನು ಕೊರೆದಿದ್ದಾರೆ. ಆದರೆ ಇವರು ಅನುಭವವಿಲ್ಲದ ಸ್ಥಳಿಯ ಬರಹಗಾರರು. ಎಂತಲೇ ಇವರು ಬರೆದ ಶಾಸನಗಳಲ್ಲಿ ಅನೇಕ ಸ್ಖಾಲಿತ್ಯಗಳು ಕಂಡು ಬರುತ್ತವೆ.

ಆರ್ಥಿಕ–ಸಾಮಾಜಿಕ ವಿಷಯಗಳು

ಸಂಪುಟದ ಪದಸೂಚಿಯನ್ನು ಗಮನಿಸಿದಲ್ಲಿ ಅನೇಕ ವಿಧದ ತೆರಿಗೆಗಳ ಉಲ್ಲೇಖ ಶಾಸನಗಳಲ್ಲಿ ಮಾಡಲಾಗಿರುವುದನ್ನು ಕಾಣಬಹುದು. ಇದರಲ್ಲಿ ಬಹುಮಟ್ಟಿನವು ೧೨ನೆಯ ಶತಮಾನದ ನಂತರ ವಿಧಿಸಲ್ಪಟ್ಟುವೆಂಬುದನ್ನು ಸಹ ಅರಿಯಬಹುದಾಗಿದೆ. ಅನೇಕವು ವಿಜಯನಗರದ ಕಾಲದಲ್ಲಿ ವಿಧಿಸಲಾದವುಗಳು. ಈ ಕಾಲದಲ್ಲಿ ದಕ್ಷಿಣಭಾರತವೆಲ್ಲ ಬಹುಮಟ್ಟಿಗೆ ಏಕಚಕ್ರಾಧಿಪತ್ಯಕ್ಕೊಳಪಟ್ಟವು. ಅದುವರೆವಿಗೂ ಇಡೀ ದಕ್ಷಿಣಭಾರತವನ್ನು ಒಬ್ಬ ಅರಸನ, ಒಂದು ಅರಸು ಮನೆತನದ ಆಡಳಿತಕ್ಕೆ ಒಳಪಡಿಸುವ ಯಾವ ವಿಧವಾದ ಪ್ರಯತ್ನವನ್ನು ಮಾಡಿರಲಿಲ್ಲ. ಆದರೆ ಅಂದಿನ ರಾಜಕೀಯ ಪರಿಸ್ಥಿತಿಗಳು ಹಿಂದೂಧರ್ಮಕ್ಕೆ ಚ್ಯುತಿಯನ್ನುಂಟುಮಾಡುವಂತಹವುಗಳಾಗಿದ್ದು ಸ್ವಮತ, ಸ್ವಧರ್ಮ ರಕ್ಷಣೆಗಾಗಿಯಾದರೂ ಪ್ರಜೆಗಳಲ್ಲಿ ಏಕತೆಯ ಭಾವನೆ ಉದ್ದೀಪನಗೊಂಡಿತು. ಅದಕ್ಕಾಗಿ ಎಲ್ಲರೂ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯಯಿಸಿದರು. ಈ ಕಾರಣದಿಂದಲೇ ಅಂದಿನ ಅರಸರು ಸಹ ಸಾಮ್ರಾಜ್ಯದಲ್ಲಿ ಸಂಪನ್ಮೂಲಗಳನ್ನು ಹೆಚ್ಚಾಗಿ ಉಪಯೋಗಿಸಿಕೊಂಡು ಹೆಚ್ಚಿನ ಉತ್ಪಾದನೆಗೂ ಪ್ರೋತ್ಸಾಹವನ್ನು ಕೊಟ್ಟರು. ಆದರೆ ವಿಸ್ತಾರವಾದ ಸಾಮ್ರಾಜ್ಯವನ್ನು ಶತ್ರುಗಳಿಂದ ರಕ್ಷಿಸಲಿಕ್ಕಾಗಿಯೇ ಬಹಳಷ್ಟು ಹಣ ವೆಚ್ಚವಾಗುತ್ತಿತ್ತು. ಸಹಜವಾಗಿಯೇ ಅಂದಿನ ಸರ್ಕಾರ ರಾಜ್ಯದ ಬೊಕ್ಕಸವನ್ನು ತುಂಬಿಸಲೆಂದು ವಿವಿಧ ಮೂಲಗಳಿಂದಲೂ ಧನವನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿತ್ತು; ಎಂತಲೇ ಈ ಹೆಚ್ಚಿನ ವಿವಿಧ ರೀತಿಯ ಸುಂಕಗಳು.

ಇವುಗಳಲ್ಲಿ ಕೆಲವು ಸುಂಕಗಳ ವಿವರಣೆ ಸ್ಪಷ್ಟವಾಗಿ ಮಾಡಲಾಗಿದೆ. ಇನ್ನು ಕೆಲವುಗಳ ಅರ್ಥ ಆಗಿಲ್ಲ. 'ಕೋಜುಗಳತೆರಿಗೆ' ಏನು ಎಂಬುದು ಸ್ಪಷ್ಟವಾಗಿಲ್ಲ (ಗು.ಪೇ. ೧೩೬). ಇದೇ ಶಾಸನದಲ್ಲಿ ಗಣಾಚಾರಿತೆರಿಗೆಯ ಉಲ್ಲೇಖ ಸಹ ಬರುತ್ತದೆ. ಇದರ ಅರ್ಥ ಸಹ ಸ್ಪಷ್ಟವಾಗಿಲ್ಲ. 'ಗಣ' ಎಂದರೆ ಧಾರ್ಮಿಕ ಜನರ ಗುಂಪು. ವಿಶಿಷ್ಟವಾಗಿ ವಿಜಯನಗರ ಕಾಲದಲ್ಲಿ ಇದು ವೀರಶೈವ ಧರ್ಮಾನುಯಾಯಿಗಳಿಗೆ ಸಂಬಂಧಿಸಿದ ಪದವಾಗಿ ಕಂಡುಬರುತ್ತದೆ. 'ಗಣಾಚಾರಿ ಲಿಂಗಯ' ಎಂಬಾತ ಹೆ. ಕೋ. ೬೭ನೆಯ ಶಾಸನದಲ್ಲಿ ಕಾಣಿಸಿಕೊಂಡಿದ್ದಾನೆ. ಬೇರಂಬಾಡಿ ಶಾಸನದಲ್ಲಿ (ಗು.ಪೇ. ೨೧೬) ಹೊನ್ನಪ್ಪನೆಂಬ ಗಣಾಚಾರಿ (ವೀರಶೈವ ಗುರು ?)ಗೆ ಗ್ರಾಮವೊಂದನ್ನು ಕಾಳಾಂಚಿಯಾಗಿ ಕೊಡಲಾಯಿತೆಂದು ಹೇಳಿದೆ. 'ಗಣಾಚಾರಿ ದೆಜಿಗೆ' ಎಂಬುದು ಈ ವೀರಶೈವ ಯತಿಗಳು ಕೊಡಬೇಕಾದ ತೆರಿಗೆಯೇ? ಶಿವಪುರದ (ಗು. ಪೇ. ೧೭೬) ಶಾಸನದಲ್ಲಿ 'ಗಣಾಚಾರ' ಎಂದಷ್ಟೇ ಹೇಳಿದೆ. ಈ ಮಾತುಗಳ ಸ್ಪಷ್ಟವಾದ ಅರ್ಥ ತಿಳಿಯದು.

ಕ್ರಿ. ಶ. ೧೬ನೆಯ ಶತಮಾನದ ಕಗ್ಗಲೂರಿನ ನಂ. ಗೂ. ೩೪೧ನೆಯ ಶಾಸನದಲ್ಲಿ ಹುಲ್ಲನಹಳ್ಳಿಯ 'ಸುದಚಿನ್ನ'ಗಳು ಸೋಮೆಯದೇವರಿಗೆ ನೀಡಿದ ಆದಾಯಗಳ ವಿವರಗಳಿವೆ. ಈ ಶಾಸನವನ್ನು ಮಾನ್ಯದ ಓಲೆ ಎಂದು ಕರೆದಿದೆ. ಇಲ್ಲಿ ಕುಂಬಾಜಿ ಚಉರಿಗೆ, ಗಾಣಕಾವಲಿ, ಅಸಗ, ಮಾದೆಗ, ತೋಟ, ಕಬಿನ ಆಲಯ ಸುಂಕ ಇವುಗಳನ್ನು, ಪುರದ ಒಳಗಣ ಬಣಜಮತ ಇಷ್ಟನ್ನೂ ದೇವರಿಗೆ ಮಾನ್ಯವಾಗಿ ಬಿಟ್ಟುದಾಗಿ ಹೇಳಿದೆ. ಶಾಸನದಲ್ಲಿ ಉಕ್ತವಾದ ಮಾದೆಗ, ಬಣಜಮತ ಇವುಗಳ ಅರ್ಥವು ಸಹ ಸ್ಪಷ್ಟವಾಗಿಲ್ಲ. ಅಸಗ ಎಂಬುದು ಅಗಸ ಪದದ ರೂಪ. ಅಸಗರ (ಅಗಸರ) ಮೇಲೆ ತೆರಿಗೆಯನ್ನು ಹಾಕುತ್ತಿದ್ದುದು ತಿಳಿದಿದೆ. ಗು. ಪೇ. ೧೩೪ನೆಯ ತ್ರಿಯಂಬಕಪುರದ ಶಾಸನದಲ್ಲಿ ಇಂತಹ ಹಲವಾರು ವೃತ್ತಿಕಾರರ ಮೇಲೆ ತೆರಿಗೆಗಳನ್ನು ಹಾಕಿದುದರ ಉಲ್ಲೇಖವಿದೆ. ಬೋಗಾಜಿದೆರಿಗೆ, ದಾಸುಗಳ ತೆರಿಗೆ, ಅಸಗರ ತೆರಿಗೆ, ನಾಯಿಂದರ ತೆರಿಗೆ, ಕುಂಬಾರ ತೆರಿಗೆ, ಮಗ್ಗ ಸುಂಕ, ಮಾದಾಜಿಕೆ– ಇವುಗಳು ಶಾಸನದಲ್ಲಿ ಉಕ್ತವಾದ ಕೆಲವು ತೆರಿಗೆಗಳು. ಇದರಲ್ಲಿ ವೋಜುಗಳ ತೆರಿಗೆ ಎಂಬುದು ಸಹ ಕಾಣಿಸಿಕೊಂಡಿದೆ. ಇದು ವೋಜ ಎಂದರೆ ಉಪಾಧ್ಯಾಯರು ಕೊಡಬೇಕಾದ ತೆರಿಗೆಯೇ? ವೋಜ ಎಂಬ ಪದಕ್ಕೆ ಅಕ್ಕಸಾಲಿಗ, ಕಮ್ಮಾರ, ಬಡಗಿ ಎಂಬ ಅರ್ಥಗಳೂ ಇವೆ. ಆದರೆ ಇದೇ ಶಾಸನದಲ್ಲಿ ಬೋಗಾರರು, ಆಹಳರು ಕೊಡಬೇಕಾದ ತೆರಿಗೆಗಳ ಪ್ರಸ್ತಾಪ

ಇರುವುದರಿಂದ ಇವರಿಗೆ ಅನ್ವಯಿಸಿದಂತೆ ಮತ್ತೊಮ್ಮೆ ವೋಜುಗಳ ತೆರಿಗೆ ಎಂದು ಹೇಳುವ ಆವಶ್ಯಕತೆ ಇರಲಿಲ್ಲ. ಆದ್ದರಿಂದ ಈ ವೋಜು (ಓಜು) ಗಳು ಉಪಾಧ್ಯಾಯರೋ ಅಥವಾ ವೋಜ ಎಂಬ ನಾಮಾಂತ್ಯವನ್ನು ಪಡೆದ ಕಲ್ಕುಟಿಗ (ರೂವಾರಿ) ರೋ ಆಗಿರಬಹುದು.

ಈ ತೆರಿಗೆಗಳನ್ನು ಪ್ರಜೆಗಳಿಂದ ವಸೂಲು ಮಾಡುವುದರಲ್ಲಿ ಅಧಿಕಾರಿಗಳು ಬಹಳ ಕಟ್ಟುನಿಟ್ಟಾಗಿರುತ್ತಿದ್ದ ರೆಂಬುದು ನಿಜ. ಆದರೆ ಅನೇಕ ವೇಳೆ ಈ ತೆರಿಗೆಗಳು ಬಹಳವಾಗಿದ್ದು ಯಾವುದು ಸಕ್ರಮ ಯಾವುದು ಅಕ್ರಮ ಎಂಬುದೇ ತಿಳಿಯಲಾರದಾಗಿತ್ತು. ಈ ಪರಿಸ್ಥಿತಿಯ ದುರ್ಲಾಭಗಳನ್ನು ಅಂದಿನ ಅಧಿಕಾರಿಗಳು ಪಡೆಯುತ್ತಿದ್ದರೆಂಬುದಕ್ಕೆ ನಿದರ್ಶನಗಳಿವೆ. ಕ್ರಿ. ಶ. ೧೫೦೪ನೆಯ ವರ್ಷದ (ಗು. ಪೇ. ೬) ಶಾಸನವು ವಿಜಯಾಪುರದ ವಿಜಯನಾರಾಯಣ ದೇವಾಲಯದ ಪಾರುಪತ್ಯಗಾರನು ಹೀಗೆ ಅಕ್ರಮವಾಗಿ ತೆರಿಗೆಯನ್ನು ಪಡೆದ ವಿಷಯಕ್ಕೆ ಸಂಬಂಧಿಸಿದುದಾಗಿದೆ. ೨೦ ರೇಖೆಗಳಷ್ಟು ರಿಯಾಯಿತಿಯನ್ನು ಪಡೆದಿದ್ದ ಕೊಡಗೆದೇಜೆಯನ್ನು ವಿಜಯಾಪುರದ ಕೆರೆಯ ಕೆಳಗಣ ಭೂಮಿ ಯಿಂದ ಅನ್ಯಾಯವಾಗಿ ಪಡೆಯಲಾಗಿತ್ತು. ಆದರೆ ಈ ವಿಷಯವನ್ನು ತಿಳಿದ ವಿಜಯಾಪುರದ ಸೀಮೆಯ ಅಧಿಕಾರಿಯಾದ ರುಸ್ತುಂಖಾನ ವೊಡೆಯನು ಈ ಅಕ್ರಮವನ್ನು ಪರಿಪಡಿಸಿದನು.

ಸದಾಶಿವರಾಯನ ಆಳಿಕೆಯ ಕಾಲದ ೧೫೪೬ನೆಯ ವರ್ಷದ ಶಾಸನ ಗು. ಪೇ. ೨೩ ಹಲಗೆವೊಡೆಯನಿಗೆ ಮುಸಹಳ್ಳಿ ಮತ್ತು ಅದಕ್ಕೆ ಸೇರಿದ ಎರಡು ಉಪಗ್ರಾಮಗಳನ್ನು ಸುತ್ತಿಗುತ್ತಿಗೆಯಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. 'ಸುತ್ತಿಗುತ್ತಗೆ' ಎಂಬುದು ವರ್ಷಕ್ಕೊಮ್ಮೆ ನಿಗದಿಗೊಳಿಸಲ್ಪಟ್ಟ ಗುತ್ತಿಗೆಯ ಹಣಕ್ಕೆ ಕೇವಲ ಒಂದೊಂದು ವರ್ಷಕ್ಕೆ ಮಾತ್ರ ಅನ್ವಯಿಸುವಂತಹ ಹಿಡುವಳಿಯ ಪದ್ಧತಿ ಎಂದು ತೋರುತ್ತದೆ. ಈ ಶಾಸನದಲ್ಲಿ ಸುತ್ತಿಗುತ್ತಿಗೆಯ ಹಣ ೪೦ ಗದ್ಯಾಣಗಳೆಂದು ನಿರ್ಣಯಿಸಿ ಕಾಣಿಕೆ ಮತ್ತು ಬೆಡಿಗೆಗಳಿಂದ ಅದು ವಿನಾಯಿತಿ ಪಡೆದಿತ್ತೆಂದು ಹೇಳಿದೆ. ರಾಮರಾಜ ಮಹಾಅರಸನ ಅಪ್ಪಣೆಯ ಮೇರೆಗೆ ಈ ದತ್ತಿಯನ್ನು ಕೊಟ್ಟಾತ ಬಹುಶಃ ಮೇಲಿನ ಶಾಸನದಲ್ಲಿ ಉಕ್ತನಾದ ರುಸ್ತುಂಖಾನನೇ ಆಗಿರಬಹುದು. ಮೂರು ವರ್ಷಗಳ ನಂತರ ಕ್ರಿ. ಶ. ೧೫೪೯ರಲ್ಲಿ ಗೋವಿಂದರಾಜನು ಇದೇ ಹಲಗೆ ವೊಡೆಯನಿಗೆ ಭೂಮಿಯೊಂದನ್ನು ಗುತ್ತಿಗೆಗೆ ಕೊಟ್ಟಿದ್ದನೆಂಬುದನ್ನು ಗು. ಪೇ. ೪೬ನೆಯ ಶಾಸನ ತಿಳಿಸುತ್ತದೆ.

ಸು. ೧೬ನೆಯ ಶತಮಾನಕ್ಕೆ ಸೇರಿದ ಗು. ಪೇ. ೮೬ನೆಯ ಶಾಸನದಲ್ಲಿ ಕೋಣನೂರಿನ ಬಸವೈಯನ ಮಗನಾದ ವೀರೈಯನಿಗೆ ಪುರ ಎಂಬ ಗ್ರಾಮವನ್ನು ಗುತ್ತಿಗೆಗೆ ಕೊಡಲಾಯಿತೆಂದು ಹೇಳಿದೆ. ಈ ಗ್ರಾಮ ಬಹುದಿನಗಳಿಂದ ಸಾಗುವಳಿ ಯಾಗದೆ ಪಾಳುಬಿದ್ದಿದ್ದು ಪೊದೆ, ಕುರುಚಲು ಗಿಡಗಳಿಂದ ತುಂಬಿತ್ತು. ಗುತ್ತಿಗೆಗೆ ಪಡೆದಾತನು ಆ ಭೂಮಿಯನ್ನು ಸ್ವಚ್ಛಗೊಳಿಸಿ, ಸರಿಪಡಿಸಿ ಪುನಃ ಸಾಗುವಳಿ ಮಾಡುವ ಸ್ಥಿತಿಗೆ ತರಬೇಕೆಂಬ ಒಂದು ಷರತ್ತನ್ನೂ ಸಹ ವಿಧಿಸಲಾಗಿತ್ತು. 'ಮರಿಯಾದೆ' ಎಂದು ಆ ಭೂಮಿಗೆ ನಿಗದಿಯಾದ ಮೊತ್ತವನ್ನು ಸಲ್ಲಿಸಿದ ಮೇಲೆ ಆ ಗ್ರಾಮದ ಹುಟ್ಟುವಳಿ ಹಾಗೂ ಇತರ ಹಕ್ಕುಗಳನ್ನು ಆತನು ಅನುಭವಿಸಬಹುದಾಗಿತ್ತು. ದುರದೃಷ್ಟವಶಾತ್ ಶಾಸನದ ಪೂರ್ಣವಿವರಗಳು ಲಭ್ಯವಾಗಿಲ್ಲ.

ಕ್ರಿ. ಶ. ೧೫೩೩ನೆಯ ವರ್ಷದ ಗು. ಪೇ. ೧೩೭ನೆಯ ತ್ರಿಯಂಬಕಪುರದ ಶಾಸನವನ್ನು ಕ್ರಯಶಾಸನವೆಂದು ವರ್ಣಿಸಲಾಗಿದೆ. ತ್ರಿಯಂಬಕದೇವರ ದೇವಾಲಯದ ಸ್ಥಾನಿಕನಾದ ನಂಜಿನಾಥಜೋಯಿಸನ ಮಗ ಅಯ್ಯಪನು ಕಮಲಾಪುರ ಅಗ್ರಹಾರವೆಂಬ ಪ್ರತಿನಾಮವನ್ನು ಪಡೆದಿದ್ದ ಹುಲ್ಲಾಣ ಗ್ರಾಮದಲ್ಲಿದ್ದ ತನ್ನ ಭೂಮಿಯನ್ನು ಆಗ ಪ್ರಚಲಿತವಾಗಿದ್ದ ಭೂಮಿಯ ಬೆಲೆಯಾದ ೨೫೦ ವರಹಗಳಿಗೆ ಮಾರಿದನು. ಹೀಗೆ ಮಾರಿದ ಭೂಮಿಯಲ್ಲಿ ತಾನು ಸರ್ವಮಾನ್ಯವಾಗಿ ಪಡೆದ ತೋಟ, ಮತ್ತು ಚಿಕ್ಕಪ್ಪ ಹಾಗೂ ಗೋಪಣರಿಂದ ೧೦೦ ವರಹಗಳಿಗೆ ಕೊಂಡಿದ್ದ ಭೂಮಿಯೂ ಸೇರಿವೆ. ರಾಮಾಭಟ್ಟಯ್ಯನವರ ಕಾರ್ಯಕರ್ತನೂ ಹಾಗೂ ದೇವಾಲಯದ ಅಧಿಕಾರಿಯೂ ಆದ ಭಾಸ್ಕರಯ್ಯನು ಗುರುಮೂರ್ತಿ ತ್ರಿಯಂಬಕದೇವರ ದೇವಾಲಯಕ್ಕಾಗಿ ಈ ಭೂಮಿಯನ್ನು ಕೊಂಡನು.

ದೇವರ ಭಂಡಾರದಿಂದ ರೈತರಿಗೆ ಸಾಲವಾಗಿ ಕೊಟ್ಟ ೧೫೦ ಗದ್ಯಾಣ ಹೊನ್ನಿಗೆ ಬರುವ ಬಡ್ಡಿಯಿಂದ ರಾಮನಾಥ ದೇವರಿಗೆ ಪ್ರತಿದಿನ ಸಲ್ಲಬೇಕಾದ ಪೂಜೆ, ನೈವೇದ್ಯ, ನಂದಾದೀವಿಗೆ ಇತ್ಯಾದಿಗಳನ್ನು ನಡೆಸಬೇಕೆಂದು ಮಹಾಜನರು ಒಪ್ಪಿ ಬರೆಸಿದ ಗು. ಪೇ. ೧೬ನೆಯ ಶಾಸನ ಸು. ೧೪ನೆಯ ಶತಮಾನಕ್ಕೆ ಸೇರಿದುದಾಗಿದೆ. ದೇವಸ್ಥಾನದ ಭಂಡಾರದ ಹಣವನ್ನು ಬಡ್ಡಿಯಮೇಲೆ ಸಾಲವಾಗಿ ಕೊಡುವುದರ ಮೂಲಕ ಆ ಭಂಡಾರವನ್ನು ಲಾಭಕರವಾಗಿ ಉಪಯೋಗಿಸುವ ಅಧಿಕಾರ ಮಹಾಜನರಿಗಿತ್ತೆಂದು ಇದರಿಂದ ತಿಳಿಯಬಹುದು. ಸಾಲವನ್ನು ಪಡೆಯುತ್ತಿದ್ದವರು ದೇವಾಲಯದ ಭೂಮಿಯನ್ನು

ಸಾಗುವಳಿ ಮಾಡುತ್ತಿದ್ದ ರೈತರೇ. ಆದ್ದರಿಂದ ಕೊಟ್ಟ ಸಾಲಕ್ಕೆ ಭದ್ರತೆಯೂ ಇತ್ತು. ಶಾಸನದಲ್ಲಿ ಬಡ್ಡಿಯ ದರ ಎಷ್ಟೆಂಬುದನ್ನು ಮಾತ್ರ ಸ್ಪಷ್ಟವಾಗಿ ವ್ಯಕ್ತಪಡಿಸಿಲ್ಲ.

ಹೊಳಲವಾಡಿಯ ಶಾಸನ (ನಂ ಗೂ. ೧೮೮) ಸು. ೧೦ನೆಯ ಶತಮಾನಕ್ಕೆ ಸೇರಿದುದಾಗಿದೆ. ಈ ಶಾಸನದ ಕಲ್ಲಿನ ಇನ್ನೊಂದು ಭಾಗದಲ್ಲಿ ೮ನೆಯ ಶತಮಾನದ ಭೂದಾನ ಶಾಸನವೊಂದಿದೆ. ಪ್ರಸ್ತುತ ಶಾಸನ ಒಂದು ವೀರಗಲ್ಲು. ಪಳ್ಳಿಕಾಲೆ ಚೆಂದಯ್ಯನು ೧೦ ಕೊಳಗ ಭೂಮಿಯನ್ನು ದಾನವಾಗಿ ಬಿಟ್ಟನೆಂದು ಹೇಳಿದೆ. 'ಬೆನಯಿತಗಱಿಗ'ನ ಮಗ ಎಱೆಯನು ತಲೆಗಡಿಸಿಕೊಂಡನೆಂದು ಶಾಸನದಲ್ಲಿ ಹೇಳಿದೆ. ಇದಕ್ಕೆ ಕಾರಣಗಳೇನೆಂಬುದನ್ನು ಸೂಚಿಸಿಲ್ಲ. ದಾನ ಪಡೆದಾತ ಯಾರು ಎಂಬುದು ಸಹ ಗೊತ್ತಿಲ್ಲ.

ಬೆಳತೂರಿನ ದೇಕಬ್ಬೆಯ ಶಾಸನದ ಪ್ರಸ್ತಾಪ ಈಗಾಗಲೇ ಮಾಡಲಾಗಿದೆ. ಇದೇ ಹೆಗ್ಗಡದೇವನಕೋಟೆ ತಾಲ್ಲೂಕಿನ ಹೆಬ್ಬಲಗುಪ್ಪೆಯ ಶಾಸನ (ಹೆ. ಕೋ. ೬೧)ದ ಕಾಲವನ್ನು ಕ್ರಿ. ಶ. ೧೦೮೮-೮೯ ಎಂದು ನಿರ್ಧರಿಸಬಹುದು. ಶಾಸನದಲ್ಲಿ 'ನವಿಲೆನಾಡ ನಾಱ್ಗಾವುಂಡ ಪೆರ್ಮ್ಮಯಲ ಅಟಗಿಯ ಚೋಟನು ಆತನ ಮಗ ನವಲಾಶಿರಾಜ ಸತ್ತಡೆ ಹಾಗೂ ಆತನ ಎಳೆತಿ ತಪರಿಯ ಕಮ್ಮರಿ ಉಯಿದು ಸತ್ತಡೆ' ಅವರಿಗಾಗಿ, ಅಂದರೆ ಅವರ ಪುಣ್ಯಕ್ಕಾಗಿ, ಭೂಮಿದಾನವನ್ನು ಮಾಡಿದನೆಂದು ಹೇಳಿದೆ. ಇಲ್ಲಿ 'ಎಳೆತಿ' ಎಂಬ ಪದಕ್ಕೆ ಹೆಂಡತಿ ಎಂಬ ಅರ್ಥವನ್ನು ಕೊಡಬಹುದೇನೋ. ಈಕೆ 'ಉಯಿದು ಸತ್ತಡೆ' ಎಂದಿದೆ. ಕಿಚ್ಚಿನಲ್ಲಿ ಹಾರಿ ಸತ್ತಳೆಂದು ಇದನ್ನು ಅರ್ಥೈಸಬಹುದೇ ?

ಗು. ಪೇ. ೭೪ನೆಯ ಶಾಸನ ಕುತೂಹಲಕಾರಿಯಾಗಿದೆ. ಕೇತೆಯದಣ್ಣಾಯಕನ ಮಗನ ನಾಮಕರಣವನ್ನು ನಡೆಸಿ ಕೊಟ್ಟುದಕ್ಕಾಗಿ ನಂಬಿ (ಅರ್ಚಕ) ಯೊಬ್ಬನು ಭೂಮಿಯನ್ನು ಪಡೆದ ವಿಷಯವನ್ನು ಶಾಸನ ತಿಳಿಸುತ್ತದೆ. ಈ ಕೇತೆಯ ದಂಡನಾಯಕ ಹೊಯ್ಸಳ ಮುಮ್ಮಡಿಬಲ್ಲಾಳನ ದಂಡನಾಯಕರುಗಳಲ್ಲಿ ಒಬ್ಬನಾಗಿರಬಹುದು. ಶಾಸನದ ಕಾಲ ಕ್ರಿ. ಶ. ೧೩೩೮.

ನಂ.ಗೂ. ೨೦೮ನೆಯ ಶಾಸನ ಆರವೀಡು ಮನೆತನದ ವೆಂಕಟಪತಿದೇವ (I) ನದು. ಈತನ ಮಹಾಮಂಡಲೇಶ್ವರನಾದ ರಾಮರಾಜು ತಿರುಮಲರಾಯ ಮಹಾಅರಸುಗಳವರು ಹದಿನಾಡ ರಾಮರಾಯ ನಾಯಕನಿಗೆ ತಾಯೂರು ಮುಂತಾದ ಮೂಗೂರು ಸೀಮೆಯ ಹದಿನೈದು ಗ್ರಾಮಗಳನ್ನು ಕೊಡಗೆಯಾಗಿ ಕೊಟ್ಟನು. ಇದಕ್ಕೆ ಕಾರಣ "ನೀನೂ ನಿನ್ನ ಮಗಂನೂ ನಂಮ ಹೆಸರನೂ ಕರೆಯಲಾಗಿ ನಾವು ನಂಮ ಹೆಸರನೂ ಕೊಟ್ಟು ನಮ್ಮ ಹೆಸರ ತಿರಮಲರಾಜ ನಾಯಕಗೆ ಪಲಕಿ ಕೊಡಗಿಯಾಗಿ ಕೊಟ್ಟದು" ಎಂದು ಹೇಳಿದೆ. ದಾನ ಸ್ವೀಕರಿಸಿದವರು ರಾಮರಾಯ ನಾಯಕ ಹಾಗೂ ಆತನ ಮಗ ತಿರುಮಲರಾಜ ನಾಯಕ. ಇದರಿಂದ ದಾನಿಯ ಹೆಸರಿನ ಮೊದಲ ಭಾಗವಾದ ರಾಮರಾಜು ಎಂಬುದು ಆತನ ತಂದೆಯ ಹೆಸರಾಗಿದ್ದಂತೆ ತೋರುತ್ತದೆ. ದಾನ ಸ್ವೀಕರಿಸಿದ ತಂದೆಯು ತನ್ನ ಹೆಸರಿನ್ನು ರಾಮರಾಯ ನಾಯಕನೆಂದಿಟ್ಟುಕೊಂಡ. ತಿರುಮಲರಾಜನಾಯಕ ಮಹಾಮಂಡಲೇಶ್ವರನ ಹೆಸರು. ಆ ಹೆಸರನ್ನು ಇಟ್ಟುಕೊಂಡ ಮಗನಾದ ತಿರುಮಲರಾಜ ನಾಯಕನಿಗೆ ವಿಶೇಷವಾಗಿ ಪಲಕಿಯ ಉಂಬಳಿಗೆ ಗೊಡಗೆಯನ್ನು ಕೊಡಲಾಯಿತೆಂದು ಶಾಸನದಲ್ಲಿ ಹೇಳಿದೆ. ಈ ತಿರುಮಲರಾಜ ನಾಯಕ ಅರಸನಾದ ವೆಂಕಟಪತಿಯ ಹಿರಿಯ ಸೋದರ ರಾಮನ ಜ್ಯೇಷ್ಠ ಪುತ್ರ ತಿರುಮಲ.

ಕ್ರಿ. ಶ. ೧೩೭೨ರ ಗು. ಪೇ. ೧೨ನೆಯ ಶಾಸನದಲ್ಲಿ ಪ್ರಸನ್ನ ವಿಜಯಾಪುರದ ಅಗ್ರಹಾರದ ಮಹಾಜನಗಳು ರಾಮನಾಥ ದೇವಾಲಯದ ಪಾತ್ರಭೋಗಕ್ಕಾಗಿ (ನರ್ತಕಿಯರ ಸೇವೆ) ೩೦ ಗದ್ಯಾಣಗಳನ್ನು ದಾನವಾಗಿ ಕೊಟ್ಟ ವಿಷಯವಿದೆ. ಶಾಸನದ ವಿವರ ಸ್ಪಷ್ಟವಾಗಿಲ್ಲದಿದ್ದರೂ ಪ್ರತಿಯೊಂದು ಒಕ್ಕಲೂ ಅರ್ಧವರಹ ಮತ್ತು ಪ್ರತಿಯೊಂದು ಗದ್ದೆಗೂ ಗೊತ್ತಾದ ಪರಿಮಾಣದ ಧಾನ್ಯವನ್ನು ಕೊಡುವಂತೆ ನಿಗದಿಪಡಿಸಿದ್ದುದಾಗಿ ತೋರುತ್ತದೆ. ಈ ಉದ್ದೇಶಕ್ಕಾಗಿ ತೆಗೆದಿಡುತ್ತಿದ್ದ ಕಂದಾಯವೆಂದು ಇದನ್ನು ಪರಿಗಣಿಸಲಾಗಿತ್ತು. ಇದೇ ಊರಿನಲ್ಲಿ ದೊರೆತ ಇದೇ ಕಾಲದ ಗು.ಪೇ. ೧೩ ನೆಯ ಶಾಸನವು ನಾಗವ್ವೆಯ ಮಗನಾದ ಹಿರಿಯ ರಾಮಣ್ಣನು ಕೇತವ್ವೆಯನ್ನು ದೇವಾಲಯದ ಪಾತ್ರವೆಂದು ರಾಮನಾಥದೇವರಿಗೆ ಪಾತ್ರಭೋಗವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. 'ವೀರ ಪಂಚಾಳ' ಎಂದರೆ ಅಕ್ಕಸಾಲಿಗರು, ಬಡಗಿಗಳು, ಕಮ್ಮಾರರು, ಕಂಚುಗಾರರು, ಕಲ್ಕುಟಿಗರು ಮುಂತಾದ ಕುಶಲ ಕಲೆಗಾರರ ಒಕ್ಕೂಟವು ಬಡಗಿಗಳು, ಅಕ್ಕಸಾಲಿಗರು, ಕಂಚುಗಾರರು ಪಾತ್ರದ ಜೀವಿತಕ್ಕಾಗಿ ವರ್ಷಂಪ್ರತಿ ತೆರಬೇಕಾದ ಹಣವನ್ನು ನಿಗದಿಗೊಳಿಸಿತ್ತು. ಮೇಲೆ ಹೇಳಿದ (ಗು. ಪೇ. ೧೨) ಶಾಸನಕ್ಕಿಂತ ಒಂದು ವಾರದ ಈಚೆಗಷ್ಟೆ ಈ ಶಾಸನವನ್ನು ಹಾಕಿಸಿದೆ. ದೇವಾಲಯದಲ್ಲಿ ಪಾತ್ರ

ಭೋಗದ ವ್ಯವಸ್ಥೆ ಆಗಬೇಕೆಂಬುದಕ್ಕೆ ಮೊದಲು ಒಪ್ಪಿಗೆಯಾಗಿದ್ದು ಕೇತವ್ವೆ ಆ ದೇವಾಲಯಕ್ಕೆ ನಿಯಮಿತಳಾಗಿರಬೇಕು ಮತ್ತು ಆಕೆಯ ಜೀವನ ನಿರ್ವಹಣೆಯ ವೆಚ್ಚವನ್ನು ವೀರಪಾಂಚಾಳರು ಕೊಡುವುದಾಗಿ ಒಪ್ಪಿಕೊಂಡಿರಬೇಕು.

ಛಂದಸ್ಸು[1]

ಈ ಶಾಸನ ಸಂಪುಟದಲ್ಲಿ ಸಂಗ್ರಹಿತವಾಗಿರುವ ಪ್ರತಿ ಶಾಸನದಲ್ಲೂ—ಅದು ಪದ್ಯಶಾಸನವಾಗಿರಲಿ ಅಥವಾ ಪದ್ಯ ಗದ್ಯಗಳು ಕೂಡಿ ಬರುವ ಶಾಸನವಾಗಿರಲಿ—ಕಂಡುಬರುವ ಪದ್ಯಗಳ ಛಂದಸ್ಸುಗಳನ್ನು ಗುರುತಿಸಿ ಆಯಾ ಶಾಸನದ ಅಡಿ ಟಿಪ್ಪಣಿಯಲ್ಲಿ ತೋರಿಸಿದೆ. ಕನ್ನಡ ನಾಡಿನ ಶಾಸನ ಕವಿತ್ವದಲ್ಲಿ ಛಂದಸ್ಸು ವಹಿಸಿರುವ ಪಾತ್ರ ಯಾವ ರೀತಿಯದು, ಅಲ್ಲಿ ಯಾವ ಪ್ರಮಾಣದಲ್ಲಿ ಹೇಗೆ ವಿವಿಧ ಛಂದಸ್ಸುಗಳು ಹಂಚಿಕೆಯಾಗಿವೆ, ಅಂತಹ ಹಂಚಿಕೆಯಲ್ಲಿ ಕಂಡುಬರುವ ಕವಿಗಳ ವಿದ್ವತ್ತಿನ ದೃಷ್ಟಿ ಯಾವ ತೆರನಾದ್ದು ಈ ಮುಂತಾದುವನ್ನು ತಿಳಿಯುವುದಾದರೆ ಶಾಸನಗಳ ಸಾಹಿತ್ಯಿಕ ಮೌಲ್ಯವನ್ನು ಗುರುತಿಸುವ ಕೆಲಸ ಸ್ವಲ್ಪಮಟ್ಟಿಗೆ ಸುಲಭವಾಗುತ್ತದೆ ಎನ್ನುವುದೇ ಇದರ ಉದ್ದೇಶ. ಅಲ್ಲದೆ ಕನ್ನಡ ಭಾಷೆಯ ರಚನೆಯ ಮೇಲೆ ಸಂಸ್ಕೃತ ಭಾಷೆ ಛಂದಸ್ಸುಗಳು ಉಂಟುಮಾಡಿರುವ ಪ್ರಭಾವವನ್ನೂ ಕನ್ನಡ ಛಂದಸ್ಸುಗಳು—ಎರವಲು ಕೊಂಡ ಮತ್ತು ದೇಶೀಯವಾದ—ಐತಿಹಾಸಿಕ ಬೆಳೆವಣಿಗೆಯ ಮಜಲುಗಳನ್ನೂ ಗುರುತಿಸುವುದಕ್ಕೆ ಕೂಡ ಇದರಿಂದ ತುಂಬ ಅನುಕೂಲವಾಗುತ್ತದೆ. ಸಂಸ್ಕೃತ ಕನ್ನಡ ಶಾಸನಗಳ ಛಂದೋವೈವಿಧ್ಯವನ್ನು ಸ್ವತಂತ್ರವಾಗಿಯೂ ತೌಲನಿಕ ವಾಗಿಯೂ ಅಧ್ಯಯನಮಾಡುವುದೂ ಫಲಕಾರಿಯಾದ್ದೇ. ವಾಸ್ತವವಾಗಿ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಶಾಸನ ಛಂದಸ್ಸಿನ ಅಧ್ಯಯನವಿರಲಿ, ಛಂದಸ್ಸಿನ ವ್ಯಾಪಕವಾದ ಅಧ್ಯಯನವೇ ಇನ್ನೂ ನಡೆದಿಲ್ಲ. ಭಾವವಾಹಿಯಾದ ಭಾಷೆ ನಿಯತ ಛಂದಸ್ಸಿನ ಚೌಕಟ್ಟಿನಲ್ಲಿ ಹೇಗೆ ಅಪೂರ್ವವಾಗಿ ಹೆಣೆದುಕೊಳ್ಳುತ್ತದೆ ಎನ್ನುವ ಕವಿಕಾರ್ಯ ರಹಸ್ಯದ ವಿಶ್ಲೇಷಣೆ ಎಷ್ಟು ಚೆನ್ನಾಗಿ ನಡೆದರೆ ಪ್ರಾಚೀನಕವಿತ್ವ ಅಷ್ಟು ಚೆನ್ನಾಗಿ ಅರ್ಥವಾಗುತ್ತದೆ. ತೆಲುಗು ಭಾಷೆಯಲ್ಲಿ ಪ್ರಾಚೀನ ಮಹಾಕಾವ್ಯದ ಹಾಗೂ ಶಾಸನ ಸಾಹಿತ್ಯದ ಛಂದಸ್ಸಿನ ಅಭ್ಯಾಸ ಕೆಲಮಟ್ಟಿಗೆ ನಡೆದಿದೆ. ಅಂಥ ಪ್ರಯತ್ನ ಕನ್ನಡ ಭಾಷೆಯಲ್ಲಿ ಕೂಡ ನಡೆಯುವುದಕ್ಕೆ ಹೇರಳವಾದ ಉಪಪತ್ತಿಯುಂಟು.

ಇಲ್ಲಿ ಪದ್ಯಗಳ ಛಂದಸ್ಸುಗಳನ್ನು ಗುರುತಿಸುವಾಗ ಅನುಸರಿಸಿರುವ ಕ್ರಮಗಳು ಈ ರೀತಿಯಾಗಿವೆ: ಛಂದಸ್ಸುಗಳ ಹೆಸರುಗಳನ್ನು ಪ್ರೊ. ಎಚ್. ಡಿ. ವೇಲಣಕರ್ ಅವರು ಸಂಪಾದಿಸಿರುವ 'ಜಯದಾಮನ್' ಗ್ರಂಥದ (Haritosha samiti, Bombay, 1949) ಮತ್ತು ಹೇಮಚಂದ್ರಕೃತ 'ಛಂದೋನುಶಾಸನ'ದ (Singhi Jain Series-No. 49, Bombay, 1961) ಕೊನೆಗೆ ಕೊಟ್ಟಿರುವ ವಿಸ್ತಾರವಾದ ಪರಿಶಿಷ್ಟಗಳನ್ನು ಪರಿಶೀಲಿಸಿ ಆಯ್ದುಕೊಂಡಿದೆ. ಕೆಲವೊಮ್ಮೆ—ಮುಖ್ಯವಾಗಿ ಅಚ್ಚಕನ್ನಡ ವೃತ್ತಗಳ ವಿಷಯದಲ್ಲಿ—ನಾಗವರ್ಮನ (ಕ್ರಿ.ಶ.ಸು. ೯೮೦) ಕನ್ನಡ 'ಛಂದೋಂಬುಧಿ'ಯನ್ನೂ ಉಪಯೋಗಿಸಿಕೊಂಡಿದೆ. ಆದ್ದರಿಂದ ಆಯಾ ಛಂದಸ್ಸಿನ ಹೆಸರು, ಲಕ್ಷಣ ಇತ್ಯಾದಿ ವಿವರಗಳು ಯಾವ ಛಂದೋ ಗ್ರಂಥದಲ್ಲಿ ಎಲ್ಲಿ ಬಂದಿವೆಯೆಂಬುದನ್ನು ತಿಳಿಯಬೇಕಾದರೆ ಮೊದಲೆರಡು ಆಕರಗಳ ಪರಿಶಿಷ್ಟಗಳನ್ನೂ ಕನ್ನಡ 'ಛಂದೋಂಬುಧಿ'ಯನ್ನೂ ಪರಿಶೀಲಿಸಬೇಕಾಗುತ್ತದೆ.

೨. ಮೊದಲೆರಡು ಆಕರಗಳನ್ನು ಉಪಯೋಗಿಸುವಾಗ, ಸಾಮಾನ್ಯವಾಗಿ ಪಿಂಗಲ ಮುಂತಾದ ಪ್ರಾಚೀನ ಛಂದಶ್ಶಾಸ್ತ್ರಕಾರರು ಕೊಡುವ ಹೆಸರುಗಳಿಗೆ ಆದ್ಯತೆ ಕೊಟ್ಟಿದೆ; ಪಿಂಗಲನ ಛಂದಸ್ಸೂತ್ರಗಳಲ್ಲಿ ದೊರೆಯದಿದ್ದಾಗ ಮಾತ್ರ ಕಾಲಾನುಕ್ರಮವನ್ನು ಹಿಡಿದು ಬೇರೆಯವರು ಕೊಡುವ ವೃತ್ತನಾಮಗಳನ್ನು ಗ್ರಹಿಸಲಾಗಿದೆ. ಸಾಮಾನ್ಯವಾಗಿ ಛಂದಸ್ಸುಗಳ ಜನಪ್ರಿಯವಾದ ಹೆಸರುಗಳನ್ನು ಮಾನ್ಯಮಾಡುವಾಗ ಕೆಲವೊಮ್ಮೆ ಈ ಕ್ರಮದಲ್ಲಿ ಸ್ವಲ್ಪ ಏರುಪೇರಾಗ ಬಹುದು.

೩. ಯಾವುದಾದರೊಂದು ಛಂದಸ್ಸಿಗೆ ಹೆಸರು ಪೂರ್ವೋಕ್ತವಾದ ಮೂರು ಆಕರಗಳಲ್ಲಿಯೂ ದೊರೆಯದಿದ್ದಾಗ, ಮುಖ್ಯ ಛಂದೋವರ್ಗವನ್ನು ಸೂಚಿಸಿ ಪಕ್ಕದಲ್ಲಿ 'ಅನುಕ್ತ' ಎಂದು ಬರೆದಿದೆ (ಉದಾ : ಗು.ಪೇ. ೪೦ ; ನಂ.ಗೂ. ೪೦೨).

[1] ಪೀಠಿಕೆಯ ಈ ಭಾಗವನ್ನು ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ಮತ್ತು ಶ್ರೀ ಸೀತಾರಾಮ್ ಜಾಗೀರ್‌ದಾರ್ ಇವರುಗಳು ಬರೆದಿದ್ದಾರೆ.

